ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್

ಲೋಕಪಾಲ್ ಒಂದು ಚರ್ಚೆ

ಆಗಸ್ಟ್ 31, 2011 ಪುಟ 20 ರೂ. 14/-




ಜೋಗಯ್ಯ ಗೆಲ್ಲುವನೇ?




ಬೊಮ್ಮನ್ ಗೌಡ

ನೀವರಿಯದ ದುರಂತ ಕತೆ



ಲೋಕಾಯುಕ್ತರ ಮಗನೇ ರೆಡ್ಡಿಗಳ ಲಾಯರ್




ಅಡ್ನಾಡಿಗೆ ಮಂತ್ರಿಗಿರಿ



ಇಂಡಿಕಾ ಗ್ಯಾಂಗ್‌ಗೆ ಆಟೋರಾಜನೇ ಬಾಸ್

ಶಿವಣ್ಣ ಸೆಂಚುರಿ



• ಇಂದಿರಾ ಲಂಕೇಶ್

ಕಾಲೇಜಿನಲ್ಲಿ ಗಲಾಟೆಗಳು

ಲಂಕೇಶರು ಬಹಳ ಮುಂಗೋಪಿಯಾಗಿದ್ದರಿಂದ ಅವರು ಕಾಲೇಜಿನಲ್ಲಿ ಹಲವು ಗಲಾಟೆಗಳನ್ನು ಮಾಡಿಕೊಂಡರು. ನನ್ನ ಗೆಳತಿಯೊಬ್ಬಳು ಇವರ ವಿದ್ಯಾರ್ಥಿಯಾಗಿದ್ದಳು. ಒಂದು ದಿನ ಇವರು ಪಾಠ ಮಾಡುತ್ತಿದ್ದಾಗ ಈಕೆ ಕ್ಲಾಸ್‌ರೂಮಿನಲ್ಲಿ ಪೆನ್ ಬೀಳಿಸಿದಳಂತೆ. ಅಷ್ಟಕ್ಕೇ ಕೋಪಗೊಂಡ ಲಂಕೇಶರು "ಏನ್ರೀ, ಸರಿಯಾಗಿ ಪೆನ್ ಹಿಡಿದುಕೊಳ್ಳೋಕು ಬರಲ್ಲ ನಿಮಗೆ, ಕಾಲೇಜಿಗೆ ಬರ್ತೀರಿ" ಎಂದೆಲ್ಲ ಬೈದಿದ್ದರಂತೆ. ಆಕೆ ನನ್ನನ್ನು ಭೇಟಿಯಾದಾಗ "ಅಬ್ಬಬ್ಬ ಸಿಡುಕಾ ಅಂದ್ರೆ ಸಿಡುಕಾ. ಅವರನ್ನು ಮದುವೆಯಾಗಿ ಹೇಗಿರ್ತೀಯೋ" ಎಂದಿದ್ದಳು.

ಇನ್ನೊಮ್ಮೆ ಮುಂಬೈಯಿಂದಲೋ ದೆಹಲಿಯಿಂದಲೋ ಬಂದಿದ್ದ ಹುಡುಗಿಯೊಬ್ಬಳು ತಡವಾಗಿ ಕಾಲೇಜನ್ನು ಸೇರಿಕೊಂಡಿದ್ದಳು. ಆಕೆ ಲಂಕೇಶರಲ್ಲಿಗೆ ಬಂದು ತಾನು ಮಿಸ್ ಮಾಡಿಕೊಂಡಿದ್ದ ಭಾಗಗಳನ್ನು ಹೇಳಿಕೊಡಬೇಕೆಂದು ಕೇಳಿದಳು. ಅದಕ್ಕೆ ಇವರು ಒಪ್ಪಿಕೊಂಡರು. ಕಾಲೇಜು ಮುಗಿದ ನಂತರ ಆಕೆಯನ್ನು ಸ್ಟಾಫ್‌ರೂಮ್‌ಗೆ ಕರೆದುಕೊಂಡು ಬರಲು ಪ್ಯೂನ್‌ಗೆ ಹೇಳಿದರಂತೆ. ಆದರೆ ಅಷ್ಟು ಹೊತ್ತಿಗೆ ಆಕೆಯ ಕ್ಲಾಸ್‌ನಲ್ಲಿದ್ದ ಕೆಲ ವಿದ್ಯಾರ್ಥಿನಿಯರು "ಇದು ಶಿವಮೊಗ್ಗ, ಮುಂಬೈ ತರಹ ಅಲ್ಲ, ಹಾಗೆಲ್ಲ ಸ್ಟಾಫ್‌ರೂಮಿಗೆ ಹೋಗಬೇಡ" ಎಂದೆಲ್ಲ ಹೇಳಿ ಆಕೆಯ ತಲೆ ಕೆಡಿಸಿದ್ದರು. ಪರಿಣಾಮವಾಗಿ ಆಕೆ ಕ್ಲಾಸ್‌ರೂಮಿನಲ್ಲಿದ್ದರೂ "ನಾನು ಇರಲಿಲ್ಲ ಅಂತ ಅವರಿಗೆ ಹೇಳು" ಎಂದು ಪ್ಯೂನ್ ಅನ್ನು ಕಳುಹಿಸಿದಳು. ಆತನೋ ಬಂದು "ಸಾರ್, ಅವಳು ಇಲ್ಲೇ ಇದ್ದರೂ ಇರಲಿಲ್ಲ ಅಂತ ಹೇಳು ಎಂದಳು" ಎಂದನಂತೆ. ಲಂಕೇಶರ ಕೋಪ ನೆತ್ತಿಗೇರಿದೆ. ಆಕೆ ಇದ್ದಲ್ಲಿಗೆ ಹೋಗಿ "ಬಾ ಅಂದ್ರೆ ನೀನು ಯಾಕೆ ಬರಲಿಲ್ಲ" ಅಂತೆಲ್ಲ ಅವಳನ್ನು ಬೈದರಂತೆ. ಇದನ್ನು ಕೇಳಿಸಿಕೊಂಡ ಹುಡುಗರು "ಓ, ಇವನು ಯಾತಕ್ಕೋ ಕರೆದಿರಬೇಕು, ಇವಳು ಬರಲ್ಲ ಅಂದಿದ್ದಕ್ಕೆ ಹೀಗೆಲ್ಲ ಬೈತಿದ್ದಾನೆ" ಎಂದೇ ಅರ್ಥಮಾಡಿಕೊಂಡು ಲಂಕೇಶರಿಗೆ ಹೊಡೀಬೇಕು ಎಂದೆಲ್ಲ ಮಾತನಾಡಿಕೊಂಡಿದ್ದರಂತೆ.

ಲಂಕೇಶ್ ಕಾಲೇಜಿನಲ್ಲಿ ಇಂತಹ ಗಲಾಟೆಗಳನ್ನು ಮಾಡಿಕೊಳ್ಳುತ್ತಿದ್ದದ್ದನ್ನು ಗಮನಿಸಿದ ನನ್ನ ಅಪ್ಪಯ್ಯ ಗಾಬರಿಗೊಂಡರು. ಅದಕ್ಕೆ ಸರಿಯಾಗಿ ಅವರ ಮಿತ್ರರೂ "ನಿನ್ನ ಮಗಳನ್ನು ಗಿಣಿ ಸಾಕಿದಂತೆ ಸಾಕಿದ್ದೀಯ. ಆದರೆ ಈ ಹುಡುಗ ಒರಟ. ಅಂತಹವನಿಗೆ ನಿನ್ನ ಮಗಳನ್ನು ಯಾಕೆ ಕೊಡುತ್ತಿದ್ದೀಯ?" ಎಂದೆಲ್ಲ ಎಚ್ಚರಿಸಿದರು. ಕೊನೆಗೆ ಅಪ್ಪಯ್ಯ ಕೂಡ ಒಮ್ಮೆ ಬೆಂಗಳೂರಿಗೆ ಬಂದು "ಈ ಹುಡುಗ ಸರಿ ಇಲ್ಲ, ಈ ಮದುವೆ ಬೇಡ. ನಿನ್ನನ್ನು ಕಾಲೇಜಿಗೆ ಕಳುಹಿಸಿ ಓದಿಸುತ್ತೇನೆ. ಬೇರೆ ಒಳ್ಳೆ ಹುಡುಗನನ್ನು ನೋಡುತ್ತೇನೆ" ಎಂದು ನನಗೆ ಹೇಳಿದರು. ಆದರೆ ಅಷ್ಟು ಹೊತ್ತಿಗಾಗಲೇ ನಾನು ಮತ್ತು ಅವರು ಒಂದಾಗಿದ್ದೆವು. ಒರಟ ಲಂಕೇಶರನ್ನು ನಾನು ಪ್ರೀತಿಸಲಾರಂಭಿಸಿದ್ದೆ, ಅದಕ್ಕೇ ನಾನು ಲಂಕೇಶರನ್ನೇ ಮದುವೆ ಆಗೋದು ಅಂತ ಹಠ ಹಿಡಿದೆ.

ಆಗ ಸಹ್ಯಾದ್ರಿ ಕಾಲೇಜಿನಲ್ಲಿ ಬ್ರಾಹ್ಮಣರ ಗುಂಪು ಮತ್ತು ಲಿಂಗಾಯತ-ಒಕ್ಕಲಿಗರ ಗುಂಪು ಎಂದೂ ಗಲಾಟೆಗಳು ಪ್ರಾರಂಭವಾಗಿದ್ದವು. ಆಗ ಒಮ್ಮೆ ಕೆಲ ಹುಡುಗರು ಲಂಕೇಶರಿಗೆ ಸಮಾ ಹೊಡೆಯಲು ರಾತ್ರಿ ಮನೆಗೆ ನುಗ್ಗಲು ಪ್ರಯತ್ನಿಸಿದರು. ಅವರು ಹೊರಗಡೆ ಮಾಡುತ್ತಿದ್ದ ಗಲಾಟೆಯನ್ನು ಗಮನಿಸಿದ ಲಂಕೇಶ್ ಹಿತ್ತಲ ಕಾಂಪೌಂಡ್ ಹಾರಿ ಬೆಂಗಳೂರಿಗೆ ಬಂದರು.



ಲಂಕೇಶ್ ಮತ್ತು ಇಂದಿರಾ ಮದುವೆ...



ಅವತ್ತು ನಾನು ಕಾಲೇಜಿಗೆ ಚಕ್ಕರ್ ಹೊಡೆದು ಅವರೊಂದಿಗೆ ಐಸ್‌ಕ್ರೀಮ್ ತಿನ್ನಲು ಲೇಕ್‌ವ್ಯೂ ಹೋಟೆಲ್‌ಗೆ ಹೋಗಿದ್ದೆ. ಆದರೆ ಅದೇ ಎಂ.ಜಿ. ರಸ್ತೆಯಲ್ಲಿರುವ ಹಿಗ್ಗಿನ್ ಬೋಥಾಮ್ಸ್ ಪುಸ್ತಕದ ಅಂಗಡಿಗೆ ಬಂದಿದ್ದ ನನ್ನ ಭಾವ ಮಂಜುನಾಥ್ ಅವರು ನಮ್ಮನ್ನು ನೋಡಿದರು. ಮನೆಯಲ್ಲಿ ದೊಡ್ಡ ಗಲಾಟೆ ಆಯಿತು.

ಇತ್ತ ಕಾಲೇಜಿನಲ್ಲೂ ಗಲಾಟೆ, ಅತ್ತ ಮನೆಯಲ್ಲೂ ಗಲಾಟೆ.... ಇದೆಲ್ಲವನ್ನು ಕಂಡು ಲಂಕೇಶರು "ಆದಷ್ಟು ಬೇಗ ಮದುವೆ ಮಾಡಿ ಮುಗಿಸಿ" ಎಂದರು. 1960ರ ಮೇ 16ಕ್ಕೆ ಮದುವೆ ಎಂದು ನಿರ್ಧಾರವಾಯಿತು.

ಮದುವೆಯ ಆಮಂತ್ರಣ ಪತ್ರಗಳನ್ನು ಸಿದ್ಧಪಡಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಲಂಕೇಶಪ್ಪನವರಿಗೆ ಅದೇನೆನ್ನಿಸಿತೋ "ನನ್ನ ಹೆಸರನ್ನು ಬದಲಾಯಿಸಲಾ?" ಎಂದರು. ನಾನು "ಯಾಕೆ?" ಅಂದೆ. "ಎಲ್ಲರೂ ಲಂಕೇಶಪ್ಪ ಅಂದರೆ ರಾವಣ ಅಂತೆಲ್ಲ ಅಂತಾರೆ, ಅದಕ್ಕೆ" ಅಂದರು. "ಏನು ಬೇಡ. ನಿಮಗೆ ಈ ಹೆಸರೇ ಚೆನ್ನಾಗಿದೆ" ಅಂದೆ. ಆಗ ಅವರು "ಇರಲಿ ಬಿಡು" ಎಂದರು. ಆದರೆ ಆಮಂತ್ರಣ ಪತ್ರದಲ್ಲಿ ಅವರಿಗೆ ಇಟ್ಟಿದ್ದ ಲಂಕೇಶಪ್ಪ ಎಂಬ ಹೆಸರನ್ನು ಬರೀ ಲಂಕೇಶ ಎಂದು ಸ್ವಲ್ಪ ತಿದ್ದಿದರು.

****

ನನ್ನ ಅಪ್ಪಯ್ಯ ಮದುವೆಯ ಆಹ್ವಾನಪತ್ರವನ್ನು ಮುದ್ರಣಕ್ಕೆ ಕಳುಹಿಸುವ ಮುನ್ನ ಮತ್ತೊಮ್ಮೆ ನನಗೆ ಹೇಳಿದರು: "ನೋಡು. ಕೊನೆ ಬಾರಿಗೆ ಹೇಳುತ್ತಿದ್ದೇನೆ. ಈ ಹುಡುಗ ಬೇಡ. ಈ ಮದುವೆಯನ್ನು ಇಲ್ಲೇ ನಿಲ್ಲಿಸೋಣ." ಹದಿನಾರು ವರ್ಷಗಳ ಕಾಲ ನನಗೆ ತಂದೆ-ತಾಯಿ ಎಲ್ಲವೂ ಆಗಿ ನನ್ನನ್ನು ಪ್ರೀತಿಯಿಂದ ಬೆಳೆಸಿದ್ದ ಅಪ್ಪಯ್ಯನ ಇಚ್ಛೆಯನ್ನು ನಾನು ಮೀರುವುದಿಲ್ಲ ಎಂದು ಅವರು ಭಾವಿಸಿದ್ದರು. ಆದರೆ ನಾನು ಲಂಕೇಶರನ್ನೇ ಮದುವೆಯಾಗುತ್ತೇನೆ ಎಂದಾಗ ಅಪ್ಪಯ್ಯನಿಗೆ ನೋವು, ಸಿಟ್ಟು, ಬೇಸರ ಎಲ್ಲವೂ ಆಯಿತು.

ಆಗ ಅಪ್ಪಯ್ಯ "ಹಾಗಾದರೆ ಆತನೊಂದಿಗೆ ನಿನಗೆ ಎಷ್ಟೇ ಕಷ್ಟಬಂದರೂ ನನ್ನ ಸಹಾಯವನ್ನು ಎಂದೂ ಕೇಳಬಾರದು" ಎಂದು ಷರತ್ತು ಹಾಕಿದರು. ಅದಕ್ಕೆ ಒಪ್ಪಿಕೊಂಡೆ ಮತ್ತು ಆನಂತರದ ವರ್ಷಗಳಲ್ಲಿ ಲಂಕೇಶರ ಜೊತೆಗಿನ ಬದುಕಿನಲ್ಲಿ ಅದೆಷ್ಟೇ ನೋವು, ಕಷ್ಟ, ಸಮಸ್ಯೆಗಳು ಎದುರಾದರೂ ನಾನೆಂದೂ ನನ್ನ ಅಪ್ಪಯ್ಯನ ನೆರವನ್ನು ಕೇಳಲೇ ಇಲ್ಲ.

****

ಮೇ 16ರಂದು ಮದುವೆ ಎಂದು ಫಿಕ್ಸ್ ಆದಾಗ ನನ್ನ ಮೊದಲನೆ ಪಿಯುಸಿ ಪರೀಕ್ಷೆಗಳು ಪ್ರಾರಂಭವಾಗಿದ್ದವು. ಒಂದೇ ಒಂದು ಎಕ್ಸಾಮ್ ಬರೆದು ಶಿವಮೊಗ್ಗೆಗೆ ಹೋದೆ. ಎಲ್ಲಾ ಪರೀಕ್ಷೆಗಳನ್ನು ತೆಗೆದುಕೊಂಡಿದ್ದರೂ ನಾನು ಪಾಸ್ ಆಗುತ್ತಿರಲಿಲ್ಲ, ಅದು ಬೇರೆ ಮಾತು.

ಶಿವಮೊಗ್ಗೆಯ ಎನ್‌ಡಿವಿ ಹಾಸ್ಟೆಲ್‌ನಲ್ಲಿ ಮದುವೆಯ ಸಂಪ್ರದಾಯಗಳು ನಡೆಯುತ್ತಿದ್ದವು. ಅಷ್ಟು ಹೊತ್ತಿಗೆ ಲಂಕೇಶರ ಬಗ್ಗೆ ಮತ್ತು ಅವರ ಕೊನಗವಳ್ಳಿ ಜನರ ಬಗ್ಗೆ ರೋಸಿಹೋಗಿದ್ದ ಅಪ್ಪಯ್ಯ ಮದುವೆಯ ಅರೇ... ಮೆಂಟ್‌ಗಳನ್ನೆಲ್ಲ ಮಾಡಿ ಯಾವುದೋ ಹೋಟೆ... ಹೋಗಿಬಿಟ್ಟಿದ್ದರು. ಅಷ್ಟೇ ಅಲ್ಲ, ಮದುವೆಗೆಂದು ಅಪ್ಪಯ್ಯ ನನಗೆ ಕೊಟ್ಟಿದ್ದು ಒಂದು ತಾಳಿಯನ್ನು ... ಆದರೆ ಲಂಕೇಶರ ಮನೆಯವರು ಮೂರೆಳೆಯ ... ಬಳೆ ಎಲ್ಲ ಸೇರಿದಂತೆ ಹತ್ತು ತೊಲ ಬಂಗಾರ ಹಾಕಿ...

ಮದುವೆಯ ಹಿಂದಿನ ದಿನ ಮೂಗು ಚುಚ್ಚು... ಶಾಸ್ತ್ರವಿತ್ತು. ನನಗೆ ಮೂಗು ಬೊಟ್ಟು ಅಂದರೆ ಎ... ಇಷ್ಟವಿರಲಿಲ್ಲ, ಅದಕ್ಕೆ ಕಾರಣ ನನ್ನ ಮೊಂಡು ಮ... ಇರಬಹುದು. ಮೂಗು ಚುಚ್ಚಿಸಿಕೊಳ್ಳುವಂತೆ ಎ... ಒತ್ತಾಯ ಮಾಡುತ್ತಿದ್ದರು. ನಾನು ಇನ್ನೇನು ಮಣೆ ... ಕೂರಬೇಕು ಎನ್ನುವಾಗ ಅಲ್ಲಿಗೆ ಬಂದ ಲಂಕೇಶರು "ಅ... ಇಷ್ಟ ಇಲ್ಲ ಅಂದ್ರೆ ಯಾಕೆ ಒತ್ತಾಯ ಮಾಡ್ತೀರಿ?" ... ಕೇಳಿದರು. ಅವರು ಹಾಗಂದಿದ್ದೇ ತಡ ನಾನು ಅ... ಓಡಿಹೋದೆ. ನನ್ನನ್ನು "ಕಿಳ್ಳೆಕ್ಯಾತೆ ಇದ್ದಂಗಿದಾಳೆ, ಇ... ನನ್ನ ಮಗ ಅದು ಹೇಗೆ ಮೆಚ್ಚಿಕೊಂಡನೋ" ... ಜರಿಯುತ್ತಿದ್ದ ಅತ್ತೆ ದೇವೀರಮ್ಮನಿಗೆ ಕೋಪ ಬ... "ಮೂಗುಬೊಟ್ಟು ಇಲ್ಲದೆ ಅದೆಂತಹ ಮುತ್ತೈದೆತ..." ಎಂದು ಅವರು ಕಿಡಿಕಾರಿದರು.

ಈ ಮಧ್ಯೆ ಅರಿಶಿನ ಕಾರ್ಯವೂ ನಡೆದು ಅ... ಮುತ್ತೈದೆಯರು ಲಂಕೇಶರಿಗೆ ಸ್ನಾನ ಮಾಡಿಸಿದರು. ಅ... ಭಾಗವಹಿಸಿದ ನನ್ನ ಚಿಕ್ಕಮ್ಮ ಕಮಲ "ಕಬ್ಬಿಣ ಅ... ಕಬ್ಬಿಣದ ಮೈ, ಒಂದೊಂದು ತೊಡೆ ಮರದ ... ಇದ್ದಂಗಿವೆ" ಎಂದರು.

ಮದುವೆ ಕಾರ್ಯಗಳನ್ನು ನಡೆಸಿಕೊಡಲು ಬ... ಪುರೋಹಿತರಿಗೆ ಒಂದು ಸಮಸ್ಯೆ ಎದುರಾಯಿತು. ಮ... ಮಾಡಿಸಲು ಅವರು ಲಂಕೇಶರ ಕರಡಿಗೆ... ಹುಡುಕಾಡುತ್ತಿದ್ದರು. ಆದರೆ ಇವರ ಬಳಿ ದೇವರೇ ಇ... ಆಗ ಅದ್ಯಾರೋ ಎಲ್ಲಿಂದಲೋ ಒಂದು ಲಿಂಗ... ತಂದರು. ಅದನ್ನು ಅಂಗೈಯಲ್ಲಿ ಸರಿಯ... ಹಿಡಿದುಕೊಳ್ಳಲೂ ಇವರಿಗೆ ಬರುತ್ತಿರಲಿಲ್ಲ, ಇವ... ಪೂಜೆ ಕಾರ್ಯಗಳನ್ನು ಮಾಡಿಮುಗಿಸುವ ಹೊತ್ತಿ... ಪುರೋಹಿತರಿಗೆ ಸಾಕುಸಾಕಾಗಿ ಹೋಗಿತ್ತು.


ಅವತ್ತು ಇನ್ನೊಂದು ಸೋಜಿಗದ ಸಮಸ್ಯೆ... ಎದುರಾಗಿತ್ತು, ಆ ಪುರೋಹಿತರಿಗೆ ಇವರ ಹೆ... ಹೇಳಲೇ ಬರುತ್ತಿರಲಿಲ್ಲ, ಪ್ರತಿಬಾರಿ ಆತ ತಡವರಿಸ... ಆಗೆಲ್ಲ ಇವರೇ "ಲಂಕೇಶಪ್ಪ" ಎಂದು ಸೇರಿಸುತ್ತಿ...

ಹೀಗೆ ಎಲ್ಲ ನಡೆಯುತ್ತಿದ್ದಾಗ ಕಾಲುಂಗುರ ಶಾ... ಎದುರಾಯಿತು. ಸಾಮಾನ್ಯವಾಗಿ ಗಂಡಿನ ಕಡೆಯ... ಕಾಲುಂಗುರವನ್ನು ತರುತ್ತಾರಾದ್ದರಿಂದ ನಮ್ಮ ಕಡೆಯ... ದೇವೀರಮ್ಮನಲ್ಲಿ ಕಾಲುಂಗುರವನ್ನು ಕೇಳಿದರಂತೆ. ... ಅವರು "ಮೂಗಿನಲ್ಲಿಲ್ಲದಿರೋ ಮುತ್ತೈದೆತನ ಕಾಲು... ದಿಂದ ಬರುತ್ತಾ? ಕಾಲುಂಗುರ ಯಾಕ್ ಬೇಕ್ ಹೋ..." ಎಂದು ಬೈದು ಕಳುಹಿಸಿದರು.

ಲಂಕೇಶರು ತಮ್ಮ ಎರಡನೆ ಅಕ್ಕ ಬಸಕ್ಕಳನ್ನು ತ... ಇಷ್ಟಪಡುತ್ತಿದ್ದರು. ಆಕೆಯನ್ನು ಸಣ್ಣಕ್ಕ ಎಂದೇ ಕರೆಯು... ಸಣ್ಣಕ್ಕನಿಗೆ ತನ್ನ ಮಗಳನ್ನೇ ತನ್ನ ತಮ್ಮನಿಗೆ ಕೊಡಬೇ... ಆಸೆ ಇತ್ತು. ಆದರೆ ಆಕೆಯನ್ನು ಮದುವೆಯ... ನಿರಾಕರಿಸಿದ್ದ ಲಂಕೇಶ್ ನನ್ನನ್ನು ಮದುವೆಯಾಗಿದ್ದು ಸ... ತುಂಬಾ ನಿರಾಶೆ ಮೂಡಿಸಿತ್ತು. ಆದ್ದರಿಂದ ಆಕೆ ಮ... ದಿನ ತನ್ನ ತಮ್ಮನಿಗೆ ಮಾತ್ರ ಆರತಿ, ಅಕ್ಷತೆ ... ಹಾರೈಸಿದರೇ ವಿನಃ ನನಗೆ ಆರತಿಯನ್ನೂ ಎ... ಅಕ್ಷತೆಯನ್ನೂ ಹಾಕಿ ಹಾರೈಸಲಿಲ್ಲ.

ನಾವು ಮದುವೆ ಆದ ದಿನ ಮಳೆ ಭೋರೆಂದು ಸು... ತ್ತಿದ್ದದ್ದು ಇನ್ನೂ ಚೆನ್ನಾಗಿ ನೆನಪಿದೆ...

(ಮುಂದುವರೆಯು...



ಲಂಕೇಶರು ಮುದ್ರಿಸಿದ ಮದುವೆ ಆಹ್ವಾನ ಪತ್ರಿಕೆ.

Indira
Lankesha

NANDIBASAVESWARA NILAYA
PARK EXTENSION
DURGIGUDI, SHIMOGA

Dear

Our marriage comes off on 16th May 1960 at Shimoga. Your presence is requested.

Yours affectionately.
Lankesha

ನೋ ಕಾಮೆಂಟ್ಸ್

ಕರ್ನಾಟಕವನ್ನು ಈಗ 'ದಕ್ಷಿಣ ಭಾರತದ ಬಿಹಾರ್' ಎಂದು ಬಣ್ಣಿಸಿದರೆ ಈಗಿನ ಬಿಹಾರಕ್ಕೆ ಅವಮಾನ ಮಾಡಿದಂತೆ.

- ತೆಹಲ್ಕಾ ಪತ್ರಿಕೆಯಲ್ಲಿ

ಶಾಂತಿ ಎಂಬುದು ಲೋಕಲ್ ಮಾರ್ಕೆಟ್ಟಿನಲ್ಲಿ ಖರೀದಿಸುವಂತಹ ವಸ್ತು ಅಲ್ಲ ಎಂಬುದನ್ನು (ಪಶ್ಚಿಮ ಬಂಗಾಲದ ಮುಖ್ಯಮಂತ್ರಿ) ಮಮತಾ ಬ್ಯಾನರ್ಜಿ ಅವರು ಅರ್ಥಮಾಡಿಕೊಳ್ಳಬೇಕು.

- ಆಕಾಶ್, ರಾಜ್ಯ ಮಾವೋವಾದಿ ಸಮಿತಿಯ ಕಾರ್ಯದರ್ಶಿ

ನಾನು ನನ್ನ ಸಮಯದ ಶೇ 20 ಭಾಗವನ್ನು ಭ್ರಷ್ಟಾಚಾರವನ್ನು ತೊಡೆದುಹಾಕಲು ವ್ಯಯಿಸುತ್ತೇನೆ. ಉಳಿದ ಶೇ 80 ಭಾಗ ಸಮಯವನ್ನು ರಾಜ್ಯದ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಲು ವ್ಯಯಿಸುತ್ತೇನೆ.

- ನೂತನ ಲೋಕಾಯುಕ್ತ ನ್ಯಾ. ಶಿವರಾಜ್ ಪಾಟೀಲ್

ಈ ವಿಚಿತ್ರಕ್ಕೆ ಏನೆನ್ನಬೇಕು?



ಜಗತ್ತಿನ ಜನಸಂಖ್ಯೆಯಲ್ಲಿ ಶೇ ಐದಕ್ಕಿಂತ ಕಡಿಮೆ ಜನ ಅಮೆರಿಕದಲ್ಲಿದ್ದಾರೆ. ಆದರೂ ಅವರೆಲ್ಲ ಜಗತ್ತಿನ ಶೇ 25ರಷ್ಟು ನೈಸರ್ಗಿಕ ಸಂಪನ್ಮೂಲಗಳನ್ನು ಕಬಳಿಸುತ್ತಾರೆ. ಜಗತ್ತಿನ ಒಟ್ಟು ಜಿಡಿಪಿ 14 ಟ್ರಿಲಿಯಲ್ ಡಾಲರ್‌ಗಳಾಗಿದ್ದರೆ ಅಮೆರಿಕದ ಜಿಡಿಪಿ 14 ಟ್ರಿಲಿಯನ್ ಡಾಲರ್‌ಗಳು. ಜಗತ್ತಿನ 6.7 ಬಿಲಿಯನ್ ಜನಸಂಖ್ಯೆಯಲ್ಲಿ ಶೇ 40 ರಷ್ಟು ಜನ ಚೀನಾ ಮತ್ತು ಭಾರತದಲ್ಲಿ ವಾಸಿಸುತ್ತಿದ್ದಾರೆ. ಆದರೂ ಈ ಎರಡು ದೇಶಗಳ ಜನ ಶೇ 5 ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಜಗತ್ತಿನ ನೈಸರ್ಗಿಕ ಸಂಪನ್ಮೂಲವನ್ನು ಉಪಯೋಗಿಸುತ್ತಾರೆ. ಅಂತರರಾಷ್ಟ್ರೀಯ ಆರ್ಥಿಕ ಸಂಚಲನಕ್ಕೆ ಮುಖ್ಯ ಕಾರಣ ಅಮೆರಿಕ ತನ್ನ ಆದಾಯಕ್ಕಿಂತಲೂ ಹೆಚ್ಚು ಹಣವನ್ನು ಪೋಲು ಮಾಡುವುದೇ ಕಾರಣ ಎಂದೂ ಮತ್ತು ಇತ್ತೀಚಿನತನಕ ಅಮೆರಿಕವು ಹೀಗೆ ಪೋಲು ಮಾಡುವುದಕ್ಕೆಂದು ಜಗತ್ತಿನ ಇತರೆ ದೇಶಗಳಿಂದ ಪ್ರತಿದಿನ ಬರೋಬ್ಬರಿ ಮೂರು ಬಿಲಿಯನ್ ಡಾಲರ್‌ಗಳನ್ನು ಸಾಲವಾಗಿ ಪಡೆಯುತ್ತಿದ್ದ... ಜೋಸೆಫ್ ಸ್ಟಿಗ್ಲಿಜ್ ಎಂಬುವವರು ತರ್ಕಿಸಿದ್ದಾರೆ. ಈ ಸಾ... ಮೊತ್ತದಲ್ಲಿ ಮೂರನೆ ಎರಡು ಭಾಗವು ಅಭಿವೃದ್ಧಿ ಹೊಂದುತ್ತಿ... ದೇಶಗಳಿಂದಲೇ ಬರುತ್ತಿತ್ತು. ಅಮೆರಿಕವು ಚೀನಾ ಮ... ಭಾರತದಲ್ಲಿ ಹೂಡಿರುವ ಬಂಡವಾಳಕ್ಕಿಂತ ಎರಡು ಪಟ್ಟ... ಈ ದೇಶಗಳು ಅಮೆರಿಕ ಸರ್ಕಾರದ ಬಾಂಡ್‌ಗಳಲ್ಲಿ ಹೂಡಿ... ಭಾರತ ತನ್ನ ಜಿಡಿಪಿಯ ಮೂರನೆ ಒಂದು ಭಾಗವನ್ನು ಉಳಿತಾ... ಮಾಡಿದರೆ ಚೀನಾವು ತನ್ನ ಜಿಡಿಪಿಯ ಶೇ 40 ರಷ್ಟು ಉಳಿತಾ... ಮಾಡುತ್ತದೆ. ಆದರೆ ಅಮೆರಿಕವು ಯಾವುದೇ ಉಳಿತಾಯ ಮಾಡದೆ ಆದಾಯಕ್ಕಿಂತ ಹೆಚ್ಚು ಹಣವನ್ನು ಪೋಲುಮಾಡುತ್ತದೆ. ಅಂದರೆ ಅಮೆರಿ... ಪ್ರಜೆಗಳು ತಮ್ಮ ಆದಾಯಕ್ಕಿಂತ ಹೆಚ್ಚು ಹಣವನ್ನು ವೆಚ್ಚಮಾಡಲೆಂ... ಜಗತ್ತಿನ ಇತರೆ ದೇಶಗಳ ಜನ ಹಣ ಉಳಿತಾಯ ಮಾಡುತ್ತಿದ್ದಾರೆ.

- ಪರನ್‌ಜೋಯ್ ಗುಹ ಥಾಕುರ್ತಾ, ಆರ್ಥಿಕ ...

ಲೋಕಪಾಲ್ v/s ಜನಲೋಕಪಾಲ್



• ಗೌರಿ ಲಂಕೇಶ್
editorlankesh@gmail.com

ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆ ಅವರ ...ಾಟ ಪುನರ್ ಆರಂಭಗೊಂಡಿದೆ. ಕಳೆದ ಏಪ್ರಿಲ್ ...ಲ್ಲಿ ಅಣ್ಣಾ ಮತ್ತವರ ತಂಡದ ಸುತ್ತ ನೆರೆದಿದ್ದ ...ೇ ನಗರವಾಸಿ ಮಧ್ಯಮವರ್ಗದ ಜನರೇ ಇವತ್ತೂ ...ನ್ನು ಸುತ್ತುವರಿದಿದ್ದಾರೆ. ಅವರಲ್ಲಿ ಬಹಳಷ್ಟು ಜನ ... ಅವರ ತಂಡ ರೂಪಿಸಿರುವ ಜನಲೋಕಪಾಲ್ ...ನ್ನಾಗಲಿ ಯುಪಿಎ ಸರ್ಕಾರ ಸಿದ್ಧಪಡಿಸಿರುವ ...ಪಾಲ್ ಕರಡನ್ನಾಗಲಿ ಓದಿರಲಿಕ್ಕಿಲ್ಲ, ಆದರೂ ಅವರ ...ುಲ್ಲಿ ಅಣ್ಣಾ ತಂಡ ರೂಪಿಸಿರುವ ಜನಲೋಕಪಾಲ್ ...ನ್ನ ಸರ್ಕಾರ ಜಾರಿಗೆ ತರಲೇಬೇಕು ಮತ್ತು ಮುಂದಿನ ...ಲ್ಲಿ ಈ ಕಾಯಿದೆಯಿಂದಾಗಿ ದೇಶದಲ್ಲಿ ಭ್ರಷ್ಟಾಚಾರ ...ರ್ಣ ನಿರ್ನಾಮವಾಗುತ್ತದೆ.

... ಮಧ್ಯಮ ವರ್ಗ ಒಂದು ರೀತಿಯ ಭ್ರಮೆಯಲ್ಲಿ ...ಿತ್ತಿರುವಂತಿದೆ. ಒಮ್ಮೆಯೂ ರೈತರ, ಬಡವರ, ...ದಲಿತರ ಪರವಾಗಿ ಪ್ರತಿಭಟಿಸದ, ಬೀದಿಗಿಳಿಯದ ...ರ್ಗ ಇವತ್ತು ಭ್ರಷ್ಟಾಚಾರ ನಿರ್ಮೂಲನೆಗೆ ತೊಡೆತಟ್ಟಿ ...ದೆ. ಜಾಗತೀಕರಣದ ಪ್ರಕ್ರಿಯೆಯಿಂದಾಗಿ ...ಾಗಿರುವ ಈ ನೂತನ ವರ್ಗ ಉದ್ಯೋಗ, ಹಣ



...ಸ್ಥಾನಮಾನಗಳು ಕಂಡಿರುವುದು ಎಷ್ಟು ನಿಜವೋ ...ಜಾಗತೀಕರಣದಿಂದಾಗಿ ಇವತ್ತು ನಮ್ಮ ದೇಶದ ...ಸದಲ್ಲೇ ಅತಿಹೆಚ್ಚು ಬಡವರು ಸೃಷ್ಟಿಯಾಗಿದ ...ದರ ಬಗ್ಗೆ ನಮ್ಮ ಸರ್ಕಾರ ದಮನಕಾರಿ ಅಂಶಗಳನ್ನು ...ೊಳ್ಳುತ್ತಿರುವ ಬಗ್ಗೆ ಅಷ್ಟೇ ಕುರುಡಾಗಿರುವುದೂ ...ಮಾತ್ರವಲ್ಲ, ಈ ವರ್ಗಕ್ಕೆ ಪ್ರಜಾತಂತ್ರದ ಬಗ್ಗೆ ...ಯಾಗಲಿ, ತಾಳ್ಮೆಯಾಗಲಿ ಇಲ್ಲವೇ ಇಲ್ಲ. ಅದರಲ್ಲೂ ...ಾತಿ ಮತ್ತು ಪ್ರಾತಿನಿಧಿಕ ಸಿದ್ಧಾಂತದ ಬಗ್ಗೆ ಈ ...ಲ್ಲಿ ಅಸಹನೆ ತುಂಬಿತುಳುಕುತ್ತಿದೆ.

...ವತ್ತು ಭಾರತದ ಜನಸಂಖ್ಯೆಯಲ್ಲಿ ಮೂರನೇ ಒಂದು ...ದ, ಮುಖ್ಯವಾಗಿ ನಗರವಾಸಿಗಳಾದ ಈ ಮಧ್ಯಮ ... ರಾಜಕಾರಣಿಗಳನ್ನು ಕಂಡರಾಗುವುದಿಲ್ಲ, ಬದಲಾಗಿ ... ಕೆಲಸ ಮಾಡುವ ಕಾರ್ಪೊರೇಟ್ ಕಂಪನಿಗಳು ...ಾರ್ಯನಿರ್ವಹಿಸುತ್ತವೋ ಹಾಗೆಯೇ ದೇಶ ಕೂಡ ...ಕೆಂದು ಭಾವಿಸುವ ವರ್ಗವಿದು. ಓರ್ವ ಬರಹ ... ಹೇಳಿರುವಂತೆ "ಈ ವರ್ಗಕ್ಕೆ ಎಟಿಎಂ ಮೆಷಿನ್ ...ಹಣ ಬರುವಷ್ಟೇ ಸುಲಭವಾಗಿ ಬದಲಾವಣೆಯೂ ...ಕು. ಆದರೆ ಮೀಸಲಾತಿ, ಪ್ರಾತಿನಿಧ್ಯ ಎಂದೆಲ್ಲ ... ಬದಲಾವಣೆ ಆಗುವುದಿಲ್ಲ" ಎಂಬ ನಿಲುವು ...ಿ ವರ್ಗದ್ದು. ಹಾಗೆಯೇ ಮತ್ತೊಬ್ಬ ಲೇಖಕರು ...ಿರುವಂತೆ "ಎಂದೂ ಚುನಾವಣೆ ಸಮಯದಲ್ಲಿ ...ಮತ ಚಲಾಯಿಸುವ ಗೋಜಿಗೆ ಹೋಗದ ಈ ... ರಾಜಕೀಯ ಬದಲಾವಣೆ ಮಾತ್ರ ಬೇಕು."

...ವತ್ತು ಅಣ್ಣಾ ಹಜಾರೆ ಅವರ ಸುತ್ತ ಇರುವ ಈ ... ಭ್ರಷ್ಟಾಚಾರದ ವಿರುದ್ಧ ಇರುವ ಆಕ್ರೋಶ ...ದದ್ದು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ...ಗಳನ್ನು ಅರ್ಥ ಮಾಡಿಕೊಳ್ಳದೆ ತಮ್ಮ ಹೋರಾಟವು ...ಲ್ಲಿ ದೊಡ್ಡ ಕ್ರಾಂತಿಗೆ ನಾಂದಿ ಹಾಡುತ್ತದೆ ಎಂಬ ...ುಲ್ಲಿ ಅವರೆಲ್ಲ ಇರುವುದೂ ಅಷ್ಟೇ ನಿಜ.

...ಂತಹ ಭ್ರಮೆ ಜನರಲ್ಲಿ ಹೆಚ್ಚಾಗುವಂತೆ ಕೇಂದ್ರ ... ನಡೆದುಕೊಂಡಿದೆ. ಆರಂಭದಲ್ಲಿ ಅಣ್ಣಾ ಅವರಿಗೆ ...ಬೆಂಬಲವನ್ನು ಕಂಡು ದಂಗಾದ ಕೇಂದ್ರ ಸರ್ಕಾರ ...ಾಗದ್ದನ್ನು ಮಾಡುವುದಾಗಿ ಅಣ್ಣಾ ತಂಡಕ್ಕೆ ಭರವಸೆ ನೀಡಿತು. ಅಣ್ಣಾ ತಂಡದ ಈ ಯಶಸ್ಸನ್ನು ಕಂಡು ತಾವೂ ಲಾಭ ಪಡೆದುಕೊಳ್ಳಲು ಮುಂದಾದ ಬಾಬಾ ರಾಮದೇವ್ ಎಂಬ ಢೋಂಗಿ ಸ್ವಾಮಿ ಮತ್ತು ಆತನ ಬೆನ್ನಿಗೆ ನಿಂತಿದ್ದ ಚೆಡ್ಡಿಗಳನ್ನು ಬಗ್ಗುಬಡಿಯಲು ಪೊಲೀಸರಿಂದ ಲಾಠಿಪ್ರಹಾರ ನಡೆಸಿ ತನ್ನ ಸರ್ವಾಧಿಕಾರಿ ಗುಣವನ್ನು ಪ್ರದರ್ಶಿಸಿತು. ಇದಾದನಂತರ ಅಣ್ಣಾ ತಂಡದೊಂದಿಗೆ ಲೋಕಪಾಲ್ ಕರಡು ಕುರಿತಂತೆ ನಡೆದ ಸಭೆಗಳಲ್ಲಿ ಸರಿಯಾಗಿ ಚರ್ಚೆ ನಡೆಸದೆ ಅಣ್ಣಾ ತಂಡವನ್ನು ಅವಹೇಳನ ಮಾಡುವುದರಲ್ಲೇ ಮಗ್ನವಾಗಿತ್ತು. ಕೊನೆಗೆ ಬೇಕಾಬಿಟ್ಟಿಯಾಗಿ ಕರಡನ್ನು ರಚಿಸಿ "ಇದನ್ನು ಬೇಕಿದ್ದರೆ ಒಪ್ಪಿಕೊಳ್ಳಿ ಇಲ್ಲವೆಂದರೆ ಬಿಡಿ" ಎಂಬ ಧೋರಣೆಯನ್ನು ತೋರಿತು.

ಈ ಎಲ್ಲ ಗೊಂದಲಗಳ ಮಧ್ಯೆ ಅಣ್ಣಾ ತಂಡ ಮತ್ತು ಸರ್ಕಾರಿ ತಂಡ ರೂಪಿಸಿರುವ ಕರಡಿನ ಬಗ್ಗೆ ಸರಿಯಾದ ಚಿಂತನೆ, ಚರ್ಚೆ, ಅಧ್ಯಯನ ಸಾಧ್ಯವೇ ಆಗಿಲ್ಲ. ಈ ಎರಡೂ ಕಡೆಯವರು ಮತ್ತು ಇತರರು ಏನನ್ನು ಹೇಳುತ್ತಿದ್ದಾರೆ ಎಂದು ಯಾರೂ ಕೇಳಿಸಿಕೊಳ್ಳುವ ಗೋಜಿಗೆ ಹೋಗಿಲ್ಲ. ಆದ್ದರಿಂದ "ಪ್ರಧಾನಮಂತ್ರಿಯನ್ನು ಯಾಕೆ ಸೇರಿಸಬಾರದು?", "ಅಣ್ಣಾ ತಂಡ ಹೇಳುತ್ತಿರುವುದೆಲ್ಲ ಸರಿ ಇದೆಯಲ್ಲವಾ?" ಎಂಬ ಗೊಂದಲಗಳು ಜನರಲ್ಲಿ ಮನೆ ಮಾಡಿವೆ. ಆದ್ದರಿಂದ ಈ ಅಣ್ಣಾ ತಂಡ ಮತ್ತು ಸರ್ಕಾರ ರೂಪಿಸಿರುವ ಕರಡುಗಳ ಪ್ರಮುಖ ಅಂಶಗಳತ್ತ ಗಮನ ಹರಿಸುವುದು ಅವಶ್ಯಕವಾಗಿದೆ.

ಮೊದಲಿಗೆ ಯುಪಿಎ ಸರ್ಕಾರ ರೂಪಿಸಿರುವ ಕರಡನ್ನೇ ತೆಗೆದುಕೊಳ್ಳೋಣ. ಯುಪಿಎ ಸರ್ಕಾರ ಈ ಮಸೂದೆಯನ್ನು ಮೊದಲು ಪ್ರಸ್ತಾಪಿಸಿದಾಗ ಭ್ರಷ್ಟಾಚಾರ ಮಾಡಿದ ಪ್ರಧಾನಿಯನ್ನೂ ಬಲಿ ಹಾಕಬಲ್ಲಂಥ ಕರಡು ಇದು ಎಂದು ಪ್ರಚಾರ ಮಾಡಿತ್ತು. ಆದರೆ ಅಂತಹ ಅಂಶ ಈ ಕರಡಿನಲ್ಲಿ ಇಲ್ಲವೇ ಇಲ್ಲ ಮಾತ್ರವಲ್ಲ ಇದೊಂದು ಕಣ್ಣೊರೆಸುವ ತಂತ್ರವಾಗಿದೆ.

ನಮ್ಮ ಅಂಕಣಕಾರ ಶಿವಸುಂದರ್ ಅವರು ಈ ಹಿಂದೆ ಬರೆದಿದ್ದಂತೆ ಸರ್ಕಾರ ರೂಪಿಸಿರುವ ಲೋಕಪಾಲ್ ಮಸೂದೆ ಪ್ರಕಾರ:

* ಲೋಕಪಾಲ್ ಸಂಸ್ಥೆ ತಾನೇ ಖುದ್ದಾಗಿ ಯಾರಮೇಲೂ ತನಿಖೆ ನಡೆಸುವಂತಿಲ್ಲ. ಲೋಕಸಭೆಯ ಸ್ಪೀಕರ್ ಮತ್ತು ರಾಜ್ಯಸಭೆಯ ಅಧ್ಯಕ್ಷ ಯಾರ ಬಗ್ಗೆ ದೂರು ಕೊಡುತ್ತಾರೋ ಅವರ ಬಗ್ಗೆ ಮಾತ್ರ ತನಿಖೆ ನಡೆಸಬಹುದು. ಇವೆರಡೂ ಸ್ಥಾನಗಳಿಗೆ ಆಳುವ ಪಕ್ಷದ ಪ್ರತಿನಿಧಿಯೇ ಆಯ್ಕೆಯಾಗುತ್ತಾರಾದ್ದರಿಂದ ಸ್ಪೀಕರ್ ಅಥವಾ ಪ್ರಧಾನಿಯ ಬಗ್ಗೆ ಇರಲಿ, ತಮ್ಮದೇ ಪಕ್ಷದ ಸದಸ್ಯನ ಬಗ್ಗೆ ತನಿಖೆ ನಡೆಸುವಂತೆ ಅವರು ಆಗ್ರಹಿಸುವುದನ್ನು ಊಹಿಸಲೂ ಸಾಧ್ಯವಿಲ್ಲ. ಹೆಚ್ಚೆಂದರೆ ಆ ಮಸೂದೆ ವಿರೋಧಿ ಪಕ್ಷಗಳನ್ನು ಮಟ್ಟ ಹಾಕುವ ಆಯುಧವಾಗುತ್ತದೆಯಷ್ಟೆ.

* ಈ ಲೋಕಪಾಲ್ ಸಂಸ್ಥೆಗೆ ಕನಿಷ್ಠ ಒಂದು ಪೊಲೀಸ್ ಸ್ಟೇಷನ್ನಿಗೆ ಇರುವ ಅಧಿಕಾರವೂ ಇಲ್ಲ. ಇದು ಯಾರ ಬಗ್ಗೆಯೂ ಪ್ರಥಮ ಮಾಹಿತಿ ವರದಿ (ಎಫ್.ಐ.ಆರ್) ಅನ್ನೂ ದಾಖಲಿಸಿಕೊಳ್ಳುವಂತಿಲ್ಲ. ಅದು ಏನಿದ್ದರೂ ಒಂದು ಸಲಹಾ ಸಮಿತಿಯ ಮಾದರಿಯದ್ದು. ತನ್ನ ವಿಚಾರಣೆಯ ವರದಿಯನ್ನು ಅದು ಸಂಬಂಧಪಟ್ಟ ಸಂಸ್ಥೆಗೆ ಕೊಡಬೇಕು. ಆ ಸಂಸ್ಥೆ ಆ ವರದಿಯನ್ನು ಸ್ವೀಕರಿಸಬಹುದು ಅಥವಾ ತಿರಸ್ಕರಿಸಲೂಬಹುದು.

* ಕ್ಯಾಬಿನೆಟ್ ಮಂತ್ರಿಗಳ ಬಗೆಗಿನ ತನಿಖಾ ವರದಿಯ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಪರಮಾಧಿಕಾರ ಪ್ರಧಾನಿಗೆ ಇರುತ್ತದೆ ಮತ್ತು ಪ್ರಧಾನಿ ಅಥವಾ ಇತರ ಸಂಸತ್ ಸದಸ್ಯರ ಮೇಲಿನ ದೂರಿನ ಮೇಲೆ ತೀರ್ಮಾನ ತೆಗೆದುಕೊಳ್ಳುವ ಪರಮಾಧಿಕಾರ ಸಂಸತ್ತಿಗೆ ಇರುತ್ತದೆ. ಹೀಗೆ ಇಲ್ಲಿಯೂ ಭಕ್ಷಕರ ಕೈಯಲ್ಲೇ ನ್ಯಾಯ ರಕ್ಷಣೆಯ ಜವಾಬ್ದಾರಿಯನ್ನು ನೀಡಲಾಗಿದೆ.

* ಈ ಲೋಕಪಾಲ್ ಪರಿಧಿಯಿಂದ ರಕ್ಷಣಾ ಇಲಾಖೆ ಮತ್ತು ವಿದೇಶಾಂಗ ಇಲಾಖೆಯನ್ನು ಹೊರಗಿಡಲಾಗಿದೆ. ಎಲ್ಲರಿಗೂ ಗೊತ್ತಿರುವಂತೆ ಪ್ರತಿವರ್ಷ ರಕ್ಷಣಾ ಇಲಾಖೆಗೆ ಕೇಂದ್ರ ಸರ್ಕಾರ ಬಜೆಟ್ಟಿನಲ್ಲಿ ಹೆಚ್ಚು ಹಣವನ್ನು ನೀಡುತ್ತದೆ. ಹಾಗೆಯೇ ಈಗಾಗಲೇ ಬೋಫೋರ್ಸ್ ಮತ್ತು ಶವಪೆಟ್ಟಿಗೆ ಹಗರಣಗಳು ಸಾಬೀತು ಪಡಿಸಿರುವಂತೆ ಈ ರಕ್ಷಣಾ ಇಲಾಖೆಯಲ್ಲಿ ಹಲವಾರು ಹಗರಣಗಳು ನಡೆಯುತ್ತವೆ. ಆದರೂ ಈ ಇಲಾಖೆಯನ್ನು ಲೋಕಪಾಲರ ಪರಿಧಿಗೆ ತಂದಿಲ್ಲ.


* ಈ ಲೋಕಪಾಲಕ್ಕೆ ನಿವೃತ್ತ ನ್ಯಾಯಮೂರ್ತಿಗಳು ಮಾತ್ರ ಸದಸ್ಯರಾಗಬಹುದು. ಅವರನ್ನು ನೇಮಕ ಮಾಡುವ ಪ್ರಕ್ರಿಯೆಯಲ್ಲಿ ವಿರೋಧ ಪಕ್ಷಗಳು ಇರುತ್ತಾವಾದರೂ ಅಂತಿಮ ತೀರ್ಮಾನ ಆಳುವ ಸರ್ಕಾರದ್ದೇ ಆಗಿರುತ್ತದೆ. ಹೀಗಾಗಿ ನಿವೃತ್ತಿಯ ನಂತರದ ಆಶ್ರಯಕ್ಕಾಗಿ ವೃತ್ತಿಯಲ್ಲಿರುವಾಗಲೇ ನ್ಯಾಯಮೂರ್ತಿಗಳು ಆಳುವ ಸರ್ಕಾರದ ಪರ ವಾಲುವ ಸಾಧ್ಯತೆ ಇದ್ದೇ ಇರುತ್ತದೆ.

ಇದೆಲ್ಲದರ ಅರ್ಥ ಯುಪಿಎ ಸರ್ಕಾರ ಮಂಡಿಸಿರುವ ಲೋಕಪಾಲ್ ಕರಡು ಹಲ್ಲಿಲ್ಲದ ಹಾವು ಮಾತ್ರವಲ್ಲ ಅದಕ್ಕೆ ಭುಸುಗುಡುವುದೂ ಕಷ್ಟ.

ಈಗ ಸರ್ಕಾರಿ ತಂಡ ರಚಿಸಿರುವುದಕ್ಕೆ ಪ್ರತಿಯಾಗಿ ಹಜಾರೆ ಮತ್ತು ಅವರ ತಂಡ ರೂಪಿಸಿರುವ ಜನಲೋಕಪಾಲ್ ಕರಡು ಏನನ್ನುತ್ತದೆ ಎಂದು ನೋಡೋಣ. ಜನಲೋಕಪಾಲ್‌ನಲ್ಲಿ ನ್ಯಾಯಮೂರ್ತಿಗಳು ಮಾತ್ರವಲ್ಲದೆ ಜನಪ್ರತಿನಿಧಿಗಳು ಇರಬೇಕೆಂದೂ, ಲೋಕಪಾಲಕ್ಕೆ ಯಾರ ಬಗ್ಗೆಯಾದರೂ ತಾನೇ ಸ್ವಯಂ ತನಿಖೆ ಮಾಡುವ ಹಾಗೂ ಶಿಕ್ಷಿಸುವ ಅಧಿಕಾರವೂ ಇರಬೇಕೆಂದೂ ಅವರ ಕರಡು ಆಗ್ರಹಿಸುತ್ತದೆ.

ಇದರ ಇತರೆ ಪ್ರಮುಖ ಅಂಶಗಳು ಹೀಗಿವೆ:

* ಲೋಕಪಾಲ್ ಸಂಸ್ಥೆ ಸಂಪೂರ್ಣವಾಗಿ ಸ್ವತಂತ್ರವಾಗಿದ್ದು ಯಾರಿಗೂ ಉತ್ತರದಾಯಿ ಆಗಿರುವುದಿಲ್ಲ. ಇದರ ಅರ್ಥ ನಮ್ಮ ಸಂಸತ್ತು ಮತ್ತು ನ್ಯಾಯಾಂಗಕ್ಕೆ ಇರುವ ಸ್ವಾತಂತ್ರಕ್ಕಿಂತ ಹೆಚ್ಚು ಸ್ವಾತಂತ್ರ್ಯ ಮತ್ತು ಅಧಿಕಾರ ಲೋಕಪಾಲ್ ಸಂಸ್ಥೆಗೆ ಇರುತ್ತದೆ. ನಮ್ಮ ಪ್ರಜಾತಂತ್ರ ದೇಶದಲ್ಲಿ ಈ ಲೋಕಪಾಲ್ ಯಾರಿಗೂ ವಿವರಣೆ ಅಥವಾ ಉತ್ತರ ಕೊಡಬೇಕಿಲ್ಲ ಎಂದರೆ ಅದು ಪ್ರಜಾತಂತ್ರದ ಆಶಯಗಳಿಗೆ ವಿರುದ್ಧವಾಗಿರುತ್ತದೆ. ಅದೆಷ್ಟು ಸರಿ?



* ನಮ್ಮ ದೇಶದಲ್ಲಿ ಇವತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ 77 ಲಕ್ಷ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಅವರೆಲ್ಲರ ಮೇಲೆ ನಿಗಾ ಇಡುವ ಅಧಿಕಾರವು ಕೇವಲ ಹನ್ನೊಂದು ಜನರಿರುವ ಲೋಕಪಾಲ್ ಸಂಸ್ಥೆಗೆ ಇರುತ್ತದೆ. ಮೇಲುನೋಟಕ್ಕೇ ಇದು ಅಸಾಧ್ಯ ಎಂದು ಯಾರಿಗೆ ಬೇಕಾದರೂ ಅರ್ಥವಾಗುತ್ತದೆ.

* ಪ್ರಜಾತಂತ್ರದ ಆಶಯವೇ ಎಲ್ಲ ವರ್ಗ, ಜಾತಿ, ಸಮುದಾಯಗಳಿಗೆ ಸಮಾನ ಪ್ರಾತಿನಿಧ್ಯ ಒದಗಿಸುವುದು. ಆದರೆ ಈ ಜನಲೋಕಪಾಲ್ ಸಂಸ್ಥೆ ಅಂತಹ ಯಾವ ಆಶಯವನ್ನೂ ತನ್ನ ಕರಡಿನಲ್ಲಿ ವ್ಯಕ್ತಪಡಿಸಿಲ್ಲ. ಬದಲಾಗಿ ಈ ದೇಶದ ಅತಿ ಬುದ್ಧಿವಂತರೂ, ಜ್ಞಾನಪೀಠ ಪ್ರಶಸ್ತಿ ವಿಜೇತರೂ, ನೊಬೆಲ್ ಪ್ರಶಸ್ತಿ ಪಡೆದಿರುವವರೂ ಇತ್ಯಾದಿ 'ಮೇಧಾವಿ'ಗಳು ಮಾತ್ರ ಇರಬಹುದಾದ ಸಂಸ್ಥೆಯಾಗಿ ಜನಲೋಕಪಾಲ್‌ಅನ್ನು ಕಲ್ಪಿಸಿಕೊಳ್ಳಲಾಗಿದೆ. ಅಂದರೆ ಪರೋಕ್ಷವಾಗಿ ಈ ದೇಶದ ಬಹುಸಂಖ್ಯಾತ ಜನರನ್ನು ತನ್ನೊಳಗೆ ತರುವ ಆಶಯವನ್ನೇ ಇದು ಹೊಂದಿಲ್ಲ.

* ಇವತ್ತು ಕಾರ್ಪೊರೇಟ್ ಕಂಪನಿಗಳೂ ಜನಲೋಕಪಾಲ್ ಕರಡನ್ನು ಬೆಂಬಲಿಸುತ್ತಿರುವುದರ ಹಿಂದೆ ಒಂದು ಮಸಲತ್ತು ಅಡಗಿದೆ. ಅದೇನೆಂದರೆ ಈ ಜನಲೋಕಪಾಲ್ ಸಂಸ್ಥೆಗೆ ನಮ್ಮ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗದ ಮೇಲೆ ನಿಗಾ ಇಡುವ ಸ್ವಾತಂತ್ರವಿರುತ್ತದೆಯೇ ಹೊರತು ಬಂಡವಾಳಶಾಹಿ ಕಂಪನಿಗಳ ಮೇಲೆ ಯಾವ ನಿಯಂತ್ರಣವೂ ಇರುವುದಿಲ್ಲ. ಅಂದರೆ ಈ ಕಾಯ್ದೆಯಿಂದಾಗಿ ಕಾರ್ಪೊರೇಟ್ ಕಂಪನಿಗಳಿಗೆ ಲಾಭವಾಗಲಿದೆ. ಈಗ ಅವರ ಬೆಂಬಲ ಯಾಕೆ ಎಂದು ಅರ್ಥವಾಯಿತೇ?!

* ನಮ್ಮ ಪ್ರಜಾಸತ್ತೆಯಲ್ಲಿ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳಿಗೆ ಅಧಿಕಾರವನ್ನು ನೀಡಲಾಗಿದ್ದರೂ ಅವುಗಳ ಮೇಲೆ ಜನರ ಪ್ರಾತಿನಿಧಿಕ ಉಸ್ತುವಾರಿ ಇರುವ ಸಾಂಕೇತಿಕ ರಚನೆಗಳಾದರೂ ಇವೆ. ಆದರೆ ಜನಲೋಕಪಾಲ್ ಕರಡಿನಲ್ಲಿ ಅದು ತನ್ನನ್ನು ಈ ಮೂರು ಸಂಸ್ಥೆಗಳಿಗೂ ಮೇಲಿರುವ ಪರಮೋಚ್ಚ ಸಂಸ್ಥೆಯಾಗಿ ಕಲ್ಪಿಸಿಕೊಳ್ಳುತ್ತದೆ. ಆದರೆ ಅದಕ್ಕೆ ಪ್ರತಿಯಾಗಿ ಜನತೆಯ ಪ್ರಾತಿನಿಧಿಕ ಉಸ್ತುವಾರಿಯನ್ನಾದರೂ ತನ್ನ ಮೇಲೆ ಇರಿಸಿಕೊಳ್ಳುವ ಯಾವುದೇ ಸೂಚನೆಯನ್ನು ಒಪ್ಪಿಕೊಳ್ಳುತ್ತಿಲ್ಲ.

ಇದೆಲ್ಲದರ ಅರ್ಥ ಏನೆಂದರೆ ಇತ್ತ ಸರ್ಕಾರಿ ತಂಡ ರಚಿಸಿರುವ ಲೋಕಪಾಲ್ ಕರಡಿಗೆ ಹಲ್ಲುಗಳೇ ಇಲ್ಲವಾಗಿದ್ದರೆ ಅತ್ತ ಅಣ್ಣಾ ತಂಡ ರಚಿಸಿರುವ ಜನಲೋಕಪಾಲ್ ಕರಡು ಒಂದು ರಾಕ್ಷಸನನ್ನು ಸೃಷ್ಟಿಸುವ ಎಲ್ಲ ಲಕ್ಷಣಗಳನ್ನು ಹೊಂದಿದೆ....

ನಮ್ಮ ದೇಶದಲ್ಲಿರುವ ಪ್ರಜಾಪ್ರಭುತ್ವ ವ್ಯವಸ್ಥೆ ಅದ್ಭುತವಾಗಿದೆ ಎಂಬುದನ್ನು ಯಾರೂ ಒಪ್ಪುವುದಿಲ್ಲ. ಆದರೆ ಈ ವ್ಯವಸ್ಥೆಯಲ್ಲಿನ ದೋಷಗಳನ್ನು ಸರಿಪಡಿಸಲು ಇವತ್ತು ಅಣ್ಣಾ ಹಜಾರೆ ಅವರ ತಂಡ ಹಾಗು ನಮ್ಮ ಮಧ್ಯಮವರ್ಗ ಆಗ್ರಹಿಸುತ್ತಿರುವಂತೆ ಒಂದು ಸ್ವತಂತ್ರ ಸಂಸ್ಥೆಯನ್ನು ಸೃಷ್ಟಿಸಿ, ಅದಕ್ಕೆ ಮಿತಿ ಇಲ್ಲದ ಅಧಿಕಾರವನ್ನು ನೀಡಿ, ಅದು ಯಾರಿಗೂ ಉತ್ತರದಾಯಿ ಅಲ್ಲ ಎನ್ನುವುದು ಇತ್ತ ಪ್ರಜಾಸತ್ತೆಯೂ ಅಲ್ಲ, ಅತ್ತ ಎಲ್ಲ ದೋಷಗಳನ್ನು ನಿವಾರಿಸಬಲ್ಲ ಮಾಯಾದಂಡವೂ ಅಲ್ಲ. ಅಣ್ಣಾ ಹಜಾರೆಯವರು ಪ್ರಾಮಾಣಿಕರು ನಿಜ. ಆದರೆ ಅವರ ತಂಡ ರಚಿಸಿರುವ ಕರಡಿನಲ್ಲಿರುವ ದೋಷಗಳಿಗೆ ಅಣ್ಣಾ ಕುರುಡರಾಗಿದ್ದಾರೆ....

ತಣ್ಣಗಿದ್ದ ಕರಾವಳಿ ಭಾಗದಲ್ಲಿ ಮೊದಲ ಬಾರಿಗೆ ಕೋಮುಗಲಭೆ ಹುಟ್ಟಿಸಿದ್ದೇ ಸದಾನಂದ ಗೌಡ. ಅವರ ಬದುಕಿನ ಗ್ರಾಫು ಬ್ರಾಹ್ಮಣ್ಯದ ವಿಷ ಮತ್ತು ಮುಸ್ಲಿಂ ದ್ವೇಷದ ಒಟ್ಟು ಮೊತ್ತದಂತಿದೆ. ಸುಳ್ಯ ತಾಲ್ಲೂಕು ಮಂಡೆಕೋಲು ದೇವರಗುಡ್ಡದ ವೆಂಕಪ್ಪಗೌಡ ಮತ್ತು ಕಮಲಾ ದಂಪತಿಗಳ ಮೂರನೇ ಮಗನಾದ ಸದಾನಂದ ಹೆಸರಿಗಷ್ಟೇ ಗೌಡ. ಕೃತಿ, ಬುದ್ಧಿ, ಆಚರಣೆ ಮತ್ತು ಕಾರ್ಯಾಚರಣೆಯಲ್ಲಿ ಆತ ಪಕ್ಕಾ ವೈದಿಕ ಮತ್ತು ಆರೆಸ್ಸೆಸ್ ಸರ್ಪ!

• ರಾ.ಸೋಮನಾಥ್

ಗೌಡರನ್ನು ಸಾರಾಸಗಟಾಗಿ ಬುಟ್ಟಿಗೆ ಹಾಕಿಕೊ… 1980ರಲ್ಲಿ ದೀವಿಯನ್ನು ಸುಳ್ಯ ಬಿಜೆಪಿ ಅಧ್ಯಕ್ಷನನ್ನಾ… ನಂತರ ದ.ಕ. ಜಿಲ್ಲಾ ಉಪಾಧ್ಯಕ್ಷನನ್ನಾಗಿಸಿದರು. 198… ಸೊರಕೆ ವಿರುದ್ಧ ಪುತ್ತೂರಿಗೆ ನಿಂತ ದೀವಿ ಆತನಕ… ಹೆಸರನ್ನು ಡಿ.ವಿ.ಸದಾನಂದ ಎಂದೇ ಚಾಲ್ತಿಯಲ್ಲಿ…

ಮಂಡ್ಯದ ಗೌಡ್ರನ್ನ ಕಂಡಿದ್ದೀವಿ. ಹಾಸನದ ಗೌಡ್ರನ್ನ ನೋಡಿದ್ದೀವಿ. ದೇವೇಗೌಡ್ರು ಗೊತ್ತು, ಮಾದೇಗೌಡ್ರೂ ಗೊತ್ತು. ಆದ್ರೆ ಈ ಗೌಡನ್ನ ಹೆಂಗಪ್ಪಾ ನಂಬೋದು? ಇವನ್ಯಾರೋ ಬ್ರಾಹ್ಮಣರ ಪೈಕಿ ಗೌಡ್ನೇ ಇರ್ಬೇಕು...!'


ಮೈಸೂರಿನ ಯಾವುದೋ ಹರಟೆಕಟ್ಟೆಯಲ್ಲಿ ಸ್ಥಳೀಯ ಪತ್ರಕರ್ತರೊಬ್ಬರು ಕೇಳಿಸಿಕೊಂಡ ಮಾತಿದು. ಅಲ್ಲಿಗೆ ಮುಖ್ಯಮಂತ್ರಿ ಸದಾನಂದ ಗೌಡರ ಬಗ್ಗೆ ಹಳೇ ಮೈಸೂರು ಪ್ರಾಂತದ ವಕ್ಕಲಿಗರಿಗೆ ಎಂಥ ಭಾವನೆಯಿದೆ ಎಂಬುದಕ್ಕೆ ಇದಕ್ಕಿಂತ ಬೇಕೇ?

ಮುಖ್ಯಮಂತ್ರಿಯಾಗಿ ಪ್ರಮಾಣ ಮಾಡಿದ ಮರುದಿನಕ್ಕೆ ವಿಜಯನಗರದ ಆದಿಚುಂಚನಗಿರಿ ಮಠಕ್ಕೆ ಬಂದು ಬಾಲಗಂಗಾಧರನಾಥರ ಕಾಲಿಗೆ ಸಾಷ್ಟಾಂಗ ಬಿದ್ದ ಕೆಲಕಾಲ ಪಬ್ಲಿಕ್ ಪ್ರಾಸಿಕ್ಯೂಟರ್ ಆದರೂ ಆರೆಸ್ಸೆಸ್ ವ್ಯಾಮೋಹ ಮತ್ತು ಮುಸ್ಲಿಂ ದ್ವೇಷದ ಪಿತ್ಥ ನೆತ್ತಿಗೇರಿತ್ತಲ್ಲ; ಸರ್ಕಾರಿ ಹುದ್ದೆ ತೊರೆದದ್ದೇ ಮತ್ತೆ ಸುಳ್ಯಕ್ಕೆ ಬಂದು ವಕೀಲಿ ವೃತ್ತಿಗಿಳಿದಿದ್ದರ ಹಿಂದಿರುವ ಉದ್ದೇಶವೇ ಬೇರೆಯಾಗಿತ್ತು.

ಅದು ಕರಾವಳಿಯನ್ನು ವಿಷಯುಕ್ತಗೊಳಿಸುವ ಆರೆಸ್ಸೆಸ್ ಹುನ್ನಾರದ ಮೊದಲ ಹಂತವಾಗಿತ್ತು. ಇನ್ನೂ ತಮಾಷೆಯೆಂದರೆ ಪುತ್ತೂರು-ಸುಳ್ಯದಲ್ಲಿ ತಾನೊಬ್ಬ ಸಾಚಾ, ಪ್ರಾಮಾಣಿಕ ಎಂದೆಲ್ಲ ಪೋಜು ಕೊಡುತ್ತಿದ್ದ ದೀವಿ ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಬಿಎಸ್ಸಿ ಮಾಡುವಾಗಲೇ ಪ್ರಯೋಗಶಾಲೆಯ ಮೈಕ್ರೋಸ್ಕೋಪ್ ಕದ್ದು ಗುಜರಿಗೆ ಮಾರಿಕೊಂಡಿದ್ದ!

ಅದು ಆರೆಸ್ಸೆಸ್ ಪಿತ್ಥ ಅಪ್ಪೊತ್ತಿಗೆ ಕರಾವಳಿಯುದ್ದಕ್ಕೂ ಹುತ್ತ ಬಿಟ್ಟು ಹೊರಬಂದಂತೆ ಕಲ್ಲಡ್ಕ ಪ್ರಭಾಕರ ಭಟ್ಟ, ಪುತ್ತೂರಿನ ಉರಿಮಜಲು ರಾಂಭಟ್ಟ, ಯೋಗೀಶ್ ಭಟ್ಟ, ಕಾರವಾರದಲ್ಲಿ ಅನಂತ ಹೆಗಡೆ, ಉಡುಪಿಯ ಆಚಾರ್ಯ, ದತ್ತಾತ್ರೇಯ ಭಟ್ಟ ಹೊಸಬಾಳೆ, ಕಾಗೇರಿ ವಿಶ್ವೇಶ್ವರ ಹೆಗಡೆ, ವಾಮನಾಚಾರ್ಯ ನರಹರಿ, ರಾಮಾಜೋಯಿಸಾ ಹೀಗೆ ಪಾಖಂಡಿ ಬ್ರಾಹ್ಮಣರ ವಿಷವರ್ತುಲದಿಂದ ಕೂಡಿದ್ದವರ ಪೈಕಿ ದೀವಿ ಹುಟ್ಟಾ ಶಕುನಿಯೆಂದೇ ಕುಖ್ಯಾತನಾದ ಉರಿಮಜಲು ರಾಂಭಟ್ಟನ ಶಿಷ್ಯ.

ಆತನಕ ಕರಾವಳಿಯಲ್ಲಿ ಬ್ರಾಹ್ಮಣ ಸಾಮ್ರಾಜ್ಯ ಸ್ಥಾಪನೆಯಾಗಿರಲಿಲ್ಲ. ದ.ಕ.ದ



ಬೊಮ್ಮನ್‌ಗೌಡ ನೀವರಿಯದ ದುರಂತ ಕತೆ

ಸದಾನಂದಗೌಡರ ಪಕ್ಕ ಶಕುನಿ ಸೋಮಣ್ಣ ಹಲ್ಲುಕಿರಿಯುತ್ತಾ ನಿಂತಿದ್ದ ಫೋಟೋ ನೋಡಿದಾಗಲೇ ಬೆಂಗಳೂರಿನ ವಕ್ಕಲಿಗರಿಗೆ ಇದೊಂದು ಕಪಟ ನಾಟಕವೆಂಬುದು ಗ್ಯಾರಂಟಿಯಾಗಿ ಹೋಯ್ತು. ಮಂಡ್ಯದ ಕೆಲ ಬಿಜೆಪಿ ಹುಡುಗರು ಸದಾನಂದಗೌಡ ಶಾಸಕಾಂಗ ನಾಯಕರಾದದ್ದು ಗೊತ್ತಾಗಿದ್ದೇ ಟಿವಿ ಕ್ಯಾಮೆರಾಮನ್‌ಗಳನ್ನು ಕರೆಸಿ "ಸದಾನಂದ ಗೌಡ್ರು ನಮ್ಮ ವಕ್ಕಲಿಗರು. ನಮ್ಮವರೇ ಮುಖ್ಯಮಂತ್ರಿಯಾಗಿದ್ದು ಇಡೀ ಮಂಡ್ಯ ಜಿಲ್ಲೆಗೆ ಹೆಮ್ಮೆಯ ಸಂಗತಿ..." ಎಂದಿದ್ದನ್ನು ಕಂಡು ವಕ್ಕಲಿಗರಿಗೆ ಇರಿಸುಮುರಿಸಾಗಿದ್ದು ಬಿಟ್ಟರೆ ಸಂಭ್ರಮ ಪಡಗರ ಕಂಡಿದ್ದೇ ಕಮ್ಮಿ.

ತಾನೊಬ್ಬ ವಕ್ಕಲಿಗನೆಂದು ಎಷ್ಟೇ ಸರ್ಕಸ್ ಮಾಡಿದರೂ ಬಯಲುಸೀಮೆಯ ವಕ್ಕಲಿಗರಿಗೆ ಸದಾನಂದಗೌಡ ಹೆಸರಿಗಷ್ಟೇ ಗೌಡ ಹೊರತು ಕೃತಿಯಲ್ಲಿ ಪಕ್ಕಾ ವೈದಿಕ. ಇವತ್ತು ಆದಿಚುಂಚನಗಿರಿ ಸ್ವಾಮಿಯ ಕಾಲಿಗೆ ಬಿದ್ದ ಮಾತ್ರಕ್ಕೆ ಹಾಸನ-ಮಂಡ್ಯದ ಗೌಡರು ಯಾಮಾರುವುದಿಲ್ಲ. ಕೇಸರಿ ಪಂಚೆ ತೊಟ್ಟು ದತ್ತಮಾಲೆ ಧರಿಸಿ ಭಜನೆಗೆ ನಿಂತ, ಜನ್ಮಾಪಿ ಪೇಜಾವರ ಸ್ವಾಮಿಯ ಪಾದಪೂಜೆ ಮಾಡಿಕೊಂಡೇ ಬಂದ, ಚಿಡ್ಡಿತೊಟ್ಟು ಲಾಠಿ ಹೊತ್ತು ಆರೆಸ್ಸೆಸ್ ಬೈಠಕ್ಕು ಮಾಡಿದ, ಇಡೀ ಕರಾವಳಿಯನ್ನೇ ಕೋಮುಗಲಭೆಗೆ ಅಣಿಗೊಳಿಸಿದ, ತನ್ಮೂಲಕ ಬ್ರಾಹ್ಮಣ ಸಾಮ್ರಾಜ್ಯದ ಬಾಡಿಗೆ ಬಂಟನಾದ ಸದಾನಂದ ಗೌಡರನ್ನು ಯಾವ ಕಾರಣಕ್ಕೆ ವಕ್ಕಲಿಗರು ತಮ್ಮವನೆಂದು ನಂಬಲು ಸಾಧ್ಯ?



ದತ್ತಮಾಲೆ ಕಿತಾಪತಿಯಲ್ಲಿ ದೀವಿ

ಆರೆಸ್ಸೆಸ್ ಸರ್ಪ

ತಣ್ಣಗಿದ್ದ ಕರಾವಳಿ ಭಾಗದಲ್ಲಿ ಮೊದಲ ಬಾರಿಗೆ ಕೋಮುಗಲಭೆ ಹುಟ್ಟಿಸಿದ್ದೇ ಸದಾನಂದ ಗೌಡ. ಅವರ ಬದುಕಿನ ಗ್ರಾಫು ಬ್ರಾಹ್ಮಣ್ಯದ ವಿಷ ಮತ್ತು ಮುಸ್ಲಿಂ ದ್ವೇಷದ ಒಟ್ಟು ಮೊತ್ತದಂತಿದೆ. ಸುಳ್ಯ ತಾಲ್ಲೂಕು ಮಂಡೆಕೋಲು ದೇವರಗುಡ್ಡದ ವೆಂಕಪ್ಪಗೌಡ ಮತ್ತು ಕಮಲಾ ದಂಪತಿಗಳ ಮೂರನೇ ಮಗನಾದ ಸದಾನಂದ ಹೆಸರಿಗಷ್ಟೇ ಗೌಡ. ಕೃತಿ, ಬುದ್ಧಿ ಆಚರಣೆ ಮತ್ತು ಕಾರ್ಯಾಚರಣೆಯಲ್ಲಿ ಆತ ಪಕ್ಕಾ ವೈದಿಕ ಮತ್ತು ಆರೆಸ್ಸೆಸ್ ಸರ್ಪ!

ಪುತ್ತೂರಿನ ಕೆಯ್ಯೂರು ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಅದೇ ಪುತ್ತೂರಿನ ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಮುಗಿಸುವ ಹೊತ್ತಿಗೆ ಮನುಷ್ಯನಾಗೇ ಇದ್ದ ಸದಾನಂದ ಆರೆಸ್ಸೆಸ್ ಕ್ರಿಮಿಯಾಗಿ ರೂಪುಗೊಂಡಿದ್ದು ಉಡುಪಿಯ ವೈಕುಂಠ ಬಾಳಿಗಾ ಕಾನೂನು ಕಾಲೇಜಿನಲ್ಲಿ. ಹುಟ್ಟಾ ಆರೆಸ್ಸೆಸ್ ಚಡ್ಡಿಗಳಾದ ಸಾರಸ್ವತ ಬ್ರಾಹ್ಮಣರೇ ನಡೆಸುವ ಉಡುಪಿಯ ವೈಕುಂಠ ಬಾಳಿಗಾ ಕಾಲೇಜು ಆ ಕಾಲಕ್ಕೆ ಆರೆಸ್ಸೆಸ್ ಹುತ್ತದಂತಿತ್ತು. ಕಾನೂನು ಓದುವಾಗಲೇ ದೀವಿ ಆರೆಸ್ಸೆಸ್ ವಿದ್ಯಾರ್ಥಿ ಘಟಕವಾದ ಎಬಿವಿಪಿಗೆ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿಯಾದರು. ಮುಂದೆ ಉತ್ತರ ಕನ್ನಡ ಶಿರಸಿಯಲ್ಲಿ

ಕ್ರಿಮಿನಲ್ ಲಾಯರ್

ದೀವಿಯ ವಕೀಲಿಕೆ ಕೂಡ ಎಂಥ ಕ್ರಿಮಿನಲ್ ತಲೆಗಾರಿಕೆಯಾಗಿತ್ತೆಂದರೆ, ಯಾರೋ ಬಡರೈತನೊಬ್ಬ ತನ್ನ ತೋಟಕ್ಕೆ ಇನ್ಯಾರೋ ಬೇಲಿ ಹಾಕಿದ್ದಾರೆಂದು ನ್ಯಾಯ ಕೊಡಿಸಿ ಎಂದು ಬಂದರೆ 'ಬರೀ ಕೇಸು ಹಾಕಿ ಏನು ಪ್ರಯೋಜನ? ನೀನು ಮೊದಲು ಅವರನ್ನು ಹೊಡೆದು ಬಾ. ತಾಕತ್ತಿಲ್ಲ ಅಂದ್ರೆ ನೀನೇನು ಪಂಡನಾ? ಒಬ್ಬ ಹಿಂದೂ ಆಗಿ ಹುಟ್ಟಿ ಹೇಡಿಯಂತೆ ಏಕೆ ಬದುಕುತ್ತೀಯಾ? ನಾಲ್ಕು ಜನ ಸೇರಿಕೊಂಡು ಮೊದಲು ಅವರ ಮೇಲೆ ಅಟ್ಯಾಕ್ ಮಾಡು. ಆನಂತ್ರಾನೇ ನನ್ನತ್ರ ಬಾ. ಪೊಲೀಸು, ಕೋರ್ಟು ಎಲ್ಲಾ ನೋಡಿಕೊಳ್ಳೋಕೆ ನಾನಿಲ್ವಾ?'

ಇದು ದೀವಿಯ ವಿಷಬುದ್ಧಿಗೆ ಸಣ್ಣ ಸ್ಯಾಂಪಲಷ್ಟೇ.

ಬಂಟರು, ಬಿಲ್ಲವರು, ಕಡಲತೀರದ ಮೊಗವೀರರು ಇನ್ನೂ ಕಾಂಗ್ರೆಸ್, ಜನತಾ ಪರಿವಾರದಲ್ಲೇ ಇದ್ದರು. ಸಂಖ್ಯೆಯಲ್ಲಿ ಇವರೆಲ್ಲರಿಗಿಂತಲೂ ಅಧಿಕ ಸಂಖ್ಯೆಯಲ್ಲಿದ್ದದ್ದು ಸುಳ್ಯ ಪುತ್ತೂರು, ಬೆಳ್ತಂಗಡಿ ಮತ್ತು ಕೊಡಗಿನ ಮಡಿಕೇರಿ ತಾಲ್ಲೂಕು ಸಂಪಾಜೆ, ಕಲ್ಲುಗುಂಡಿ ಭಾಗದಲ್ಲಿ ಗಣನೀಯವಾಗಿದ್ದ ಅರೆಭಾಷೆ ವಕ್ಕಲಿಗರು.

ದೀವಿ ಗೌಡನಾದ

ಬಯಲುಸೀಮೆಯ ವಕ್ಕಲಿಗರಿಗೂ ಕೊಡಗು-ಕರಾವಳಿ ಭಾಗದ ಅರೆಭಾಷೆ ಗೌಡರಿಗೂ ಅಜಗಜಾಂತರ ವ್ಯತ್ಯಾಸ. ಮಂಡ್ಯ-ಹಾಸನದ ಗೌಡರಿಗೆ ಆದಿ ಚುಂಚನಗಿರಿ ಕಾಲಭೈರವ ಮನೆದೇವರಾದರೆ, ಅರೆಭಾಷೆ ಗೌಡರು ತಿರುಪತಿ ತಿಮ್ಮಪ್ಪನ ಆರಾಧಕರು. ಮನೆ ಭಾಷೆ ಕೂಡ ತುಳು, ಕೊಡವ ಮಿಶ್ರಿತ. ಶುದ್ಧ ಭೂತಾರಾಧಕರು. ಕೊಡವರಿಗೂ ಅರೆಭಾಷೆಗೌಡರಿಗೂ ತಲೆತಲಾಂತರದ ದುಷ್ಮನಿಯಿದೆ. ಕೊಡವರು ಬ್ರಿಟಿಷರ ಹಿತೈಷಿಗಳಾದರೆ ಗೌಡರು ಬ್ರಿಟಿಷರ ವಿರುದ್ಧ ಐತಿಹಾಸಿಕ 'ಕಾಟಕ್ಕಾಯಿ' ದಂಗೆಯ ಮೂಲಕ ಬಂಡೆದ್ದವರು.

ಬಹುಶಃ ಈ ಕಾರಣಕ್ಕೋ ಏನೋ ಅರೆಭಾಷೆ ಗೌಡರನ್ನು ಕೂರ್ಗಿಗಳು 'ಕೊಟ್ಟೆಪ್ಪಾಳೆ' ಎಂದು ಹೀಯಾಳಿಸುತ್ತಾರೆ. ಅದರರ್ಥ ನಂಬಿಕೆಗೆ ಅರ್ಹನಲ್ಲದವನೆಂದು!

ಬ್ರಿಟಿಷರ ನೆಂಟಸ್ತಿಕೆಯಿದ್ದ ಕೊಡವರು ಮತ್ತು ಆಂಗ್ಲರ ವಿರುದ್ಧ ಬಂಡೆದ್ದ ವಕ್ಕಲಿಗರನ್ನು ಬ್ರಾಹ್ಮಣ್ಯದ ನೆರಳಲ್ಲೇ ಒಗ್ಗೂಡಿಸಿದ್ದು ಆರೆಸ್ಸೆಸ್ ಪಾಖಂಡಿಗಳು. ಇದರ ಮುಂಚೂಣಿಯಲ್ಲಿದ್ದದ್ದು ಇದೇ ಸದಾನಂದ ಗೌಡ. ಅರೆಭಾಷೆ

ಆದರೆ ವಕ್ಕಲಿಗರ ಓಟು ದೋಚಬೇಕಲ್ಲ; ಅದಕ್ಕೆ … ಹೆಸರನ್ನು ಸದಾನಂದಗೌಡ ಎಂದು ಬದಲಿಸಿಕೊಂಡ…

1994ರಲ್ಲಿ ಮತ್ತು 1999ರಲ್ಲಿ ಒಂದಲ್ಲ ಎ… ಬಾರಿ ಪುತ್ತೂರಿಗೆ ಎಮ್ಮೆಲ್ಲೆಯಾಗಿ ಗೆದ್ದ ದೀವಿಯ ಖ… ಯಾವ ಮಟ್ಟಕ್ಕಿತ್ತೆಂದರೆ ಆತನಕ ಪ್ರಶಾಂತವಾಗಿದ್ದ … ಪೇಟೆಗೆ ಮುಸ್ಲಿಂ ದ್ವೇಷದ ಬೆಂಕಿ ಹಚ್ಚಿದ್ದೇ ಈತ ಎ… ಜಗಜ್ಜಾಹೀರಾಯಿತು. ಕರಾವಳಿಯಲ್ಲಿ ಹಿಂದೆಂದೂ ಕಾ… ಕೋಮುಗಲಭೆಗಳು ಸುಳ್ಯ ಪುತ್ತೂರಿನ ಮೂಲಕ… ಶುರುವಾಗಿದ್ದವು. ತನಗೆ ಪಾಕಿಸ್ತಾನದ ಮುಸ್ಲಿಂ ಉಗ್ರರಿ… ಕೊಲೆ ಬೆದರಿಕೆ ಇದೆಯೆಂದೂ ದಾವೂದ್ ಇಬ್ರಾ… ಕಡೆಯವರು ಇವತ್ತಲ್ಲ ನಾಳೆ ತನ್ನನ್ನು ಕೊಲ್ಲುವ… ಗ್ಯಾರಂಟಿಯೆಂದೂ ದೀವಿ ಬಹಿರಂಗವಾಗಿ ಭಾ… ಮಾಡುತ್ತಿದ್ದ.


ಪೇಜಾವರರ ಪಟ್ಟ ಶಿಷ್ಯ!

1980ರಿಂದ 1990ರ ತನಕ ಪುತ್ತೂರು-ಸುಳ್ಯಗ… ಪದೇಪದೇ ಕೋಮುಗಲಭೆಗಳಾದವು. ಆಗ ಪೊಲಿ… ಮೂಲಗಳೇ ದಾಖಲಿಸಿದಂತೆ ಕೆಲವೆಡೆ ದೀವಿ ಗ್ಯಾ…

ಹೋರಾಟಗಾರ ಹಿಮಕರ್‌ರನ್ನು ಲಾಕಪ್ಪಿಗೆ ಹಾಕಿಸಿದ್ದು

ಆರೆಸ್ಸೆಸ್ ಪಿತ್ಥ ನೆತ್ತಿಗೇರಿದರೆ ಮನುಷ್ಯ ಎಂಥ ಕ್ರೂರಿಯಾಗುತ್ತಾನೆಂಬುದಕ್ಕೆ ಮಂಗಳೂರಿಗೆ ಎಂ.ಪಿ.ಯಾಗಿದ್ದ ದೀವಿ ಸುಳ್ಯದ ಜನಪರ ಹೋರಾಟಗಾರ ಎ.ಕೆ.ಹಿಮಕರ್‌ಗೆ ನೀಡಿದ ಪೊಲೀಸ್ ಕಿರುಕುಳವೇ ಸಾಕ್ಷಿ.

ಹಿಮಕರ್ ಆ ಭಾಗದ ಪ್ರಜ್ಞಾವಂತ ಲೇಖಕ ಮತ್ತು ಒಂದಾನೊಂದು ಕಾಲಕ್ಕೆ ವಿ.ಪಿ.ಸಿಂಗ್, ಪಾಸ್ವಾನ್ ಥರದವರ ಒಡನಾಡಿಯಾಗಿದ್ದರು. 2005ರಲ್ಲಿ ಬೆಳ್ತಂಗಡಿಯ ನಾರಾವಿ ಸಮೀಪದ ಈದು ಗ್ರಾಮದಲ್ಲಿ ಉಡುಪಿ ಎಸ್ಪಿ ಮುರುಗನ್ ಪಡೆ ನಕ್ಸಲ್ ಹೋರಾಟಗಾರ್ತಿಯರಾದ ಹಾಜಿಮಾ ಮತ್ತು ಪಾರ್ವತಿಯವರನ್ನು ಗುಂಡಿಟ್ಟು ಕೊಂದಿತ್ತು. ಪ್ರಜ್ಞಾವಂತ ಹೆಣ್ಣುಮಕ್ಕಳಿಬ್ಬರು ಅನ್ಯಾಯದ ವಿರುದ್ಧ ಸಿಡಿದೆದ್ದು ಪೊಲೀಸರ ಗುಂಡಿಗೆ ಬಲಿಯಾದದ್ದು ಮನುಷ್ಯತ್ವವುಳ್ಳ ಯಾರಿಗೆ ತಾನೇ ನೋವಾಗುವುದಿಲ್ಲ?



ಹಾಜಿಮಾ

ಅದೇಹೊತ್ತಿಗೆ ಸುಳ್ಯ ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿದ್ದ ಹಿಮಕರ್ ಯುವ ಲೇಖಕರನ್ನೆಲ್ಲ ಸೇರಿಸಿ ಹೊಸಜನ ಸಾಹಿತ್ಯ ಸಮ್ಮೇಳನವೆಂಬ ವಿನೂತನ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡರು. ಸಮ್ಮೇಳನದ ಎರಡು ಹೆಬ್ಬಾಗಿಲುಗಳ ಪೈಕಿ ಒಂದಕ್ಕೆ ಹುತಾತ್ಮ ಹೋರಾಟಗಾರ್ತಿ ಪಾರ್ವತಿಯ ಹೆಸರಿಟ್ಟರೆ ಮತ್ತೊಂದಕ್ಕೆ ನ್ಯಾಯಕ್ಕಾಗಿ ಪ್ರಾಣತೆತ್ತ ಹಾಜಿಮಾ ಹೆಸರಿಟ್ಟಿದ್ದರು.

ಆರೆಸ್ಸೆಸ್ ಪಿತ್ಥ ನೆತ್ತಿಗೇರಲು ಇಷ್ಟೇ ಸಾಕಿತ್ತು. ತಕ್ಷಣವೇ ಜಿದ್ದಿಗೆ ಬಿದ್ದ ಸಂ… ದೀವಿ ಮಂಗಳೂರಿನಲ್ಲೊಂದು ಸುಳ್ಯದಲ್ಲಿ ಇನ್ನೊಂದು, ಪತ್ರಿಕಾಗೋಷ್ಠಿ ಕರೆದಿ… ನಕ್ಸಲ್ ಹೋರಾಟಗಾರ್ತಿಯರ ಹೆಸರಿಟ್ಟದ್ದೇ ದೇಶದ್ರೋಹ, ಹಿಮಕರ್‌ನನ್ನು ಕೂಡ… ಬಂಧಿಸಬೇಕೆಂದು ಗುಡುಗಿಬಿಟ್ಟರು. ಆಗ ಮಂಗಳೂರಿಗೆ ಎಸ್ಪಿಯಾಗಿದ್ದ ಸೌಮೇಂ… ಮುಖರ್ಜಿಯನ್ನು ಒಂದಲ್ಲ ಮೂರು ಬಾರಿ ಭೇಟಿ ಮಾಡಿ ಹಿಮಕರ್‌ರನ್ನು ಬಂಧಿಸುವ… ದಬಾಯಿಸಿದರು. ಸುಳ್ಯಕ್ಕೆ ಬಂದಿದ್ದೇ ಡಿವೈಎಸ್ಪಿ ಸುಬ್ರಹ್ಮಣ್ಯೇಶ್ವರ ರಾವ್‌ರನ್ನು ಕಂ… ಹಿಮಕರ್‌ರನ್ನು ಬಂಧಿಸುವಂತೆ ಪೀಡಿಸಿದರು.


ಇದೆಲ್ಲದರ ಫಲವೆಂಬಂತೆ ಆಗ ಸುಳ್ಯಕ್ಕೆ ಇನ್ಸ್‌ಪೆಕ್ಟರ್ ಆಗಿದ್ದ ಶಿವಪ್ರಕಾ… ಜನಪರ ಲೇಖಕ-ಹಿಮಕರ್‌ರನ್ನು ಬಂಧಿ… ಲಾಕಪ್‌ಗೆ ದಬ್ಬಿದರು. ನ್ಯಾಯಕ್ಕಾ… ಪ್ರಾಣಕೊಟ್ಟ ಪಾರ್ವತಿ, ಹಾಜಿಮಾ… ಹೆಸರನ್ನು ಕವಿಗೋಷ್ಠಿಯ… ದ್ವಾರಗಳಿಗಿಡುವುದು ದೇಶದ್ರೋಹವೋ… ಅಥವಾ ಅದನ್ನು ವಿರೋಧಿಸುವು… ದೇಶದ್ರೋಹವೋ? ದೀವಿ ಯಾ… ಮಟ್ಟದ ವೈದಿಕ ಸರ್ಪ ಎಂಬುದ… ಇದೊಂದು ನಿದರ್ಶನವಷ್ಟೆ.




ಪಾರ್ವತಿ

...ಮರ ಹೆಸರಿನಲ್ಲಿ ಹಿಂದೂಗಳ ಮೇಲೆ ಅಟ್ಯಾಕ್ ...ಮುತ್ತಿತ್ತು!

...ಅದು ಆರೆಸ್ಸೆಸ್ ಷಡ್ಯಂತ್ರದ ಕೆಲ ...ಹರಣೆಗಳಷ್ಟೆ. ಡೀವಿ ಶುರುಹಚ್ಚಿ ...ದ ಕೋಮುಗಲಭೆಯ ಬೆಂಕಿ ...ಕಾರಣ 2000ದ ಹೊತ್ತಿಗೆ ಇಡೀ ...ರಳಿಯನ್ನೇ ವ್ಯಾಪಿಸಿ ಕಾಂಗ್ರೆಸ್-...ಎಸ್‌ಗಳು . ನಿರ್ನಾಮವಾಗಿ ...ದವು. ಆರೆಸ್ಸೆಸ್ ಕಳೆ ಇಡೀ ...ರಳಿಯನ್ನೇ ವಿಷಮಯವಾಗಿಸಿತ್ತು. ...ಹೊತ್ತಿಗೆ ಬಿಜೆಪಿ ಶಾಸಕಾಂಗದ ...ನಾಯಕನಾಗಿ 2004ರಲ್ಲಿ ಮಂಗ...ನ ಸಂಸದನಾಗಿ ಗೆದ್ದ ಡೀವಿಗೆ ...ವ ಮತ್ತು ನೈಸರ್ಗಿಕ ನ್ಯಾಯ ...ವಾಗುವ ಹೊತ್ತಿಗೆ ಪರಿಸ್ಥಿತಿಯೇ ...ಲಾಗಿತ್ತು.



ಬದುಕುಳಿದ ಮಗ ಕಾರ್ತಿಕ್

...ಗುರು ರಾಂಭಟ್ಟನೇ ಡೀವಿ ವಿರುದ್ಧ ...ಬಿದ್ದಿದ್ದ. ಆತನಕ ಎಲ್ಲೆಂದರಲ್ಲಿ ...ಗೆ ಬಿದ್ದು, ಹೊತ್ತು ಮೆರೆಸಿದ ...ವರ ಸ್ವಾಮೀಜಿ ಡೀವಿಯನ್ನು ...ದಂತೆ ತುಳಿಯಲು ಹವಣಿಸುತ್ತಿದ್ದ ...ರ್ಯನ ಪರ ವಹಿಸಿದ್ದ. 2009ರಲ್ಲಿ ...ಗಳೂರಿನಿಂದ ಹೊರದಬ್ಬಿ ...ಪಿ-ಚಿಕ್ಕಮಗಳೂರು ಲೋಕಸಭಾ ...ಕ್ಕೆ ಡೀವಿಯನ್ನು ಹೊರದಬ್ಬಲಾಗಿತ್ತು.



ಬಲಿಯಾದ ಡೀವಿ ಮಗ ಕೌಶಿಕ್

...ಏ ಹಂತದಲ್ಲಿ ಬಿಜೆಪಿ ತೊರೆದು ಜೆಡಿಎಸ್ ಸೇರಲು ... ನಿರ್ಧರಿಸಿದ್ದ ಗಳಿಗೆಯಲ್ಲೇ ಮುಖ್ಯಮಂತ್ರಿ ಯಡ್ಡಿಗೂ ...ಗಾಲ ಶುರುವಾಗಿತ್ತು. ಯಃಕಶ್ಚಿತ್ ಕೆಎಂಎಫ್ ...ನ್ನರಿಗೂ ಡೀವಿ ಇಟ್ಟಾಡುವಂತಾಯ್ತು. ರೊಟ್ಟಿ ಜಾರಿ ...ಕ್ಕೆ ಬಿದ್ದಂತೆ ಬಿಜೆಪಿಯ ಭ್ರಷ್ಟಾಚಾರ, ಹಗಲುದರೋಡೆ, ...ವರ್ ಕಚ್ಚಾಟ ಅಂತಿಮವಾಗಿ ಡೀವಿಯನ್ನು ...ಖ್ಯಮಂತ್ರಿಯಾಗಿಸಿದೆ ನಿಜ; ಆದರೆ ಕರ್ನಾಟಕದ ...ಚಲ್ಲೂ ಕರಾವಳಿಯ ನೆಮ್ಮದಿಗೆ, ಅಲ್ಲಿನ ಸಾಂಸ್ಕೃತಿಕ ...ನ್ಯತೆಗೆ ಡೀವಿ ಹಚ್ಚಿದ ಬೆಂಕಿ ಮತ್ತು ಮಾಡಿದ ...ಷುತವಿದೆಯಲ್ಲ; ಅದು ಕಮ್ಮಿಯದ್ದೇನಲ್ಲ.

...ಆತನಕ ಕರಾವಳಿಯ ಶೂದ್ರ, ದಲಿತ, ಹಿಂದುಳಿದ ...ಗಳ ಪಾಲಿಗೆ ಕಲ್ಲೂಟಿ, ಪಂಜುರ್ಲಿ ಭೂತಗಳೇ ...ದೇವರಾಗಿದ್ದಿದ್ದನ್ನು ಕಾಲಕ್ರಮೇಣ ಬದಲಿಸಲಾಯ್ತು. ...ತದ ಕೋಲಗಳಲ್ಲೂ ಬ್ರಾಹ್ಮಣ್ಯದ ...ಕಲಶ ಪ್ರತಿಷ್ಠಾಪನೆ ಶುರುವಾಯ್ತು. ...ಮಾಂಸ, ಸೇಂದಿ, ಸಾರಾಯಿಯ ...ದ್ಯ ಕೊಟ್ಟು ಶೂದ್ರ ದೇವತೆಗಳನ್ನು ...ಧಿಸುತ್ತಿದ್ದ ಕೆಳಜಾತಿಯವರೆಲ್ಲ ...ಕ್ರಮೇಣ ಬ್ರಾಹ್ಮಣ ಪೂಜಾರಿಗಳನ್ನು ...ಸತೊಡಗಿದರು. ಸಣ್ಣಪುಟ್ಟ ಪೂಜೆ ...ಕಾರಗಳಿಗೂ ಪೇಜಾವರರನ್ನು ಕರೆದು ...ಪೂಜೆಗೆ ನಿಂತರು. ...ಸ್-ಜೆಡಿಎಸ್‌ಗಳ ಬೆನ್ನಿಗಿದ್ದ ಬಿಲ್ಲವ, ...ವೀರ, ಬಂಟ, ಗೌಡರೆಲ್ಲ ಕ್ರಮೇಣ ... ಬ್ರಾಹ್ಮಣರನ್ನು ಗೆಲ್ಲಿಸತೊಡಗಿದರು. ...ಗೀಶ್ ಭಟ್, ಆಚಾರ್ಯ, ಧನಂಜಯ್‌ಕುಮಾರ್, ...ರಿ, ಅನಂತ್ ಮಾಣಿಯಂಥ ಪಾಖಂಡಿ ಬ್ರಾಹ್ಮಣರೆಲ್ಲ ... ನಾಯಕ ರಾದರು.



...ಇದೆಲ್ಲಕ್ಕೂ ಮಿಗಿಲಾಗಿ ಇಡೀ ...ವಳಿ ಕೇಸರೀಕರಣಕ್ಕೊಳಪಟ್ಟಿದ್ದು, ...ಗಳ ಮೇಲೆ ನಡೆದ ಸರಣಿ ... ಕರಾವಳಿಯುದ್ದಕ್ಕೂ ಭುಗಿಲೆದ್ದ ...ಮು ರಕ್ತಪಾತ, ಮುಸ್ಲಿಂ ...ಗಳ ಅನ್ಯಾಯದ ಎನ್‌ಕೌಂಟರ್, ...ಸಾಗಿಸುತ್ತಿದ್ದವರ ಮೇಲೆ ...ಂಗಿಗಳು ನಡೆಸಿದ ಮಾರಕ ... ಪಬ್ಬು-ರೆಸ್ಟೋರೆಂಟ್, ...ಗಳಿಗೆ ನುಗ್ಗಿ ಯುವತಿಯರನ್ನು ...ಪ ಹಿಂಸಿಸಿದ್ದು ಇತ್ಯಾದಿಗಳೆಲ್ಲದರ ... ಸಂಘಪರಿವಾರದ ಪಾತ್ರದ ಜೊತೆಜೊತೆಗೆ ...ನಂದ ಗೌಡರ ಕೊಡುಗೆಯೂ ಸಾಕಷ್ಟಿತ್ತು.


ರಘುಪತಿ ಭಟ್ಟ

...ಬಹುಶಃ ಡೀವಿಗೆ ಗೊತ್ತಿಲ್ಲದ ನೈಸರ್ಗಿಕ ...ವೊಂದು ಸದ್ದಿಲ್ಲದೇ ತನ್ನ ಲೀಲೆ ಮೆರೆದಿತ್ತು. ಯಾರು ...ದಿಂದ ಯುದ್ಧಮಾಡುತ್ತಾನೋ ಆತ ಖಡ್ಗದಿಂದಲೇ ...ಮವಾಗುತ್ತಾನೆ. ಮುಸ್ಲಿಂ ದ್ವೇಷದ ಬೆಂಕಿ ಹಚ್ಚಿ ...ಣರ ಹಿತರಕ್ಷಣೆಗೆ ಕಂಕಣತೊಟ್ಟು ಯಾರದೋ ...ವನ್ನು ಬಲಿಕೊಡ ಹೊರಟವನಿಗೆ ವಿಧಿ ತನ್ನದೇ ...ನದಲ್ಲಿ ಪಾಠ ಕಲಿಸುತ್ತದೆ. ಅದು ಡೀವಿಯ ಹಿರಿಮಗ ...ನ ದುರಂತ ಸಾವಿನ ಮೂಲಕವೇ ಸಾಬೀತಾಗಿತ್ತು. ...ಜಕೋಲಿನಿಂದ ಪುತ್ತೂರಿಗೆ ಬೈಕಿನಲ್ಲಿ ಬರುತ್ತಿದ್ದ ...ಮಗ ಕೌಶಿಕ್ ಭೀಕರ ಅಪಘಾತದಲ್ಲಿ ...ರೀಡಾಕ್ಕೀಡಾದ. ಅವತ್ತು ಎದೆಬಿರಿದು ಕೊಂದು...

ಗಳಗಳನೇ ಅತ್ತ ಡೀವಿಗೆ ತಾನೇ ಹಚ್ಚಿದ ಕೋಮುಗಲಭೆಯಲ್ಲಿ ಕೊಲೆ ಯಾದವರ ಹೆತ್ತವರ ಹೊಟ್ಟೆಸಂಕಟ ಅರ್ಥವಾಗಿರಬೇಕು!

ಎರಡನೇ 'ಮಗನೂ...

ಇದಾಗಿ ಕೆಲದಿನಕ್ಕೆ ಎರಡನೇ ಮಗ ಕಾರ್ತಿಕ್ ಕೂಡ ಅಷ್ಟೇ ಭೀಕರ ಅಪಘಾತಕ್ಕೆ ಸಿಲುಕಿ ಒಂದು ವರ್ಷಕಾಲ ಕೋಮಾಸ್ಥಿತಿಯಲ್ಲೇ ಆಸ್ಪತ್ರೆಯಲ್ಲಿ ನರಳಿದ. ಉಳಿದೊಬ್ಬ ಮಗನನ್ನು ಉಳಿಸಿಕೊಳ್ಳಲು ಡೀವಿ ಪಟ್ಟಪಾಡು, ಮಾಡಿದ ಖರ್ಚು, ಹಾಕಿದ ಕಣ್ಣೀರಿದೆಯಲ್ಲ; ಅದು ಕೋಮುಗಲಭೆಯಲ್ಲಿ ಬಲಿಯಾದ ಅದೆಷ್ಟು ಜೀವಗಳ ತಂದೆ ತಾಯಂದಿರ ಕಣ್ಣೀರಿಗೆ ಪ್ರಾಯಶ್ಚಿತ್ತವಾಗಿತ್ತೋ ಬಲ್ಲವರ್ಯಾರು?

ಡೀವಿಯ ಪಾಪಗಳು ಇಷ್ಟಕ್ಕೇ ಕೊನೆಯಾಗಲಿಲ್ಲ. ಸ್ವತಃ ಅವರಿಗೆ ಲಕ್ವ ಹೊಡೆಯುವ ಪರಿಸ್ಥಿತಿ ಬಂತು. ಕೂಡಿಟ್ಟ ದುಡ್ಡನ್ನೆಲ್ಲ ಕಳ್ಳರು ಹೊತ್ತೊಯ್ದರು. ದುಃಖ, ಶೋಕವೆಂಬುದು ಅವರ ವ್ಯಕ್ತಿತ್ವದ ಅವಿಭಾಜ್ಯ ಲಕ್ಷಣದಂತಾಯಿತು. ಅದನ್ನು ಮರೆಸಲು ಕಪಟನಗೆ ರೂಢಿಸಿಕೊಂಡರು. ನಕ್ಕರೂ ಅತ್ತಂತೆ, ಅತ್ತರೂ ನಕ್ಕಂತೆ ಕಾಣುವ ಸದಾನಂದ ಗೌಡರ ಖಾಸಗಿ ಬದುಕೆಂಬುದು ರಕ್ತರಾಜಕಾರಣಕ್ಕಿಳಿದ ಬಹುತೇಕ ಆರೆಸ್ಸೆಸ್ ಬಿಜೆಪಿ ನಾಯಕರಿಗೆ ಪಾಠದಂತಿತ್ತು.

ಕರಾವಳಿಗೆ ಬೆಂಕಿಯಿಟ್ಟ ಕಲ್ಲಡ್ಕ ಭಟ್ಟನದು ಇವತ್ತಿಗೂ ಅಜ್ಞಾತ ಬದುಕು. ಡೀವಿಗೆ ವಿಷಬುದ್ಧಿ ಕಲಿಸಿದ ರಾಂಭಟ್ಟ ಬಿಜೆಪಿಯಿಂದಲೇ ಹೊರದಬ್ಬಿಸಿಕೊಂಡ. ರಘುಪತಿ ಭಟ್ಟನ ಪತ್ನಿ ಪದ್ಮಾವತಿಯೇ ಮನೆಬಿಟ್ಟುಹೋಗಿ ನಿಗೂಢ ಸಾವು ಸತ್ತಳು. ಡೀವಿ ಜೊತೆ ಸುಳ್ಯ-ಪುತ್ತೂರಿನಲ್ಲಿ ಕೋಮುಗಲಭೆಗೆ ಕಾರಣನಾದ ಮತ್ತೊಬ್ಬ ಆರೆಸ್ಸೆಸ್ ನಾಯಕ ಪುಟ್ಟಪ್ಪ ಜೋಷಿ ರಸ್ತೆ ಅಪಘಾತಕ್ಕೆ ಸಿಲುಕಿ ಭೀಕರವಾಗಿ ಸತ್ತ. ಡೀವಿಯ ಕೋಮುಹಿಂಸೆಗೆ ಇನ್ನಿಲ್ಲದಂತೆ ಸಾಥ್‌ಕೊಟ್ಟ ಸುಳ್ಯದ ತಾಲ್ಲೂಕು ಬಿಜೆಪಿ ಅಧ್ಯಕ್ಷ ಅದ್ವಂಗಾಮ ವಿಜಯಕುಮಾರ್ ಭೂತದ ಚಾವಡಿಗೆ ಬೀಳುತ್ತಿದ್ದ ಮರ ಕೆಡವಲು ಹೋಗಿ ಆ ಮರಕ್ಕೆ ಸಿಲುಕಿ ಹೆಣವಾದ. ಕೋಮುಗಲಭೆಯಲ್ಲಿ ಡೀವಿ ಜೊತೆ ಮುಂಚೂಣಿಯಲ್ಲಿರುತ್ತಿದ್ದ ಅವರ ಸಮೀಪದ ನೆಂಟ ಕುರುಂಜಿ ಪುರುಷೋತ್ತಮ ಅಯೋಧ್ಯೆಯ ಬಾಬ್ರಿ ಮಸೀದಿ ನೆಲಸಮಗೊಳಿಸಿ ಬಂದವನು ಲಿವರ್ ಕ್ಯಾನ್ಸರಿಗೆ ಬಲಿಯಾದ.

ಸಾಲು ಸಾಲು ಬಲಿ

ಸುಳ್ಯ-ಪುತ್ತೂರಿನ ಆರೆಸ್ಸೆಸ್ ದುಷ್ಕರ್ಮಿಗಳನ್ನು ವಿಧಿ ಇಷ್ಟಕ್ಕೇ ಬಿಡಲಿಲ್ಲ. ಕೋಮುದಾಳಿಯಲ್ಲಿ ಬಲಗೈ ಬಂಟನಂತಿದ್ದ ಅಭಿನಯ ಚಂದ್ರು ಎಂಬಾತ ಏಡ್ಸ್ ಕಾಯಿಲೆಗೆ ಸಿಲುಕಿ ಸತ್ತರೆ, ಆರೆಸ್ಸೆಸ್ ಬಿಜೆಪಿಯ ಪ್ರತಿಯೊಂದು ದೊಂಬಿ-ಗಲಾಟೆಗೆ ಬಿಟ್ಟಿ ಮೈಕು ಹಾಕುತ್ತಿದ್ದ ಮೈಕ್ ಚಂದ್ರು ಎಂಬ ಮತ್ತೊಬ್ಬ ಆರೆಸ್ಸೆಸ್ ನಾಯಕ ಡೀವಿ ಭಾಷಣಕ್ಕೆ ಮೈಕ್ ಕಟ್ಟುವಾಗಲೇ ಕರೆಂಟ್ ಹೊಡೆದು ಸತ್ತುಹೋದ.


ವಿಕಟವೆಂದರೆ, ಡೀವಿಯ ಎರಡನೇ ಮಗ ಕಾರ್ತಿಕ್ ನಡುರಾತ್ರಿ ಬೈಕೆತ್ತಿಕೊಂಡು ಮಂಗಳೂರಿನ ಚರ್ಚ್ ಒಂದರ ಮೇಲೆ ದಾಳಿ ನಡೆಸಿ ವಾಪಸ್ಸಾಗುವಾಗಲೇ ಭೀಕರ ಅಪಘಾತಕ್ಕೀಡಾಗಿ ವರ್ಷಂಪೂರ್ತಿ ಕೋಮಾದಲ್ಲಿ ನರಳಿಬಿಟ್ಟ.

ಇದು ಸದಾನಂದಗೌಡರಿಗೆ ವಿಧಿಕಲಿಸಿದ ಪಾಠ. ಕೊಲ್ಲುವುದು ಯಾವ ಧರ್ಮ? ದ್ವೇಷಿಸುವುದು ಯಾವ ನೀತಿ? ಯಾರದೋ ಮಕ್ಕಳನ್ನು ಬಲಿಕೊಟ್ಟು ಊರಿಗೆ ಬೆಂಕಿಯಿಟ್ಟು ಎಮ್ಮೆಲ್ಲೆಯಾದರೇನು, ಮುಖ್ಯಮಂತ್ರಿಯಾದರೇನು? ಸಂಭ್ರಮಿಸಲು ಮಗನೇ ಇಲ್ಲ! ಡೀವಿ ಜೊತೆ ನಿಂತು ರಕ್ತಹರಿಸಿದವರ್ಯಾರೂ ಉಳಿಯಲಿಲ್ಲ. ಈಗ ತಾನೊಬ್ಬ ವಕ್ಕಲಿಗ, ರಾಜ್ಯದ ವಕ್ಕಲಿಗರ ನಾಯಕ ಎಂದೆಲ್ಲ ಸೋಗು ಹಾಕುವ ಸದಾನಂದಗೌಡರ ವೈಯಕ್ತಿಕ ದುರಂತ ದುಃಖ, ಶೋಕಗಳ ಬಗ್ಗೆ ಯಾವ ಮನುಷ್ಯ ತಾನೇ ಖುಷಿಪಡಲು ಸಾಧ್ಯ?

ರಕ್ತರಾಜಕಾರಣವೆಂಬುದು ಹೇಗೆ ಅದರ ರೂವಾರಿಯನ್ನು ನುಂಗಿಹಾಕುತ್ತದೆ ಎಂಬುದನ್ನು ಲೋಕಕ್ಕೆ ತೋರಿಸಲೆಂದೇ ಡೀವಿ ಮುಖ್ಯಮಂತ್ರಿಯಾಗಿರಬಹುದೇ? ಮುಖ್ಯಮಂತ್ರಿಯೊಬ್ಬನ ಮಕ್ಕಳ ದುರಂತ ಕೋಮು ಹಿಂಸೆಗಿಳಿದ ಎಲ್ಲಾ ರಾಜಕಾರಣಿಗಳಿಗೆ ನಿಸರ್ಗ ಕಲಿಸಿದ ಪಾಠವೇ?

ಹಿ

ಕೊಪ್ಪಳ: ಸಂಗಣ್ಣ ಕರಡಿ ಬೋನಿಗೆ... ಸದಾನಂದಗೌಡ ಫೀಲ್ಡಿಗೆ..?



ಸದಾನಂದ ಗೌಡ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆಯೇ ಕೊಪ್ಪಳದ ಬಿ.ಜೆ.ಪಿ. ಎರಡು ತುಂಡಾಗಿದೆ. ಮಂತ್ರಿಗಿರಿಯ ಆಸೆಗಾಗಿ ಮಾನಗೆಟ್ಟವನಂತೆ ನಡೆದುಕೊಂಡಿರುವ ಸಂಗಣ್ಣ ಕರಡಿಯನ್ನು ಬೋನಿಗೆ ಹಾಕಲು ಹಳೇ ಚಡ್ಡಿಗಳು ಉಪಚುನಾವಣೆಯನ್ನೇ ಅಸ್ತ್ರವಾಗಿಸಿಕೊಂಡಿದ್ದಾರೆ. ಸದಾನಂದ ಗೌಡನನ್ನು ಕೊಪ್ಪಳದಿಂದ ಗೆಲ್ಲಿಸುವ ಮೂಲಕ ಸಂಗಣ್ಣನನ್ನು ಸೈಡ್‌ಗೆ ಸರಿಸುವ ಸೈಲೆಂಟ್‌ವಾರ್ ಘೋಷಿಸಿದ್ದಾರೆ.

ಸಂಸದರಾಗಿರುವ ಮುಖ್ಯಮಂತ್ರಿ ಸದಾನಂದಗೌಡ ಮುಂದಿನ ಆರು ತಿಂಗಳಲ್ಲಿ ಶಾಸಕನಾಗಿ ಆಯ್ಕೆಯಾಗಬೇಕು. ಇನ್ನೂ ಕ್ಷೇತ್ರದ ಆಯ್ಕೆ ಮಾಡಿಕೊಂಡಿಲ್ಲ ಎಂದೆಲ್ಲಾ ಹೇಳುತ್ತಿರುವ ಸಿ.ಎಂ. ಒಳಗಿಂದೊಳಗೆ ಕರಡಿ ಸಂಗಣ್ಣನ ರಾಜೀನಾಮೆಯಿಂದ ತೆರವಾಗಿರುವ ಕೊಪ್ಪಳ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದಾರೆ. ಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಲಕ್ಷ್ಮಣ ಸವದಿಗಳು ಈಗಾಗಲೇ ಕೆಲಸ ಶುರುಹಚ್ಚಿಕೊಂಡಿರುವುದು ಸ್ಪಷ್ಟಗೊಂಡಿದೆ. ಯಾವಾಗ ಈ ಮಂತ್ರಿಗಳಿಬ್ಬರೂ ಸದಾನಂದನ ಆಗಮನದ ಸುದ್ದಿ ತಂದರೋ ಆಗಲಿಂದ ಇಲ್ಲಿಯ ಓಲ್ಡ್ ಬಿ.ಜೆ.ಪಿ.ಗಳು "ಅವರನ್ನು ಸುಲಭವಾಗಿ ಗೆಲ್ಲಿಸುತ್ತೇವೆ, ಚಿಂತೆಬಿಡಿ" ಎಂದು ಹೇಳಿರುವುದು ಸದಾನಂದನ ಮೇಲಿನ ಪ್ರೀತಿಗಾಗಿ ಅಲ್ಲ, ಬದಲಾಗಿ ಜೆ.ಡಿ.ಎಸ್‌ನಿಂದ ಆಯ್ಕೆಯಾಗಿ ಗೂಟದ ಕಾರಿನ ಆಸೆಗಾಗಿ ಚಡ್ಡಿ ತೊಟ್ಟ ಸಂಗಣ್ಣ ಕರಡಿ ಮೇಲಿನ ಸೇಡಿನಿಂದಾಗಿ. ಸಂಗಣ್ಣನೊಂದಿಗೆ ಬಿ.ಜೆ.ಪಿ.ಗೆ ಕಾಲಿಟ್ಟಿರುವ ದಳದ ಮಾಜೀ ಕಾರ್ಯಕರ್ತರು ನಮ್ಮ ನಾಯಕ ಶಾಸಕನಾಗಲಿಲ್ಲ ಅಂದರೂ ಬೇರೆ ಬಿ.ಜೆ.ಪಿಗಳನ್ನು ಹೇಗೆ ಗೆಲ್ಲಿಸುತ್ತಾರೋ ನೋಡತೇವಿ ಎಂದು ಹಳೇ ಚಡ್ಡಿಗಳಿಗೆ ಸೆಡ್ಡು ಹೊಡೆದು ನಿಂತಿದ್ದಾರೆ. ಇವರ ಈ ಕಿತ್ತಾಟವನ್ನು ಬೆಂಗಳೂರಲ್ಲಿ ಕುಳಿತು ಲೈವ್ ಆಗಿ ನೋಡುತ್ತಿರುವ ಸದಾನಂದ ಗೌಡ ಅಪರೂಪಕ್ಕೆ ಸಿಕ್ಕ ಪದವಿಯನ್ನು ಪರಮನೆಂಟಾಗಿ ಕಿತ್ತು ಹೋಗದಂತೆ ಕ್ಷೇತ್ರ ಹುಡುಕಿ ಎಂದು ಹಲ್ಲು ಗಿರಿಯುತ್ತಿದ್ದಾರಂತೆ.

ಕಳೆದ 2008ರ ವಿಧಾನಸಭೆ ಚುನಾವಣೆಯಲ್ಲಿ ಜೆ.ಡಿ.ಎಸ್‌ನಿಂದ ಸ್ಪರ್ಧಿಸಿದ್ದ ಸಂಗಣ್ಣ ಕರಡಿ ವಿರುದ್ಧ ಬಿ.ಜೆ.ಪಿ.ಯಿಂದ ಸ್ಪರ್ಧಿಸಿ ಸೋತಿದ್ದ ಅಂದಣ್ಣ ಅಗಡಿ ಈಗ ಸಿ.ಎಂ ಸದಾನಂದಗೌಡರಿಗೆ ಕೊಪ್ಪಳದಿಂದ ಸ್ಪರ್ಧಿಸುವಂತೆ ಆಹ್ವಾನಿಸುವುದರ ಮೂಲಕ ಸೇಡು ತೀರಿಸಿಕೊಳ್ಳಲು ಸಿದ್ಧತೆ ನಡೆಸಿದ್ದಾನೆ. ಅಂದಣ್ಣ ಬಿ.ಜೆ.ಪಿಗೆ ಕೊಪ್ಪಳದಲ್ಲಿ ಗಟ್ಟಿ ನೆಲೆ ಒದಗಿಸಿದಾತ. ಆದರೆ ಎಂದಿಗೂ ಕೋಮುವಾದಿಯಂತೆ ನಡೆದುಕೊಂಡವನಲ್ಲ. ಆದರೀತನನ್ನು ಕಡೆಗಣಿಸಿ ಸಂಗಣ್ಣ ಕರಡಿಯನ್ನು ಬಿ.ಜೆ.ಪಿ.ಗೆ ಕರೆತರಲಾಯಿತು. ಈ ಸಿಟ್ಟೇ ಇಂದು ಬಿ.ಜೆ.ಪಿಯನ್ನು ಒಡೆದು ಹೋಳಾಗಿಸಿದ್ದು ಸುಳ್ಳಲ್ಲ.


ಸಂಗಣ್ಣ ಜೆ.ಡಿ.ಎಸ್.ನಿಂದ ಚುನಾಯಿತನಾಗಿದ್ದರೂ ಮಾನಸಿಕವಾಗಿ ರಾಜ್ಯ ಮಟ್ಟದ ಬಿ.ಜೆ.ಪಿ ಯಲ್ಲಿ ಗುರುತಿಸಿಕೊಂಡಿದ್ದ. ಜಾತಿ ರಾಜಕಾರಣದ ಮೂಲಕ ಮಂತ್ರಿಗಳನ್ನು ಬುಟ್ಟಿಗೆ ಹಾಕಿಕೊಂಡು ತನ್ನ ಕೆಲಸ ಸಲೀಸಾಗಿಸಿಕೊಳ್ಳುತ್ತಿದ್ದ. ತನ್ನ ಈ ದಾರಿಯನ್ನು ಸುಲಭಗೊಳಿಸಿಕೊಳ್ಳುವ ಉದ್ದೇಶದಿಂದಲೇ ಸ್ಥಳೀಯ ಬಿ.ಜೆ.ಪಿ ಲೀಡರ್‌ಗಳೊಂದಿಗೆ ಚರ್ಚಿಸದೆ, ಅವರ ಅಭಿಪ್ರಾಯ ಕೇಳದೆ ಪಕ್ಷಕ್ಕೆ ಸೇರಿರುವುದು ಈಗ ಮುಳುವಾಗಿ ಪರಿಣಮಿಸಿದೆ, ಸಂಗಣ್ಣನ ಪರ ಬೆರಳೆಣಿಕೆಯಷ್ಟು ಸ್ಥಳೀಯ ಮುಖಂಡರು ಕೆಲಸ ಮಾಡುತ್ತಿದ್ದಾರೆ. ಉಳಿದವರೆಲ್ಲ ಇವನನ್ನು ಯಾವಾಗ ಮೂಲೆ ಗುಂಪು ಮಾಡೇವು ಎಂದು ಕಾಯುತ್ತಿದ್ದಾರೆ. ಬಿ.ಜೆ.ಪಿ ಸದಾನಂದ ಗೌಡ ಸಿಎಂ ಆಗಿದ್ದೇ ತಡಾ ನಮ್ಮೂರಿಗೆ ಬನ್ನಿ ನಾವು ಗೆಲ್ಲಿಸುತ್ತೇವೆ ಎಂದು ತಂಡ ಕಟ್ಟಿಕೊಂಡು ಹೋಗಿ ಸ್ಪರ್ಧೆಗೆ ಕರೆಯುತ್ತಿದ್ದಾರೆ. ಇದು ಸದಾನಂದನ ಮೇಲಿನ ಪ್ರೀತಿಯಲ್ಲ, ಬದಲಾಗಿ ಕರಡಿಯನ್ನು ಸ್ಟ್ರಾಪ್ ಮಾಡುವ ಪ್ಲ್ಯಾನ್. ಕೊಪ್ಪಳದಲ್ಲಿ ಸಂಗಣ್ಣನ ಇನ್ನೊಬ್ಬ ಪರಮ ವಿರೋಧಿ ಎಂದರೆ ಅಗಡಿ ಹನುಮಂತಪ್ಪ, ರಾಜಕಾರಣದಲ್ಲಿ ಕರಡಿಯ ಸಮಕಾಲೀನನಾದ ಹನುಮಂತಪ್ಪ ಅಧಿಕಾರ ಅನುಭವಿಸಿದವನೇನಲ್ಲ. ಇತ್ತೀಚೆಗೆ ನಡೆದ ಎ.ಪಿ.ಎಂ.ಸಿ. ಚುನಾವಣೆ ಯಲ್ಲಿ ತನ್ನ ಅಳಿಯನನ್ನು ನಿಲ್ಲಿಸಿ ಆರಿಸಿ ತಂದಿದ್ದೆ ಇವನ ಸಾಧನೆ. ಆದರೆ ಅವನನ್ನು ಅಧ್ಯಕ್ಷನನ್ನಾಗಿಸುವ ಇವನ ಕನಸಿಗೆ ಸಂಗಣ್ಣ ಕರಡಿ ಅಡ್ಡಗಾಲಾಗಿದ್ದಾನೆ. ಕುರುಬ ಸಮಾಜದ ಹನುಮಂತಪ್ಪ ಮುಂದೆ ಉಪ ಚುನಾವಣೆಯಲ್ಲಿ ಕುರುಬರ ಮತ ತನಗೆ ಹಾಕಿಸಲಾರ ಎಂದು ಕರಡಿ ಲಿಂಗಾಯತ ಗಾಣಿಗ ಸಮಾಜದ ಸಜ್ಜನ ಎಂಬುವನನ್ನು ಎ.ಪಿ.ಎಂ.ಸಿ ಅಧ್ಯಕ್ಷನನ್ನಾಗಿ ಮಾಡಿದ್ದಾನೆ. ಇದರಿಂದ ಕುದಿಯುತ್ತಿರುವ ಹನುಮಂತ ಕರಡಿಗೊಂದು ಗತಿ ಕಾಣಿಸಲು ಹಾತೊರೆಯುತ್ತಿದ್ದಾನೆ.

ಇದೆಲ್ಲದರ ಮಧ್ಯೆ ಕೂಲಾಗಿದ್ದ ಲೋಕಲ್ ಚಡ್ಡಿಗಳ ಜಗಳ ತಕ್ಷಣ ಬೀದಿಗೆ ಬಂದು ನಿಂತಿದೆ. ಜಿಲ್ಲಾ ಮುಖಂಡ ವಿರೂಪಾಕ್ಷಪ್ಪ ಯಾರನ್ನ ಕೇಳಿ ಸದಾನಂದ ಗೌಡನನ್ನ ಇಲ್ಲಿಗೆ ಬರಕ್ಕೆ ಹೇಳಿದಿರಿ ಅಂತ ಕರಡಿ ಪರವಾದ ಟೀಂ ಕಟ್ಟಿಕೊಂಡು ಅಂದಣ್ಣನ ವಿರುದ್ಧ ಕತ್ತಿ ಮಸೆಯುತ್ತಿದ್ದಾನೆ. ಇತ್ತ ನಗರ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಪ್ಪನಿಗೆ ಹುಚ್ಚು ಹಿಡಿದಿದೆ. ಆತ ಯಾವ ಪಕ್ಷಕ್ಕೂ ನಿಷ್ಠನಲ್ಲ. ಇಷ್ಟೆಲ್ಲಾ ಕಿತ್ತಾಟ ನಡೆದರೂ ಜಿಲ್ಲಾಧ್ಯಕ್ಷ ಗಿರಿಗೌಡ ಮಾತ್ರ ತನಗೂ ಇದಕ್ಕೂ ಸಂಬಂಧವೇ ಇಲ್ಲವೇನೋ ಎಂಬಂತೆ ಕಾರ್ಪೆಟ್ ಹೊದ್ದು ಮಲಗಿಬಿಟ್ಟಿದ್ದಾನೆ. ಗಂಗಾವತಿಯಿಂದ ಎರಡು ಬಾರಿ ಅಸೆಂಬ್ಲಿಗೆ ನಿಂತು ಸೋತು ಸುಣ್ಣಾಗಿರುವಾತ ಗಿರಿಗೌಡ' ಈ ಹಿಂದೆ 20 ವರ್ಷ ಕಾಂಗ್ರೆಸ್ಸಿನಲ್ಲಿ ಅಧಿಕಾರ ಅನುಭವಿಸಿದ್ದ ಬಿ.ಜೆ.ಪಿ.ಗೆ ಬಂದು ಕರಕುಶಲ ನಿಗಮ ಮಂಡಳಿಯ ಅಧ್ಯಕ್ಷರಾದ ಲಲಿತಾರಾಣಿಯ ಪವರ್‌ಗೆ ಹೆದರಿ ಗೂಡು ಸೇರಿರುವ ಗಿರಿಗೌಡ, ಯಾರು ನಿಂತರೇನು..? ಯಾರು ಕುಂತರೇನು..? ನಂದೇ ನನಗಾಗಿದೆ ಎನ್ನುತ್ತಿದ್ದಾನಂತೆ.

ಅಭಿವೃದ್ಧಿ ಕಾಣದೆ ಹಾಳು ಕೊಂಪೆಯಂತಾಗಿರುವ ಕೊಪ್ಪಳ ವಿಧಾನಸಭಾ ಕ್ಷೇತ್ರವನ್ನು ಇಲ್ಲಿಯವರೆಗೆ ತಿಂದು ದುಂಡಗಾಗಿರುವ ಕರಡಿ ಸಂಗಣ್ಣ ಇದ್ದುದ್ದನ್ನ ಕಳೆದುಕೊಂಡು ಮತ್ತೆ ಬೀದಿಪಾಲಾಗುವ ಕಾಲ ದೂರವಿಲ್ಲ. ಉಪಚುನಾವಣೆಯಲ್ಲಿ ಒಂದು ವೇಳೆ ಮುಖ್ಯಮಂತ್ರಿ ಸದಾನಂದಗೌಡ ಇಲ್ಲಿಂದ ಸ್ಪರ್ಧೆಗೆ ಇಳಿದರೆ, ಸಂಗಣ್ಣನ ಮೇಲಿನ ಸಿಟ್ಟಿಗೆ ನಿಷ್ಠಾವಂತ ಬಿ.ಜೆ.ಪಿ.ಗಳ ಸಿಂಗಲ್ ಓಟು ಪಡೆಯುವುದೂ ಕಷ್ಟವಾಗಬಹುದು. ಪರ ವಿರೋಧದ ಜಗಳದ ಮಧ್ಯೆ ಚಡ್ಡಿಗಳೇ ಸದಾನಂದಗೌಡನನ್ನ ಸೋಲಿಸಿದರೂ ಆಶ್ಚರ್ಯವಿಲ್ಲ!

• ಹುರಳಿಕುಪ್ಪಿ ವಿನಯ

ಕಾಡು ಕದ್ದ ಮುಖ್ಯಮಂತ್ರಿ!



ಮೊದಲು ಮಂಗಳೂರು, ನಂತರ ಉಡುಪಿ, ಚಿಕ್ಕಮಗಳೂರಿಗೆ ಒಂದಲ್ಲ ಎರಡು ಬಾರಿ ಸಂಸದನಾಗಿದ್ದು ಡೀವಿ ಕಡಿದು ಗುಡ್ಡೆ ಹಾಕಿದ್ದು ಅಷ್ಟರಲ್ಲೇ ಇದೆ. ಕ್ಷೇತ್ರಕ್ಕೆಂದು ಯಥಾವತ್ ಬರುತ್ತಿದ್ದ ಎಂ.ಪಿ.ಫಂಡ್ ಕೂಡ ಬಳಕೆಯಾಗದೇ ವ್ಯರ್ಥವಾಯಿತು. ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಯಾವತ್ತೂ ಚಕಾರ ಎತ್ತಲಿಲ್ಲ, ನಕ್ಸಲ್ ಪ್ಯಾಕೇಜ್‌ನ ಕೋಟಿಕೋಟಿಯನ್ನು ಅಧಿಕಾರಿಗಳು ಲೂಟಿಗೈದರು. ಕ್ಷೇತ್ರಕ್ಕೆಂದು ನಯಾಪೈಸೆಯ ಹೆಚ್ಚುವರಿ ಫಂಡು ತರಲಿಲ್ಲ, ದತ್ತಮಾಲೆ ಹಾಕಿ ಹೈಕೋರ್ಟ್ ಆದೇಶವನ್ನೇ ಉಲ್ಲಂಘಿಸಿ ಅರೆಸ್ಟಾಗಿದ್ದು ಬಿಟ್ಟರೆ ಡೀವಿ ಎಂ.ಪಿ.ಯಾಗಿ ಸಾಧಿಸಿದ್ದು ಸೊನ್ನೆಯೆ.

ನಮ್ಮ ಸರ್ಕಾರ ಬರಲಿ ಬುಡನ್‌ಗಿರಿಗೆ ಬ್ರಾಹ್ಮಣ ಅರ್ಚಕರನ್ನು ನೇಮಿಸ್ತೀನಿ, ಮುಸ್ಲಿಂರ ಗೋರಿ ಕಿತ್ತುಹಾಕಿ ದತ್ತನ ಮೂರ್ತಿ ಇಡ್ತೀನಿ ಎಂದ ಡೀವಿ ಮಳೆಗೆ ದತ್ತ ಗುಹೆಯೇ ಕುಸಿದು ಬಿದ್ದಾಗಲೂ ಅತ್ತ ತಲೆಹಾಕಲಿಲ್ಲ. ದತ್ತಮಾಲೆ ಧರಿಸಿ ಅರೆಸ್ಟಾಗಿ ಬಂದ ಮರುಗಳಿಗೆಯಲ್ಲೇ ಮಾಲೆ ಕೂಡ ಬಿಚ್ಚದೇ ಚಿಕ್ಕಮಗಳೂರಿನ ಎಂ.ಜಿ.ರಸ್ತೆಯ ಖಲಂದರ್ ಎಂಬಾತನ ತಾಜ್ ಹೋಟೆಲ್‌ನಿಂದ ಬಿರಿಯಾನಿ ತರಿಸಿಕೊಂಡು ತಿಂದರು.

ಇದು ಬಿಟ್ಟರೆ ಡೀವಿ ಎಂ.ಪಿ.ಯಾಗಿ ಸಾಧಿಸಿದ್ದು ಮಂಗಳೂರು-ಕೊಡಗು ಗಡಿಯ ಕಲ್‌ಮಡ್ಕ ಪಂಚಾಯತಿಯ ಅರಣ್ಯ ಭೂಮಿ ಕಬಳಿಸಿದ್ದು. ಕಲ್‌ಮಡ್ಕದ ಸ.ನಂ.171d7ರಲ್ಲಿದ್ದ 10.5 ಎಕರೆ ಅರಣ್ಯ ಭೂಮಿಯನ್ನು ಯಡ್ಡಿಗೆ ದುಂಬಾಲು ಬಿದ್ದು ತನ್ನದೇ ಕೆ.ಎಸ್.ಗೌಡ ಎಜುಕೇಷನ್ ಟ್ರಸ್ಟ್‌ಗೆ ಮಂಜೂರು ಮಾಡಿಸಿಕೊಂಡಿದ್ದೇ ಮಹಾಸಾಹಸ. ಈ ಬಗ್ಗೆ ಪರಿಸರವಾದಿಗಳು ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ಅರಣ್ಯ ಒತ್ತುವರಿ ಪ್ರಕರಣವನ್ನೂ ದಾಖಲಿಸಿದ್ದಾರೆ.


ಶೃಂಗೇರಿ ಶಾಸಕ ಜೀವರಾಜ್ ಮತ್ತು ಕೇಂದ್ರ ಮಂತ್ರಿ ಕೃಷ್ಣರ ಅಳಿಯ ಸಿದ್ದಾರ್ಥನ ಜೊತೆ ಡೀವಿಗೆ ಇವತ್ತಿಗೂ ವ್ಯಾಪಾರೀ ನಂಟಿದೆ. ಮಂಗಳೂರಿನ ನಟೋರಿಯಸ್ ಬಸ್ ಮಾಫಿಯಾ ಜೊತೆಗೂ ಡೀವಿಗೆ ಹಳೇ ಸಂಬಂಧವಿದೆ. ಹಿಂದೆ ಪುತ್ತೂರಿನ ಶಾಸಕರಾಗಿದ್ದಾಗ ಶಾಸಕರ ಭವನದಲ್ಲಿದ್ದಷ್ಟೂ ಕಾಲ ಬೆಂಗಳೂರು ಭೂಗತ ಪಾತಕ ಚಟ್ನಿ ಕೀಲ್ ಹಿಂದೆ ... ರಾಜೇಂದ್ರನ ಜೊತೆ ಬೆಂಗಳೂರು ಸುತ್ತುವ ಖಯಾಲಿಯಿತ್ತು. ಈಗ ಮಂಗಳೂರು ಮೂಲದ ಮುಚ್ಚೆ ರಿಟರ್ನ್ಡ್ ರಿಯಲ್ ಎಸ್ಟೇಟ್ ಡಾನ್ ಒಬ್ಬ ಡೀವಿಗೆ ಪರಮಾಪ್ತ.

ಸದ್ಯ ಬೆಂಗಳೂರಿನಲ್ಲಿ ತಲೆಯೆತ್ತಿದ ಬಿಳಿ ಇಂಡಿಕಾ ದರೋಡೆಯ ಹಿಂದಿರುವುದು ಈ ಆಟೋರಾಮನೇ ಎಂಬ ಗುಮಾನಿ ಪೊಲೀಸರಿಗಿದೆ. ಆಟೋ ರಾಮನ ತಾಕತ್ತೇ ಅಂಥದ್ದು. ಒಂದಲ್ಲ ಎರಡು ಸರಣಿ ಹತ್ಯೆ ನಡೆಸಿ ಜೀವಾವಧಿ ಶಿಕ್ಷೆಗೀಡಾಗಿ ಈಗ ಪರಪ್ಪನ ಅಗ್ರಹಾರ ಜೈಲಲ್ಲಿ ಸಜಾ ಕೈದಿಯಾಗಿರುವ ಆಟೋರಾಮನ ಆಳ, ವಿಸ್ತಾರ ಭಯಾನಕ.

ಇಂಡಿಕಾ ಗ್ಯಾಂಗ್ ಸರಣಿ ದರೋಡೆ

ಜೈಲುಪಾತಕಿ ಆಟೋರಾಮನ ನಿಗೂಢ ಭಂಟರು!





ಸುಪಾರಿ ಎನ್‌ಕೌಂಟರ್ ಭೀತಿಯಲ್ಲಿ ಕೋತಿರಾಮ

ಸಂಭವಿಸುತ್ತಿರುವ ಸರಣಿ ರಾಬರಿ, ದರೋಡೆಗಳಿಗೂ ಸದ್ಯ ಮೈಸೂರು ಜೈಲಿನಲ್ಲಿ ಕಂಬಿ ಎಣಿಸುತ್ತಿರುವ ಹತ ಮಚ್ಚನ ಬಂಟ ಕೋತಿರಾಮನಿಗೂ ಸೂತ್ರ ಸಂಬಂಧವಿಲ್ಲ ಎಂಬುದು ಗೊತ್ತಿದ್ದೂ ತುಮಕೂರು ಪೊಲೀಸರು ಕೋತಿರಾಮನ ಹೆಸರನ್ನು ಎಫ್‌ಐಆರ್‌ಗೆ ಸೇರಿಸಿದ್ದೇಕೆ?

ಅದು ತನ್ನನ್ನು ಎನ್‌ಕೌಂಟರ್ ಮಾಡಿ ಮುಗಿಸಲು ತುಮಕೂರಿನ ಕ್ಯಾತ್ಸಂದ್ರ ಪೊಲೀಸರು ನಡೆಸುತ್ತಿರುವ ಪೂರ್ವ ತಯಾರಿ ಎಂದೇ ಕೋತಿರಾಮ ಲೆಕ್ಕಹಾಕಿದ್ದಾನೆ. ಸಂಬಂಧವೇ ಇಲ್ಲದ ರಾಬರಿ, ಡಕಾಯಿತಿಗಳಿಗೆ ಪೊಲೀಸರು ಪದೇಪದೇ ಹೆಸರು ಸೇರಿಸುತ್ತಿದ್ದಾರೆಂದರೆ, ಅದನ್ನು ಉದ್ದೇಶಪೂರ್ವಕವಾಗಿ ಪತ್ರಿಕೆಗಳಲ್ಲಿ ಸುದ್ದಿಯಾಗುವಂತೆ ನೋಡಿಕೊಳ್ಳುತ್ತಿದ್ದಾರೆಂದರೆ ಅಲ್ಲಿಗೆ ಒಂದು ಫೇಕ್ ಎನ್‌ಕೌಂಟರ್‌ಗೆ ಸುಪಾರಿ ರೆಡಿಯಾಗಿದೆಯೆಂದೇ ಅರ್ಥ. ಈ ಹಿಂದೆ ಮಚ್ಚನ ಮತ್ತೊಬ್ಬ ರೈಟ್‌ಹ್ಯಾಂಡ್ ಪೆದ್ದಗುಂಡನನ್ನು ಪೊಲೀಸರು ಎನ್‌ಕೌಂಟರ್ ಹೆಸರಲ್ಲಿ ಮುಗಿಸಿದಾಗಲೂ ಅದೊಂದು ಸುಪಾರಿ ಕೊಲೆಯೆಂದೇ ಮಚ್ಚನ ಗ್ಯಾಂಗ್ ಲೆಕ್ಕಹಾಕಿತ್ತು, ಮಚ್ಚನ ಕಡುವೈರಿಗಳಾದ ಕಡಬಗೆರೆ ಗ್ಯಾಂಗ್, ಕಾಮಾಕ್ಷಿಪಾಳ್ಯದ ಧರಣಿ, ಹೇಮಂತ, ಸುಂಕದಕಟ್ಟೆಯ ರಾಮ-ಲಕ್ಷ್ಮಣ, ವಿಜಯನಗರದ ಪ್ರಸನ್ನ ಮುಂತಾದವರ ಬಲಾಢ್ಯ ಸಿಂಡಿಕೇಟ್ ಮಚ್ಚನ ಅವಶೇಷಗಳಂತಿರುವ ಪೆದ್ದಗುಂಡನ ವಿರುದ್ಧ ಕತ್ತಿ ಮಸೆಯುತ್ತಿತ್ತು,


ತಾವೇ ಕೊಲ್ಲುವ ಬದಲು ಅದಕ್ಕೆ ತಗಲುವ ಖರ್ಚು, ಪೊಲೀಸರ ರೊಕ್ಕ, ನಂತರ ವಕೀಲರಿಗೆ ಸುರಿಯುವ ದುಡ್ಡು ಎಲ್ಲವನ್ನೂ ಸೇರಿಸಿ ಯಾರಾದರೂ ಭ್ರಷ್ಟ ಪೊಲೀಸ್ ಅಧಿಕಾರಿಯ ಬಾಯಿಗಿಟ್ಟರೆ ಸುಪಾರಿ ಎನ್‌ಕೌಂಟರ್ ಒಂದು ಸದ್ದಿಲ್ಲದೆ ನಡೆದುಹೋಗುತ್ತದೆ. ಮಚ್ಚನ ಬಂಟರ ಪೈಕಿ ಈಗ ಉಳಿದಿರುವವನು ಒಬ್ಬ ಕೋತಿರಾಮ ಮಾತ್ರ. ಸದ್ಯ ಆತ ಜೈಲು ಬಿಟ್ಟು ಬರುತ್ತಿಲ್ಲ. ಆತನಿಗೀಗ ಹಳೇ ದುಷ್ಮನಿಯೂ ಬೇಕಿಲ್ಲ, ತಾನಾಯಿತು ತನ್ನ ಹಳೇ ಕೇಸುಗಳಾಯಿತು ಎಂದು ಜೈಲಲ್ಲೇ ಬದುಕು ಸಾಗಿಸುತ್ತಿದ್ದಾನೆ. ಹಿಂದಿನಂತೆ ಕ್ರೈಮ್‌ಗೂ ಕೈಹಾಕುತ್ತಿಲ್ಲ, ಸುದೀರ್ಘ ಪಾತಕ ಬದುಕಿನಿಂದ ಆತ ಯಾವುದೋ ಪಾಠವೊಂದನ್ನು ಕಲಿತಿರಬೇಕು. ತನ್ನ ಪಾಡಿಗೆ ತಾನಿದ್ದರೂ ದುಷ್ಮನಿಯಿದೆಯಲ್ಲ; ಅದು ತನ್ನನ್ನು ಕ್ಯಾತ್ಸಂದ್ರ ಪೊಲೀಸರ ಮೂಲಕ ಮುಗಿಸಲು ಕತ್ತಿ ಮಸೆಯುತ್ತಿರಬಹುದೆಂಬುದು ಕೋತಿರಾಮನ ಗುಮಾನಿ. ಅದಕ್ಕೆ ಇರಬೇಕು ಕೋತಿರಾಮ ಸದ್ಯ ಮಾನವ ಹಕ್ಕು ಆಯೋಗಕ್ಕೆ ದೂರು ನೀಡಿದ್ದಾನೆ.

ಬಿಳಿ ಇಂಡಿಕಾ ಗ್ಯಾಂಗ್ ಸರಣಿ ದರೋಡೆಯ ಬೆನ್ನುಹತ್ತಿದ ಪೊಲೀಸರಿಗೆ ಯಾವುದೋ ವಾಸನೆಯೊಂದು ದಟ್ಟಗೊಳ್ಳುತ್ತಿದೆ. ಅದು ರಣಪಾತಕಿಯೊಬ್ಬನ ತಲೆಗಾರಿಕೆಯೆಂದೇ ಖಾಕಿಯ ಜಾಡು ಹಿಡಿದವರೆಲ್ಲರೂ ಲೆಕ್ಕ ಹಾಕಲು ಕಾರಣವಿದೆ.


ಆತನ ಹೆಸರು ಆಟೋರಾಮ!

ಕೆಂದಾರಾಮ, ಧೋಬಿಘಾಟ್‌ರಾಮ, ಕೆಂಚಾರಾಮ ಇತ್ಯಾದಿ ಅನೇಕ ಹೆಸರುಗಳಿವೆ. ಐದಡಿ ಎತ್ತರದ ಗೌರವರ್ಣದ ಸ್ಪುರದ್ರೂಪಿ. ವಯಸ್ಸು ನಲವತ್ತು ಮೀರಿದೆ. ಈತನಕ ಬೆಂಗಳೂರು ಎಂತೆಂಥದ್ದೋ ಪಾತಕಿಗಳನ್ನು ಕಂಡಿದೆ. ಆದರೆ ಆಟೋರಾಮನ ವೈಖರಿ, ಖದರ್ರು, ಟೆಕ್ನಿಕ್ಕು ಮತ್ತು ಕಾರ್ಯತಂತ್ರಗಳಿಗೆ ಹೋಲಿಸಿದರೆ ಅರ್ಧ ಬೆಂಗಳೂರಿನ ರೌಡಿಗಳನ್ನೆಲ್ಲ ಈತ ಏಕಕಾಲಕ್ಕೆ ಸರಿತೂಗಬಲ್ಲ,

ಸದ್ಯ ಬೆಂಗಳೂರಿನಲ್ಲಿ ತಲೆಯೆತ್ತಿರುವ ಬಿಳಿ ಇಂಡಿಕಾ ದರೋಡೆಯ ಹಿಂದಿರುವುದು ಈ ಆಟೋರಾಮನೇ ಎಂಬ ಗುಮಾನಿ ಪೊಲೀಸರಿಗಿದೆ. ಆಟೋರಾಮನ ತಾಕತ್ತೇ ಅಂಥದ್ದು. ಒಂದಲ್ಲ ಎರಡು ಸರಣಿ ಹತ್ಯೆ ನಡೆಸಿ ಜೀವಾವಧಿ ಶಿಕ್ಷೆಗೀಡಾಗಿ ಈಗ ಪರಪ್ಪನ ಅಗ್ರಹಾರ ಜೈಲಲ್ಲಿ ಸಜಾ ಕೈದಿಯಾಗಿರುವ ಆಟೋರಾಮನ ಆಳ, ವಿಸ್ತಾರ ಭಯಾನಕ. ತುಮಕೂರಿನಿಂದ ಹಿಡಿದು ರಾಮನಗರದ ತನಕ, ಮಂಡ್ಯ ಮೈಸೂರು ಮೊದಲಾಗಿ ಕೋಲಾರದ ತನಕ ಕಮ್ಮಿಯೆಂದರೂ ಇನ್ನೂರು ಮಂದಿ ಹುಡುಗರ ಪಡೆಯೊಂದು ರಾಮನ ಬೆನ್ನಿಗಿದೆ.



ಆತ ಜೈಲು ಸೇರಿ ಇವತ್ತಿಗೆ ಐದು ವರ್ಷಗಳೇ ಕಳೆದಿವೆ. ಶ್ರೀನಗರ ಬಡಾವಣೆಯ ಬ್ರಹ್ಮಪುತ್ರಾ ನದಿ ರಸ್ತೆಯ ಕಳಸಯ್ಯನ ಮಗನಾದ ರಾಮ ಆಟೋ ಓಡಿಸಿಕೊಂಡಿದ್ದ. ಚಾಮರಾಜಪೇಟೆಯ ಹುಡುಗಿಯೊಬ್ಬಳನ್ನು ಹೊತ್ತು ತಂದು ಮದುವೆಯಾದ ಕಾರಣಕ್ಕೇ ಆಕೆಯ ಅಣ್ಣ ಈತನ ಮೇಲೆ ಅಟ್ಯಾಕ್ ಮಾಡಿದ್ದ. ಜಿದ್ದಿಗೆ ಬಿದ್ದು ನಡುರಸ್ತೆಯಲ್ಲೇ ಹುಡುಗಿಯ ಅಣ್ಣನನ್ನು ಕೊಚ್ಚಿಹಾಕಿದ. ಕೊಲೆಯಾದವನ ತಮ್ಮ ಹಠಕ್ಕೆ ಬಿದ್ದು ಕೋರ್ಟಿಗೆ ಬಂದು ಸಾಕ್ಷಿ ನುಡಿದು ಜೀವಾವಧಿ ಶಿಕ್ಷೆ ಕೊಡಿಸಿದ್ದ. ರಾಮ ಬಿಡಲಿಲ್ಲ, ತನ್ನ ವಿರುದ್ಧ ಸಾಕ್ಷಿ ಹೇಳಿದನೆಂಬ ಒಂದೇ ಕಾರಣಕ್ಕೆ ತಮ್ಮನನ್ನೂ ಮುಗಿಸಿಬಿಟ್ಟ.


ಸೈಕಲ್‌ರವಿ

ಈಗ ಜೀವಾವಧಿ ಶಿಕ್ಷೆಯಾಗಿರುವುದು ಈ ಎರಡು ಅನಾಹುತಕಾರಿ ಹತ್ಯೆಗಳ ಕಾರಣಕ್ಕೆ. ಹಾಗಂತ ರಾಮ ತನ್ನ ಹುಟ್ಟುಗುಣ ಬಿಡಲಿಲ್ಲ, ಜೈಲಲ್ಲಿ ಜೈಲಾಧಿಕಾರಿಗಳನ್ನೇ ಬುಟ್ಟಿಗೆ ಹಾಕಿಕೊಂಡು ವಿಲಕ್ಷಣ ಜೈಲು ಸಾಮ್ರಾಜ್ಯವೊಂದನ್ನು ಕಟ್ಟಿಕೊಂಡ. ಜೈಲಿಗೆ ಬರುವ ರಾಬರಿಗಳು, ಡಕಾಯಿತರು, ಪುಡಿರೌಡಿಗಳನ್ನು ಪಳಗಿಸಿಕೊಂಡು ಅವರಿಗೆ ಜೈಲಲ್ಲೇ ಫೈನಾನ್ಸ್ ಬಿಡತೊಡಗಿದ. ೧೫ರಿಂದ ೨೦ ಪರ್ಸೆಂಟ್ ಬಡ್ಡಿ. ಯಾರೇ ಕ್ರಿಮಿನಲ್ ಒಬ್ಬ ಜೈಲಿಗೆ ಬಂದನೆಂದರೆ ಆತನಿಗೆ ಯಾವ ಬ್ಯಾರಕ್ಕಿಗೆ ಹಾಕಿಸಬೇಕು, ಯಾವ ರೌಡಿಗ್ಯಾಂಗ್ ಇರುವ ಸೆಲ್‌ನಲ್ಲಿ ಆತನನ್ನು ಸೇರಿಸಬೇಕು, ಅದಕ್ಕೆ ಜೈಲಾಧಿಕಾರಿಗಳಿಗೆ ಎಷ್ಟು ತಿನ್ನಿಸಬೇಕು, ಜೈಲಲ್ಲಿರುವ ಯಾವ ಪಾತಕಿಗೆ ಯಾವ ವಕೀಲನನ್ನು ಹಿಡಿದು ಜಾಮೀನು ಮಾಡಿಸಬೇಕು, ಹೊರಗೆ ಯಾವ ರೌಡಿಯನ್ನು ಛೂಬಿಟ್ಟು ಯಾವ ಸಾಕ್ಷಿಗೆ ಆವಾಜ್ ಹಾಕಿಸಬೇಕು- ಇತ್ಯಾದಿ ಪ್ರತಿಯೊಂದನ್ನೂ ಜೈಲಲ್ಲಿದ್ದೇ ನಿಭಾಯಿಸುವವನು ಆಟೋರಾಮ.

ಜೈಲಿನ ಯಾವೊಂದು ನಿಯಮಾವಳಿಗಳಿಗೂ ಈತ ಬದ್ಧನಲ್ಲ, ಬೆಳಗ್ಗೆ 9ಕ್ಕೆ ಆರಾಮವಾಗಿ ಎದ್ದು ನಾಷ್ಟಾ ಎಂದು ಬಿರಿಯಾನಿ ತಿನ್ನುತ್ತಾನೆ. ನಂತರ ಎರಡು ಗಂಟೆಗಳ ಕಾಲ ಶಟಲ್‌ಕಾಕ್ ಆಡುತ್ತಾನೆ. ಮಧ್ಯಾಹ್ನ ಮಿಲ್ಟ್ರಿ ಹೋಟೆಲಿಂದ ಊಟ ಬರುತ್ತದೆ. ನಡುರಾತ್ರಿ ತನಕ ಜೈಲಲ್ಲೇ ಗುಂಡಿನ ಪಾರ್ಟಿ ನಡೆಸುತ್ತಾನೆ. ಈತನ ಅತೀ ದೊಡ್ಡ ಆದಾಯವಿರುವುದೇ ಜೈಲು ಫೈನಾನ್ಸಿಂಗ್ ದಂಧೆಯಲ್ಲಿ,

ಪೊಲೀಸರಿಗೆ ಸಿಕ್ಕಿಬಿದ್ದು ಜೈಲುಪಾಲಾಗುವ ರೌಡಿಗಳು, ಕಳ್ಳರು, ವಂಚಕರಿಗೆ ಈತ ಜೈಲೊಳಗೇ ಬಡ್ಡಿಗೆ ಬಿಡುತ್ತಾನೆ. ಕೆಲ ಜೈಲಾಧಿಕಾರಿಗಳು ಈತನನ್ನು ಮುಂದೆ ಬಿಟ್ಟು ಫೈನಾನ್ಸಿಂಗ್ ನಡೆಸುತ್ತಾರೆ. ಆಕರ್ಷಕ ಬಡ್ಡಿ ಕೊಡುತ್ತಾನಾದ್ದರಿಂದ ಈತ ಹೇಳಿದ್ದನ್ನೆಲ್ಲ ಜೈಲು ಸಿಬ್ಬಂದಿ ಕೇಳುತ್ತಾರೆ. ಇದಲ್ಲದೇ ಜೈಲೊಳಗೆ ಗಾಂಜಾ, ಅಫೀಮು ಮತ್ತು ಲಿಕ್ಕರ್ ಸರಬರಾಜನ್ನೂ ಈತ ಸಂಭಾಳಿಸುತ್ತಾನೆ. ಇದಲ್ಲದೇ ರಾಮ ಇತ್ತೀಚೆಗೆ ಕೈಯಿಟ್ಟದ್ದು ಸುಪಾರಿ ಕೊಲೆ ಮತ್ತು ರಿಮೋಟ್ ಡಕಾಯಿತಿಗೆ.


ಜೈಲಿನ ಯಾವುದಾದರೂ ಒಂದು ಗ್ಯಾಂಗನ್ನು ಜಾಮೀನು ಕೊಡಿಸಿ ಹೊರಬರಿಸುತ್ತಾನೆ. ನಂತರ ಅವರನ್ನೇ ಬಿಟ್ಟು ರಾಬರಿ ಡಕಾಯಿತಿ ನಡೆಸುವುದು. ಹೀಗೆ ತುಮಕೂರು, ದಾಬಸ್‌ಪೇಟೆ, ರಾಮನಗರ ಸುತ್ತಮುತ್ತಲು ಡಕಾಯಿತಿ ನಡೆಸಿಕೊಂಡಿದ್ದದ್ದು ರಾಮನ ಅಕ್ಕನ ಮಗ ಜೈರಾಮ್ ಉರ್ಫ್ ಮಂಜನ ಗ್ಯಾಂಗು. ಮೊನ್ನೆ ಅಂದರೆ ಜುಲೈ 14ರಂದು ತುಮಕೂರಿನ ಕ್ಯಾತ್ಸಂದ್ರ ಪೊಲೀಸರಿಗೆ ಜೈರಾಮನ ಗ್ಯಾಂಗ್ ಸಿಕ್ಕಿಬಿದ್ದಾಗ ಮಹ್ಮದ್ ಕಬೀರ್, ಉಮೇಶ್ ಉರ್ಫ್ ಕೆಂದ, ರಾಜ ಅಲಿಯಾಸ್ ರಾಜಶೇಖರ ಮತ್ತು ನಾಗರಾಜ ಎಂಬ ಅನಾಹುತಕಾರಿ ದರೋಡೆಕೋರರ ಹಿಂಡೇ ಸಿಕ್ಕಿಬಿತ್ತು,

ತುಮಕೂರು ಪೊಲೀಸರ ದಡ್ಡತನವೋ ಅಥವಾ ಸಿಕ್ಕಿಬಿದ್ದವರ ಕಿಲಾಡಿತನವೋ ಗೊತ್ತಿಲ್ಲ, ಜೈಲಲ್ಲಿದ್ದ ಕೆಂದಾರಾಮನೇ ತಮ್ಮ ಬಾಸು ಎಂದು ಜೈರಾಮ ಹೇಳಿಕೆ ಕೊಟ್ಟರೆ ತುಮಕೂರು ಪೊಲೀಸರು ಸಿಕ್ಕಿಬಿದ್ದವರೆಲ್ಲ ಕೋತಿರಾಮನ ಶಿಷ್ಯರೆಂದು ಪತ್ರಿಕಾ ಹೇಳಿಕೆ ಕೊಟ್ಟುಬಿಟ್ಟರು. ಇನ್ನೂ ಯಡವಟ್ಟೆಂದರೆ ಜೈರಾಮನ ಗ್ಯಾಂಗ್ ನಡೆಸಿದ್ದ ಎಲ್ಲಾ ಡಕಾಯಿತಿ ಕೇಸುಗಳಿಗೂ ಸದ್ಯ ಮೈಸೂರು ಜೈಲಲ್ಲಿರುವ ಮಚ್ಚನ ಸಹಚರ ಕೋತಿರಾಮನನ್ನೇ 6ನೇ ಆರೋಪಿಯನ್ನಾಗಿ ಆರೋಪ ಪಟ್ಟಿಯಲ್ಲಿ ದಾಖಲಿಸಿಬಿಟ್ಟರು.

ಯಾರೋ ನಡೆಸಿದ ದರೋಡೆಗೆ ತನ್ನ ಹೆಸರು ಸೇರಿಸಿದ ಪೊಲೀಸರ ವಿರುದ್ಧ ಕೋತಿರಾಮ ಜೈಲಲ್ಲೇ ಹಿಡಿಶಾಪ ಹಾಕಿದ. ಕಂಡಕಂಡವರ ಬಳಿ ಕಣ್ಣೀರಿಟ್ಟ. ಅನ್ಯಾಯವಾಗಿ ತನ್ನ ಹೆಸರನ್ನು ಸೇರಿಸಿದ್ದಕ್ಕೆ ಮಾನವ ಹಕ್ಕು ಆಯೋಗಕ್ಕೂ ದೂರು ಕೊಟ್ಟ. ಬಹುಶಃ ತುಮಕೂರು ಪೊಲೀಸ[ರಿಗೆ] ಜ್ಞಾನೋದಯವಾಗಿರಬೇಕು. ಆಗ ಕೋತಿರಾಮನ ಹೆಸ[ರನ್ನು] ಕೊಂಚ ಬದಲಿಸಿ ಕೋತಿರಾಮ ಅಲಿಯಾಸ್ ಆಟೋರಾ[ಮ] ಎಂದು ಮತ್ತೊಂದು ಎಫ್‌ಐಆರ್ ಹಾಕಿ ತಿದ್ದಿಕೊ[ಂಡ]ರಾದರೂ ಬಹುತೇಕ ಪತ್ರಿಕೆಗಳಾಗಲೇ ಕೋತಿರಾಮ[ನ] ಗ್ಯಾಂಗ್ ಎಂದೇ ಸುದ್ದಿ ಮಾಡಿಬಿಟ್ಟಿದ್ದವು.

ಒಂದೆಡೆ ತುಮಕೂರಿನಲ್ಲಿ ಜೈರಾಮನ ಗ್ಯಾ[ಂಗ್] ಪೊಲೀಸರ ಬಲೆಗೆ ಬಿದ್ದರೆ ಇತ್ತ ಜ್ಞಾನಭಾರತಿ ಪೊಲೀ[ಸ್] ಠಾಣೆಯ ಚಾಣಾಕ್ಷ ಇನ್ಸ್‌ಪೆಕ್ಟರ್ ಲಕ್ಷ್ಮೀನಾರಾಯಣ ಪ್ರಸಾ[ದ್] ಸುಂಕದಕಟ್ಟೆಯ ರವಿ ಗ್ಯಾಂಗನ್ನು ಹಿಡಿದು ಹಾಕಿದ್ದ[ರು]. ಟಾಟಾ ಸುಮೋ ಮತ್ತು ಆಲ್ಟೋ ಕಾರನ್ನು ಬಳಸಿಕೊಂ[ಡು] ಸರಿಸುಮಾರು ಒಂದು ಡಜನ್ ದರೋಡೆ ನಡೆಸಿತ್ತು [ಈ] ಗ್ಯಾಂಗ್. ಮನು ಉರ್ಫ್ ಸಿದ್ಲಿಂಗ, ಕೆಂಚ ಅಲಿಯಾ[ಸ್] ದೇವರಾಜ, ಆದರ್ಶ ಉರ್ಫ್ ಚಲವಾದಿ ಮತ್ತು ಗು[...] ಪ್ರಸಾದ್ ಮುಂತಾದ ನಟೋರಿಯಸ್ ಪಾತಕಿಗಳ ಗ್ಯಾಂ[ಗ್] ಕಟ್ಟಿಕೊಂಡು ರವಿ ಅರ್ಧ ಬೆಂಗಳೂರಿನುದ್ದಕ್ಕೂ ಕ್ರೈ[ಮ್] ಎಸಗಿದ್ದ. ಚಿನ್ನ, ಪಿಸ್ತೂಲು, ತರಹೇವಾರಿ ಕಾರುಗ[ಳು] ಜಪ್ತಿಯಾದುವು. ಬಾಯಿ ಬಿಡಿಸಿದ ಜ್ಞಾನಭಾ[ರತಿ] ಪೊಲೀಸರಿಗೆ ಎಂಥ ಅಚ್ಚರಿ ಕಾದಿತ್ತೆಂದರೆ ರವಿ ಗ್ಯಾಂ[ಗಿಗೆ] ರಿವಾಲ್ವರ್, ಮೊಬೈಲ್ ಕೊಡಿಸಿದ್ದೇ ಆಟೋರಾಮ!


ತಾವು ದೋಚಿದ ಬಹುಪಾಲನ್ನು ಜೈಲಲ್ಲಿರು[ವ] ರಾಮನಿಗೆ ಕೊಟ್ಟಿದ್ದೇವೆಂದು ರವಿ ಬಾಯಿಬಿಟ್ಟ. [...] ಪಿಸ್ತೂಲನ್ನು ಈ ಹಿಂದೆ ಯಲಹಂಕದ ಬುಲೆಟ್ [ರವಿ] ಗಿಫ್ಟಾಗಿ ಆಟೋರಾಮನಿಗೆ ಕೊಟ್ಟಿದ್ದನಂತೆ. ಹಾಗೆ ಸುಂ[ಕದ]ಕಟ್ಟೆ ರವಿಯನ್ನು ಬಿಟ್ಟು ರಾಬರಿ, ಡಕಾಯ[ಿತಿ] ಮಾಡಿಸುತ್ತಿದ್ದ ಆಟೋರಾಮನ ಅತೀಮು[ಖ್ಯ] ಉದ್ದೇಶ ಇದೇ ಗ್ಯಾಂಗ್ ಮೂಲಕ ಸೈಕಲ್ [ರವಿ] ಶಿಷ್ಯ ವಿನೋದ್ ಅಲಿಯಾಸ್ ಕತ್ತಲೆ ಎಂಬಾತನ[ನ್ನು] ಮುಗಿಸುವುದಂತೆ. ಸದ್ಯ ಬೆಂಗಳೂರು ಅಂಡರ್‌ವ[ರ್ಲ್ಡ್] ಮಟ್ಟಿಗೆ ರಾಮನ ಪಕ್ಕಾ ದುಷ್ಮನ್ ಎಂದರೆ ಸೈಕ[ಲ್] ರವಿಯೇ. ಯಾವುದೋ ಸುಪಾರಿ ಕೊಲೆಯನ್ನು ತನ್ನ[...] ಮಾಡಿಸಿ ರವಿ ಅದಕ್ಕೆ ಕೊಡಬೇಕಾದ ದುಡ್ಡು ಕೊಟ[್ಟಿಲ್ಲ] ಎಂದು ರಾಮ ದುಮುಗುಡುತ್ತಿದ್ದಾನೆ. ಸೈಕಲ್ [ರವಿ] ವಿನೋದನನ್ನು ಆತ ಮೊದಲು ಮುಗಿಸಬೇಕಂತೆ. ಮೊದ[ಲು] ತುಮಕೂರಿನಲ್ಲಿ ಸಿಕ್ಕಿಬಿದ್ದ ದರೋಡ[ೆ] ಗ್ಯಾಂಗ್, ಈಗ ಜ್ಞಾನಭಾರತಿ ಪೊಲೀಸರು ಹಿಡಿ[ದ] ಸುಂಕದಕಟ್ಟೆ ರವಿ ಗ್ಯಾಂಗ್ ಅಲ್ಲದೇ ಇಂಥ ಹತ್ತಾರು ಗ್ಯಾಂಗ್‌ಗಳನ್ನು ಜೈಲಲ್ಲಿ ಕೂತೇ ಆಟೋ ರಾಮ ಸಂಭಾಳಿಸುತ್ತಿದ್ದಾನೆ. ಏಕೆಂದರೆ ರ[ವಿ] ಗ್ಯಾಂಗ್ ಜ್ಞಾನಭಾ[ರತಿ] ಪೊಲೀಸರ ವಶದಲ್ಲಿರುವಾಗಲೇ ಬಿಳಿ ಇಂಡಿಕಾ ದರೋಡೆ ನಿರಾತಂಕವಾಗಿ ನಡೆಯುತ್ತಿದೆ.



ಬುಲೆಟ್ ರವಿ

ಆಟೋರಾಮನ ಹುತ್ತದಲ್ಲಿ ಇನ್ನೂ ಎಂತೆಂಥ ಹಾವುಗಳಿವೆಯೋ ಬೆಂಗಳೂರಿಗೆ ಏನೆಲ್ಲ ಅನಾಹುತಕಾದಿದೆಯೋ ಬಲ್ಲವರ್ಯಾರು?

• ರಾ.ಸೋಮನಾ[ಥ್]

ಅಕ್ರಮ ಗಣಿಗಾರಿಕೆ
ಲೋಕಾಯುಕ್ತರ ತನಿಖಾ ವರದಿ
ಲಂಕೇಶ್ ಪ್ರಕಾಶನ
ಎಲ್ಲೆಡೆ ಲಭ್ಯ
ನಂ. 9, ಪೂರ್ವ ಆಂಜನೇಯ ಗುಡಿ ರಸ್ತೆ,
ಬಸವನಗುಡಿ, ಬೆಂಗಳೂರು - 560 004
☎ 26676427
Price: 100/-






ಥೈಲೆಂಡ್‌ನಲ್ಲಿ ತಗುಲಿಕೊಂಡ ಡ್ರಗ್ ದೊರೆ ಸಂತೋಷ್ ಶೆಟ್ಟಿ

ಮುಂಬೈ ಹಾಗೂ ಭಾರತದಲ್ಲಿ ಮಾಡಬಾರದ್ದು ಮಾಡಿ ವಿದೇಶ ಸೇರಿಕೊಳ್ಳುವುದು ಅಂತಾರಾಷ್ಟ್ರೀಯ ಪಾತಕಿಗಳಿಗೆ ಖಯಾಲಿಯಾಗಿ ಹೋಗಿವೆ. ದಾವೂದ್ ಇಬ್ರಾಹಿಂ ಕೂಡಾ ಇದೇ ತಂತ್ರ ಅನುಸರಿಸಿ ಭಾರತವನ್ನು ಸತಾಯಿಸುತ್ತಿರುವುದು ಕಣ್ಣಮುಂದಿನ ಸತ್ಯ. ಇಂಥಾ ಸಂದರ್ಭದಲ್ಲಿ ಸಂತೋಷ್ ಶೆಟ್ಟಿಯನ್ನು ವಿದೇಶದಿಂದಲೇ ಹೆಡೆಮುರಿಗೆ ಕಟ್ಟಿ ತಂದಿರುವುದು ಎಲ್ಲಾ ಪಾತಕಿಗಳಿಗೂ ಎಚ್ಚರಿಕೆಯ ಕರೆಗಂಟೆಯಂತಿದೆ.




ಮುಂಬೈನ ಪಾತಕಲೋಕ ಹಾಗೂ ಅದಕ್ಕೆ ಬೆಸೆದು ...ಡಿರುವ ಮಾಫಿಯಾ ಜಗತ್ತಿನಲ್ಲಿ ಸಂಚಲನ ಮೂಡಿದೆ. ...ಟಾ ರಾಜನ್‌ನ ಮಾಜಿ ಭಂಟ ಹಾಗೂ ಹಾಲಿ ...ನ್ ಸಂತೋಷ್ ಶೆಟ್ಟಿ ಮುಂಬೈ ಕ್ರೈಂ ಬ್ರಾಂಚ್ ...ಲೀಸರಿಗೆ ತಗುಲಿಕೊಂಡಿರುವುದು ಅದಕ್ಕೆ ಕಾರಣ. ...! ದಾವೂದ್ ಇಬ್ರಾಹಿಂಗೇ ಸೆಡ್ಡು ಹೊಡೆದ ...ರಾಷ್ಟ್ರೀಯ ಮಾದಕದ್ರವ್ಯ ಪೂರೈಕೆದಾರ, ಅತ್ಯಂತ ...ಾಕಿ ಸ್ಮಗ್ಲರ್ ಮತ್ತು ಭಯಾನಕ ಸುಪಾರಿ ಹಂತಕ. ...ಶವನಿಗೆ ಹಗ್ಗ ಹೊಸೆಯಲು ಅವಿರತವಾಗಿ ...ತ್ತಿಸುತ್ತಿದ್ದ ಪೊಲೀಸರಿಗೆ ಪದೇಪದೆ ಎದುರಾದದ್ದು ...ಶೆ ಮಾತ್ರ. ಆದರೆ ಮೊನ್ನೆ ದಿನ ತಪ್ಪಿಸಿಕೊಳ್ಳಲು ...ವೇ ಇಲ್ಲದಂತೆ ದೂರದ ಥೈಲೆಂಡ್ ದೇಶದಲ್ಲಿ ಶೆಟ್ಟಿ ...ಲಿಕೊಂಡಿದ್ದಾನೆ.

...ಲಾಯರ್ ಶಾಹಿದ್ ಅಜ್ಮಿ ಹಾಗೂ ...ಟಾ ರಾಜನ್ ಭಂಟ ಫಾನ್‌ಶಾನ್ ...ಾತನ ಕೊಲೆ ಕೇಸಿನ ಮೂಲಕವೇ ...ಬೈ ಪೊಲೀಸರು ಸಂತೋಷ್ ಶೆಟ್ಟಿಗೆ ... ಬೀಸಿದ್ದರು. ಈತನ ಮೇಲೆ ...ಬೈನ ಬಹುತೇಕ ಠಾಣೆಗಳಲ್ಲಿ ಸರಣಿ ...ಗಳಿವೆ. ಶೆಟ್ಟಿಯ ಅಕೌಂಟಿನಲ್ಲಿ ...ಲೀಸರ ಎಣಿಕೆಗೆ ಸಿಗದ ಅನೇಕಾನೇಕ ...ಿ ಪ್ರಕರಣಗಳು, ವಂಚನೆಗಳೂ ಇವೆ. ...ನ ಬದುಕನ್ನು ಎತ್ತಲಿಂದ ದಿಟ್ಟಿಸಿದರೂ ...-ವಂಚನೆಯ ಬಗ್ಗಡಗಳು ಬೆಚ್ಚಿ ...ುವಂತೆ ಹೊರಬರುತ್ತವೆ. ನಿಖರವಾಗಿ ಹೇಳಬೇಕೆಂದರೆ, ... ಯಾವ ದೇಶದ ಎಂಥಾ ಕಠಿಣ ಭದ್ರತಾ ವ್ಯವಸ್ಥೆಯನ್ನೂ ...ತ್ತಿ ಹೊಡೆಸಬಲ್ಲ ಖತರ್ನಾಕ್. ಹಣದ ಹರಿವಿಗೆ ಅಡ್ಡ ...ಾತ ಎಂಥಾ ದೊಡ್ಡ ಡಾನ್ ಆಗಿದ್ದರೂ ತಿರುಗಿಬಿದ್ದು ...ಸಿಕೊಳ್ಳಬಲ್ಲ ಪ್ರಳಯಾಂತಕ!



...ಮುಂಬೈ ಕ್ರೈಂ ಬ್ರಾಂಚ್‌ನ ಜಂಟಿ ...ುಕ್ತ ಹಿಮಾಂಶು ರಾಯ್ ಎದುರಿಗೆ ...ೋಷ್ ಶೆಟ್ಟಿ ವಿರುದ್ಧ ಪ್ರಮುಖವಾಗಿ ...ವದು ಪ್ರಕರಣಗಳ ದಾಖಲೆಗಳಿದ್ದವು. ...ವಲ್ಲೊಂದು ಲಾಯರ್ ಶಾಹಿದ್ ಅಜ್ಮಿ ...ೂ ಛೋಟಾ ಭಂಟ ಫಾನ್‌ಶಾನ್ ...ಿ ಪ್ರಕರಣಗಳಾದರೆ, ಮಿಕ್ಕ ಹತ್ತು ...ರಣಗಳು ಸಂತೋಷ್ ಶೆಟ್ಟಿಯ ...ರಾಷ್ಟ್ರೀಯ ಡ್ರಗ್ ಜಾಲ, ಸುಪಾರಿ ...ೆಗಳಿಗೆ ಸಾಕ್ಷಿಯಾಗಿದ್ದವು. ಈ ಎಲ್ಲ ...ಣಗಳ ತನಿಖೆಯ ಸಾರಾಂಶವೇ ಆತ ...ಾ ಪಾತಕಿಯೆಂಬುದಕ್ಕೆ ಪುರಾವೆಯಂತಿತ್ತು, ...ೊಂದು ಗುಟ್ಟು ಕಾಣಿಸಬಿದ್ದರೆ ಬರುತ್ತಿರಲಿಲ್ಲವೆಂಬ ವಿಚಾರ




ಸ್ಪಷ್ಟವಾಗುತ್ತಲೇ ಹಿಮಾಂಶು ರಾಯ್ ಶೆಟ್ಟಿಯ ಬೇಟೆಗೆ ಮುಹೂರ್ತ ಫಿಕ್ಸ್ ಮಾಡಿದ್ದರು.


ಅಂತಾರಾಷ್ಟ್ರೀಯ ಪಾತಕಿಯಾಗಿ ಬೆಳೆದು ರಣದಂಧೆಗಳ ಡಾನ್ ಆಗಿರುವ ಸಂತೋಷ್ ಶೆಟ್ಟಿ ಮೂಲತಃ ದಕ್ಷಿಣ ಮುಂಬೈನವನು. ವಯಸ್ಸು ಹತ್ತಿರತ್ತಿರ ನಲವತ್ತೆಂಟಾಗಿರಬಹುದು. ಆತನ ಪಾತಕ ಪುರಾಣಗಳಿಗೆ ವಯಸ್ಸು ಎಷ್ಟಾಗಿದೆಯೋ..... ನಿಖರವಿಲ್ಲ! ಸ್ಥಿತಿವಂತ ಕುಟುಂಬ, ಕೈತುಂಬಾ ಸಂಬಳದ ಕೆಲಸವನ್ನೆಲ್ಲಾ ತೊರೆದ ಶೆಟ್ಟಿ ಪುಡಿ ಪುಢಾರಿಗಳ ಗುಂಪು ಸೇರಿದವನು 1980 ರ ಹೊತ್ತಿಗೆ ಗೋಲ್ಡ್ ಸ್ಮಗ್ಲಿಂಗ್ ದಂಧೆಗೆ ಕೈಹಾಕಿದ. ಇದರಲ್ಲಿ ಅತ್ಯಂತ ವೇಗದಲ್ಲಿ ಕಾಸು ಮಾಡಿಕೊಂಡ ಶೆಟ್ಟಿ 1998 ರಲ್ಲಿ ಮುಂಬೈನ ಶಹರ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರೆಡ್‌ಹ್ಯಾಂಡಾಗಿ ತಗುಲಿಕೊಂಡ.

ದಾವೂದ್ ಈತನ ರೋಲ್ ಮಾಡೆಲ್!

ಈ ಪ್ರಕರಣದಿಂದ ಬಿಡುಗಡೆಯಾದ ಬಳಿಕ ಹಳೇ ದಂಧೆಯ ಹೊಸಾ ದಿಕ್ಕುಗಳತ್ತ ಕೈಚಾಚಲಾರಂಭಿಸಿದ. ಈತನಿಗೆ ಲಾಗಾಯ್ತಿನಿಂದಲೂ ಪಾತಕಿ ದಾವೂದ್ ಇಬ್ರಾಹಿಂ ರೋಲ್‌ಮಾಡೆಲ್ ಆಗಿದ್ದ. ಪಾತಕದ ಹಾದಿಯಲ್ಲಿ ಸಿಕ್ಕ ಕಾಂಟ್ಯಾಕ್ಟುಗಳಿಂದಾಗಿ ದಾವೂದ್‌ನ ದಂಧೆಯ ರೂಪುರೇಷೆ, ಕಾರ್ಯವೈಖರಿಗಳ ಬಗ್ಗೆ ಮಾಹಿತಿ ಕಲೆ ಹಾಕಲಾರಂಭಿಸಿದ. ಈ ನಡುವೆಯೇ ಶೆಟ್ಟಿಯ ದಂಧೆ-ದಗಲ್ಬಾಜಿಗಳು ಹುಲುಸಾಗಿ ಬೆಳೆಯಲಾರಂಭಿಸಿದವು. ತಾನೂ ಕೂಡಾ ದಾವೂದ್‌ನಂತೆ ದಂಧೆ ನಡೆಸಬೇಕೆಂಬ ತೆವಲೂ ಕೂಡ ವಿಪರೀತವಾಗಿ ಅಂಟಿಕೊಂಡಿತ್ತು. ಇದೇ ಸಂದರ್ಭದಲ್ಲಿ ತನ್ನಂತಹುದೇ ಸ್ಮಗ್ಲಿಂಗ್ ದೊರೆಯೊಬ್ಬನೊಂದಿಗೆ ಶೆಟ್ಟಿ ಮಜಾ ಉಡಾಯಿಸಲು ಗೋವಾಗೆ ಹೋಗಿದ್ದ. ಈ ಸಂದರ್ಭದಲ್ಲೇ ಆತನಿಗೆ ಗೋವಾದಲ್ಲಿದ್ದ ಡ್ರಗ್ ಮಾರಾಟ ಜಾಲದ ಆಳ ಅಗಲಗಳ ಪರಿಚಯವಾಗಿ ಅದನ್ನೇ ಉದ್ಯಮದಂತೆ ನೆಚ್ಚಿಕೊಂಡ. ಇದೊಂದು ದಂಧೆಯಿಂದಲೇ ಕೋಟ್ಯಾಧೀಶನಾದ. ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲೆಲ್ಲಾ ದಾವೂದ್ ಸೇರಿದಂತೆ ಹಳೇ ಡಾನ್‌ಗಳನ್ನೇ ಮೀರಿಸುವಂತೆ ಡ್ರಗ್ ದಂಧೆ ನಡೆಸಲಾರಂಭಿಸಿದ.



ಹೀಗೆ ಅಡ್ನಾಡಿ ದಂಧೆಗಳಿಂದ ಕಾಸು ಸೇರುತ್ತಲೇ ಸಾಮ್ರಾಜ್ಯ ವಿಸ್ತರಣೆಗೆ ನಿಂತ ಶೆಟ್ಟಿ 1990ರಲ್ಲಿ ಮುಂಬೈನ ವಿಕ್ರೋಲಿ ಎಂಬಲ್ಲಿ ಪೊಲೀಸರಿಗೆ ತಗುಲಿಕೊಂಡ. ಈ ಸಂದರ್ಭದಲ್ಲಿ ಅಖಂಡ 600 ಕೆಜಿ ಹಶೀಶ್ ಶೆಟ್ಟಿ ಬಳಿಯಿತ್ತು. ಆದಾಗಿ ನಾಲ್ಕು ವರ್ಷಗಳ ಬಳಿಕ 20 ಲಕ್ಷ ನಗದಿನೊಂದಿಗೆ ಸಿಕ್ಕಿಬಿದ್ದ. ಇದರಿಂದಲೂ ಬಿಡುಗಡೆ ಹೊಂದಿದವನು ಅದೇ ವರ್ಷ 1,600 ಕೆ.ಜಿ. ಹಶಿಶ್‌ನೊಂದಿಗೆ ಮತ್ತೊಮ್ಮೆ ಅರೆಸ್ಟಾದ. ಇದೆಲ್ಲದರಿಂದ ಶೆಟ್ಟಿಯ ದಂಧೆಯ ಭಯಾನಕ ಸ್ವರೂಪ ಅರ್ಥೈಸಿಕೊಂಡ ಮುಂಬೈ ಕೋರ್ಟ್ ಆತನನ್ನು ನಾಸಿಕ್‌ನ ಸೆಂಟ್ರಲ್ ಜೈಲಿಗಟ್ಟಿತು. ಶೆಟ್ಟಿಯ ಪಾತಕ ಅಧ್ಯಾಯ ಆರಂಭಗೊಂಡಿದ್ದು ಆಗಿನಿಂದಲೇ!



ಅದಾಗಲೇ ದತ್ತಾ ಸಮಂತ್ ಎಂಬ ಕಾರ್ಮಿಕರ ನಾಯಕನನ್ನು ಕೊಲೆ ಕೇಸಿನಲ್ಲಿ ಛೋಟಾ ರಾಜನ್‌ನ ಭಂಟರು ನಾಸಿಕ್‌ನ ಸೆಂಟ್ರಲ್ ಜೈಲು ಪಾಲಾಗಿದ್ದರು. ಅದರಲ್ಲಿ ಭರತ್ ನೇಪಾಳಿಯೂ ಒಬ್ಬ. ಈತ ರಾಜನ್‌ನ ಬಲಗೈ ಭಂಟ. ಆತನ ಎಲ್ಲಾ ದಂಧೆಗಳು ಹಾಗೂ ಸುಪಾರಿ ಕೊಲೆಗಳನ್ನೆಲ್ಲ ನಿಭಾಯಿಸುತ್ತಿದ್ದದ್ದೇ ಭರತ್. ಛೋಟಾ ರಾಜನ್ ದಾವೂದ್ ಇಬ್ರಾಹಿಂನಿಂದ ದೂರಾಗಿ ಸ್ವತಂತ್ರ ತಂಡ ರಚಿಸಿದನಲ್ಲಾ? ಅದಕ್ಕೆ ಮುಖ್ಯ ಸ್ತಂಭವಾಗಿದ್ದದ್ದು ಕೂಡಾ ಇದೇ ಭರತ್ ನೇಪಾಳಿ. ಸಂತೋಷ್ ಶೆಟ್ಟಿ ಬಹುಬೇಗನೆ ಭರತ್‌ನ ಸ್ನೇಹ ಗಿಟ್ಟಿಸಿದ. ಜೈಲೊಳಗೇ ಇವರಿಬ್ಬರೂ ಜೊತೆಗೂಡಿ ಮುಂದಿನ ದಂಧೆ, ಪಾತಕಕೃತ್ಯಗಳಿಗೆ ಸ್ಕೆಚ್ಚು ಸಿದ್ಧಪಡಿಸಿಕೊಂಡರು.

ತದನಂತರ ಬಿಡುಗಡೆಯಾದ ಬಳಿಕ 1999 ರ ಸುಮಾರಿಗೆ ಶೆಟ್ಟಿ ಮತ್ತು ಭರತ್ ನೇಪಾಳಿ ಬ್ಯಾಂಕಾಕ್ ಅನ್ನು ದಂಧೆಯ ನೆಲೆಯಾಗಿ ಆರಿಸಿಕೊಂಡು ಎಲ್ಲವನ್ನು ಅಲ್ಲಿಂದಲೇ ಕಂಟ್ರೋಲ್ ಮಾಡತೊಡಗಿದರು. ಇವರ ಸಕಲ ನಿಷ್ಠೆಯೂ ಛೋಟಾ ರಾಜನ್‌ನ ಪದತಲದಲ್ಲಿತ್ತು. ಈ ನಡುವೆ 2000 ನೇ ಇಸವಿಯಲ್ಲಿ ರಾಜನ್ ರೋಹಿತ್ ವರ್ಮಾ ಎಂಬಾತನ ಜೊತೆ ಥೈಲೆಂಡ್‌ಗೆ ತೆರಳಿದ್ದ. ಈ ವಿಚಾರ ತಿಳಿದ ಛೋಟಾ ಶಕೀಲ್ ಆತನ ಕೊಲೆಗೆ ಸಂಚು ರೂಪಿಸಿ ಭಂಟರನ್ನು ಛೂ ಬಿಟ್ಟಿದ್ದ. ರಾಜನ್ ಮೇಲೆ ಭೀಕರ ಆಕ್ರಮಣ ನಡೆಯಿತಾದರೂ ರಾಜನ್ ತಪ್ಪಿಸಿಕೊಂಡು ವರ್ಮ ಮಾತ್ರ ಮರಣ ಹೊಂದಿದ್ದ. ಈ ಹಲ್ಲೆಯಲ್ಲಿ ರಾಜನ್ ತೀವ್ರ ಪೆಟ್ಟುಗಳಿಂದ ಬ್ಯಾಂಕಾಕ್ ಆಸ್ಪತ್ರೆಯೊಂದರಲ್ಲಿ ದಾಖಲಾದ. ಈ ವಿಚಾರ ತಿಳಿದ ಥಾಯ್ ಪೊಲೀಸರು ಏಕಾಏಕಿ ಮುತ್ತಿಗೆ ಹಾಕಿದರೆ ಸಂತೋಷ್ ಶೆಟ್ಟಿಯೇ ನಾಜೂಕಾಗಿ ರಾಜನ್‌ನನ್ನು ಪಾರು ಮಾಡಿದ್ದ. ಈ ಮೂಲಕ ರಾಜನ್‌ಗೆ ತೀರಾ ಹತ್ತಿರದಾವನಾಗಿ ಬದಲಾದ ಶೆಟ್ಟಿ ಆತನ ತಂಡದ ಕಾಯಂ ಸದಸ್ಯನಾದ.

ಅದುವರೆಗೆ ಸಂತೋಷ್ ಶೆಟ್ಟಿ ಮಹಾ ಚಾಣಾಕ್ಷ ಸ್ಮಗ್ಲರ್ ಮತ್ತು ಡ್ರಗ್ಸ್ ದಂಧೆಕೋರನಾಗಿದ್ದನಷ್ಟೆ. ಯಾವಾಗ ರಾಜನ್‌ನ ಸಖ್ಯ ದೊರೆಯಿತೋ ಆಗಿನಿಂದಲೇ ಪಾತಕದ ಇನ್ನೊಂದು ಅಧ್ಯಾಯ ಆರಂಭಿಸಿದ. ರಾಜನ್ ತನ್ನ ಬಳಿ ಬಂದ ಸುಪಾರಿ ಕೊಲೆಗಳನ್ನು ಭರತ್ ನೇಪಾಳಿ ಹಾಗೂ ಶೆಟ್ಟಿಗೆ ಒಪ್ಪಿಸಲಾರಂಭಿಸಿದ. ಈ ಹಣದ ರುಚಿಕಂಡ ಶೆಟ್ಟಿ ಸಾಲುಸಾಲು ಸುಪಾರಿ ಕೊಲೆಗಳ ಮೂಲಕ ಕುಖ್ಯಾತನಾದ.

ಛೋಟಾ ರಾಜನ್ ಕೂಡಾ ಮಾಡದ ದಂಧೆಗಳಿಲ್ಲ, ಅದರಲ್ಲಿ ಮಾದಕ ದ್ರವ್ಯ ಮಾರಾಟವೂ ಒಂದು. ಸಂತೋಷ್ ಶೆಟ್ಟಿ ಅದರಲ್ಲಿ ಬಹುತೇಕ ಪಳಗಿದ್ದರಿಂದ ರಾಜನ್ ತನ್ನ ಡ್ರಗ್ಸ್ ಸಾಮ್ರಾಜ್ಯದ ಉಸ್ತುವಾರಿಯನ್ನೊಪ್ಪಿಸಿದ. ಹಫ್ತಾ ವಸೂಲಿ ಹಾಗೂ ಸುಪಾರಿ ಕೊಲೆಗಳ ಜವಾಬ್ದಾರಿ ಭರತ್ ನೇಪಾಳಿಯ ಪಾಲಾಯಿತು. ಪಕ್ಕಾ ಪ್ರಳಯಾಂತಕರಾದ ನೇಪಾಳಿ ಮತ್ತು ಶೆಟ್ಟಿ ದಂಧೆಗಳ ಗುರು ರಾಜನ್‌ನನ್ನೇ ಯಾಮಾರಿಸಿ ಕಾಸು ಹೊಡೆಯಲಾರಂಭಿಸಿದರು. ಈ ವಿಚಾರ ತಿಳಿದರೂ ಚಾಣಾಕ್ಷ ರಾಜನ್ ಪ್ರಶ್ನಿಸಲು ಹೋಗಲಿಲ್ಲ, ಬದಲಾಗಿ ಭೂಗತದ ಟ್ರಿಕ್ಸ್‌ನಂತೆ ಇವರಿಬ್ಬರಿಗೆ ಪರ್ಯಾಯವಾಗಿ ಒಬ್ಬನನ್ನು ಬೆಳೆಸಲು ಹವಣಿಸಲಾರಂಭಿಸಿದ. ಆಗ

9ನೇ ಪುಟಕ್ಕೆ....

ಶ್ರೀಮಂತ, ಸುಸಂಸ್ಕೃತ ಹಿನ್ನೆಲೆ

ಸಂತೋಷ್ ಶೆಟ್ಟಿಯ ಕೌಟುಂಬಿಕ ಹಿನ್ನೆಲೆ ಕೆದಕಿದರೆ ನಿಜಕ್ಕೂ ಆಶ್ಚರ್ಯ, ವಿಷಾದ ಆವರಿಸುತ್ತದೆ. ...ಾಕೆಂದರೀತ ಸುಸಂಸ್ಕೃತ ಹಾಗೂ ಶ್ರೀಮಂತ ಮನೆತನದಿಂದ ಬಂದಾತ.

ಶೆಟ್ಟಿಯ ತಂದೆ ಹೋಟೆಲ್ ಉದ್ಯಮಿ. ಇವರ ಮಾಲೀಕತ್ವದ 'ರಿಶಿ' ಹೆಸರಿನ ಅನೇಕ ಹೋಟೆಲ್‌ಗಳು ...ಮುಂಬೈನ ಪ್ರತಿಷ್ಠಿತ ಏರಿಯಾಗಳಲ್ಲಿ ಕಾರ್ಯಾಚರಿಸುತ್ತಿದ್ದವು. ವಾರ್ಡನ್ ರಸ್ತೆಯ ದೊಡ್ಡ ಬಂಗಲೆಯೊಂದರಲ್ಲಿ ... ಕುಟುಂಬ ವಾಸವಾಗಿತ್ತು. ಸಂತೋಷ್ ಶೆಟ್ಟಿಗೆ ಆರಂಭದಿಂದಲೂ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗದ ...ವಕಾಶ ದೊರೆತಿತ್ತು. ಶಫೀರ್ಸ್ ಕಾಲೇಜಿನಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಅನ್ನೂ ಮುಗಿಸಿದ್ದ. ...ಲ್ಲಾ ಸರಿಯಾಗಿದ್ದಿದ್ದರೆ ಶೆಟ್ಟಿ ತಂದೆ ಕಟ್ಟಿ ಬೆಳೆಸಿದ್ದ ಉದ್ಯಮವನ್ನು ಚೆಂದಗೆ ನೋಡಿಕೊಂಡು ಬದುಕು ...ಕೊಳ್ಳಬಹುದಿತ್ತು. ಆದರಾತ ಮಲ್ಲಿಗೆ ಪ್ರಗಗಳ ವಾಸನಾಮತ್ತಾ ಹೋದ. ಕೊನೆಗೆ ಅವನ್ನ ಮಾಡುವ ...ಮೂಲಕವೇ ತನ್ನ ಚಟಕ್ಕೆ ಹಣ ಹೊಂದಿಸಲಾರಂಭಿಸಿದ. ಇದೇ ಚಟ ಆತನನ್ನೀಗ ಹೊರಬರಲಾರದಂತೆ ...ಲಿಗೆ ಗದುಮಿದೆ.

ಪೊಲೀಸ್ ಅಧಿಕಾರಿಗಳೇ ಹೇಳುವ ಪ್ರಕಾರ ಈಗ ಶೆಟ್ಟಿ ವಿಪರೀತ ಡ್ರಗ್ ಅಡಿಕ್ಟ್ ಆಗಿದ್ದಾನೆ. ಕೊಕೇನ್ ...ಲ್ಲದಿದ್ದರೆ ಬದುಕಲಾರದ ಹಂತ ತಲುಪಿದ್ದಾನೆ.

ಪಾರು ಮಾಡಲು ಬಂದಳು ಪ್ರೇಯಸಿ!

ದುಬೈಗೆ ಆತುರಾತುರವಾಗಿ ಹೊರಟುನಿಂತಿದ್ದ ಶೆಟ್ಟಿ ಸೀದಾ ಜೈಲು ತಲುಪುವ ಸ್ಥಿತಿ ಬರುತ್ತಲೇ ಬ್ಯಾಂಕಾಕ್ ನೆಲದಲ್ಲಿ ಹೊಸತೊಂದು ಡ್ರಾಮಾ ಶುರುವಾಗಿತ್ತು!

ವಿಪರೀತ ಹುಡುಗಿಯರ ಹುಚ್ಚು ಅಂಟಿಸಿಕೊಂಡಿದ್ದ ಶೆಟ್ಟಿಗೆ ಹೋದಲ್ಲೆಲ್ಲಾ ಪ್ರೇಯಸಿಯರಿದ್ದರು. ಈತ ಹೆಚ್ಚಿನ ಸಮಯ ಬ್ಯಾಂಕಾಕ್‌ನಲ್ಲೇ ಇರುತ್ತಿದ್ದರಿಂದ ಅಲ್ಲೇ ಒಬ್ಬಳನ್ನು ಪರ್ಮನೆಂಟ್ ಪ್ರೇಯಸಿಯನ್ನಾಗಿ ಗೊತ್ತುಪಡಿಸಿಕೊಂಡಿದ್ದ. ಶೆಟ್ಟಿಯ ದೆಸೆಯಿಂದಲೇ ಕೈತುಂಬಾ ಕಾಸು ಮಾಡಿಕೊಂಡ ಆಕೆ ವೈಭವದ ಜೀವನ ನಡೆಸುತ್ತಿದ್ದಳು.

ಶೆಟ್ಟಿಯನ್ನು ಭಾರತದ ಪೊಲೀಸರು ಎಳೆದೊಯ್ಯುವ ಸುದ್ದಿ ಬಂದದ್ದೇ ಕಂಗಾಲಾದವಳು ಆತನ ಪ್ರೇಯಸಿ. ಶೆಟ್ಟಿಯ ಇತರೆ ಭಂಟರಿಗೂ ಸಹ ಆತ ಕಾಯಂ ಆಗಿ ಜೈಲು ಪಾಲಾಗುವುದು ಖಾತರಿಯಾಗಿತ್ತಲ್ಲ? ಅವನ್ನು ತಾತ್ಕಾಲಿಕವಾಗಿ ತಪ್ಪಿಸಲೆಂದು ವ್ಯವಸ್ಥಿತ ಸಂಚೊಂದನ್ನು ಹೂಡಿದರು.

ಅದರನ್ವಯ ಆಕೆ ಶೆಟ್ಟಿಯ ವಿರುದ್ಧವೇ ಕೇಸು ಹಾಕುವ ನಾಟಕವಾಡಿ ಆತ ಹಣಕಾಸಿನ ಸಂಬಂಧ ವಂಚಿಸಿ ಕಿರುಕುಳ ನೀಡುತ್ತಿದ್ದಾನೆಂದು ಆಪಾದಿಸಿದಳು. ಇದರ ಬಗೆಗೊಂದಷ್ಟು ದಿನ ತನಿಖೆ ನಡೆದರೆ ಶೆಟ್ಟಿ ಇನ್ನೊಂದಷ್ಟು ದಿನ ಥೈಲೆಂಡ್‌ನಲ್ಲೇ ಉಳಿಯುತ್ತಾನೆ. ಅಷ್ಟರಲ್ಲಿ ಏನಾದರೊಂದು ಐಡಿಯಾ ಮಾಡಿ ಬಚಾವು ಮಾಡಬಹುದೆಂಬುದು ಇದರ ಹಿಂದಿನ ಸಂಚು.

ಇದೆಲ್ಲವನ್ನು ಭಾರತೀಯ ಪೊಲೀಸರು ಬ್ಯಾಂಕಾಕ್ ರಕ್ಷಣಾ ಇಲಾಖೆಗೆ ಮನವರಿಕೆ ಮಾಡಿಸಿ ಶೆಟ್ಟಿಯನ್ನು ಬಿಗಿ ಕಟ್ಟಿ ಎಳೆತಂದು ಜೈಲಿಗೆ ಗದುಮಿದ್ದಾರೆ.

ಅಡ್ನಾಡಿ ಅಸ್ನೋಟಿಕರ್‌ಗೆ ಮಂತ್ರಿಗಿರಿ

ಇದು ಈಶ್ವರಿಯ ಪಕ್ಕಾ ಪೇಮೆಂಟ್ ಕೋಟಾ ಸೀಟು!

ಉತ್ತರ ಕನ್ನಡ ಗ್ರಹಚಾರವೇ ಸರಿ ಇದ್ದಂತಿಲ್ಲ. ಈಗಾಗಲೇ ಕಾಗೇರಿ-ಅಸ್ನೋಟಿಕರ್ ಎಂಬ ಜನದ್ರೋಹಿ ಮಂತ್ರಿದ್ವಯರು ಕುಸ್ತಿಗಿಳಿವ ಸಕಲ ಸೂಚನೆಗಳೂ ಗೋಚರಿಸುತ್ತಿದೆ. ಡೀವಿ ಸರ್ಕಾರವೆಂದರೆ ಹಳೇ ಮದ್ಯ-ಹಳೇ ಬಾಟಲಿ; ಮುಚ್ಚಳ ಮಾತ್ರ ಬೇರೆ ತಾನೆ? ಉತ್ತರ ಕನ್ನಡದಲ್ಲೂ ಅಷ್ಟೇ! ಅದೇ ಜಗಳಗಂಟಿ ಕಾಗೇರಿ-ಅಸ್ನೋಟಿಕರ್; ಅದೇ ದುರಂತ, ದಗಲುಬಾಜಿ, ದೌರ್ಭಾಗ್ಯ....


ಗುಡಿಗೆಯೊಳಗಿನ ಅಕ್ಕಿ ಅನ್ನವಾಗಿದೆಯಾ ಎಂದು ನೋಡಲು ಒಂದು ಅಗಳು ಅಮುಕಿದರೆ ಸಾಕಲ್ಲವಾ? ಅಬ್ಬೇಪಾರಿ ಡಿವಿಎಸ್ ಗೌಡ ಯಾವ್ಯಾವುದೋ ಅದಬಡಗೆ ಬೆಂಡಾಗಿ ನೇಮಿಸಿಕೊಂಡಿರುವ ಮಂತ್ರಿಗಳಲ್ಲಿ ಒಬ್ಬೇ ಒಬ್ಬನ ತುಟ್ಟಿದರೂ ಸಾಕು, ಇಡೀ ಕ್ಯಾಬಿನೆಟ್‌ನ ಕ್ಯಾಲಿಬರ್ ಕಣ್ಮುಂದೆ ಬಿಚ್ಚಿಕೊಳ್ಳುತ್ತದೆ! ಪ್ರಜಾಪೀಡಕರು, ಕ್ರಿಮಿನಲ್‌ಗಳು, ಭೂಗಳ್ಳರು, ಉಸುಕು ಕಳ್ಳರು, ಅದಿರುಗಳ್ಳರು... ಹೀಗೆ ತರಹೇವಾರಿ ಚೋರ ಚಾಂಡಾಲರೇ ಡೀವಿ ಮಂತ್ರಿ ಮಂಡಲದಲ್ಲಿ ಅಡ್ಡೆ ಹಾಕಿಕೊಂಡು ಕೂತಿದ್ದಾರೆ. ಡೀವಿ ಸಂಪುಟದ ಅತಿಸಣ್ಣ ವಯಸ್ಸಿನ ಮಂತ್ರಿ, ಕಾರವಾರದ ಆನಂದ್ ಅಸ್ನೋಟಿಕರ್‌ನಂತೂ ಅತಿ ದೊಡ್ಡ-ದೊಡ್ಡ ಬಾರಾ ಭಾನಗಡಿಗಳ ಭೂಪ!

ಅಧಿಕಪ್ರಸಂಗಿ ಅಸ್ನೋಟಿಕರನದು ಹೀನ ಸುಳಿ. ಕಾರವಾರದ 'ರಾಬಿನ್ ಹುಡ್' ಅನ್ನಿಸಿದ್ದ ರೌಡಿ ಶಾಸಕ ದಿವಂಗತ ವಸಂತ ಅಸ್ನೋಟಿಕರ್‌ನ ಏಕೈಕ ಗಂಡು ಸಂತಾನ ಈ ಆನಂದ್; ಅಪ್ಪನ ಪರಮ ಪುಂಡಾಟ, ಪಾತಕ, ದೋನಂಬರ್, ಪೈಸಾ ಕಮಾಯಿ ಬಂದರು ಮಾಫಿಯಾ ಗರಡಿಯಲ್ಲಿ ಬಾಲ್ಯದಲ್ಲೇ ಪಳಗಿದ ಪರಾಕ್ರಮಿ. ಭೂಗತ ಪಾತಕಿ ದಿಲೀಪ್ ನಾಯ್ಕ ಕೈಯ್ಯಲ್ಲಿ ವಸಂತ್ ಹತನಾಗುವ ಹೊತ್ತಿಗಿನ್ನೂ ಆನಂದ್ ಮೈನರ್. ಈಗಿನ ಕಾರವಾರ ನಗರಸಭೆ ಅಧ್ಯಕ್ಷ-ವಸಂತ್ ಅಸ್ನೋಟಿಕರ್‌ನ ಬಲಗೈ ಬಂಟನಾಗಿದ್ದ ಗೂಂಡಾ ಗಣಪತಿ ಉಳ್ವೇಕರ್ ಬಂದರು ಸಾಮ್ರಾಜ್ಯದ ಅಧಿಪತಿ ಸ್ಥಾನದಲ್ಲಿ 'ಬಾಲಕ' ಆನಂದನನ್ನು ಕೂರಿಸಿ ಆಡಳಿತ ನಡೆಸಿದ್ದ.


ಅಪ್ಪನ ಜಮಾನಾದಲ್ಲೇ ಬಂದರು ದಂಧೆಯ ಒಳ-ಹೊರಗು ಗೊತ್ತಿದ್ದ ಆನಂದ್‌ಗೆ ಬಂದರು ವಹಿವಾಟಿನ ಕೋಟ್ಯಂತರ ರೂಪಾಯಿ ರುಚಿ ಹತ್ತಿತ್ತು. ಈ ಅಕ್ರಮ ಆಮದನಿಯ ಪಾಲುದಾರಿಕೆ 'ಗುರು' ಗಣಪತಿ ಮತ್ತು ಆನಂದ್ ನಡುವೆ ವೈಷಮ್ಯ ತಂದಿಟ್ಟಿತ್ತು. ಈ ಮಧ್ಯೆ ಆನಂದನ ತಾಯಿ ಶುಭಲತಾ ಅಸ್ನೋಟಿಕರ್‌ಗೆ ದೇಶಪಾಂಡೆ-ಮ್ಯಾಗಿ ಕಾಂಗ್ರೆಸ್‌ನ ವಿಧವಾ ಕೋಟಾದಲ್ಲಿ ಎಂಎಲ್‌ಸಿ ಗಿರಿಯೂ ಕೊಡಿಸಿದ್ದರು. ಆದರೆ ಹಡಬೆ ಹಣದ ಮದ ವೇರಿದ್ದ ಆನಂದ್ ಮೆಜಾರಿಟಿಗೆ ಬರುತ್ತಿದ್ದಂತೆಯೇ 'ದೇವಮಾತೆ' ಮ್ಯಾಗ್ಗಿಗೇ ತಿರುಗಿಬಿದ್ದುಬಿಟ್ಟ! 2004 ರ ಅಸೆಂಬ್ಲಿ ಇಲೆಕ್ಷನ್ ಹೊತ್ತಲ್ಲಿ ಮ್ಯಾಗ್ಗಿ ಅಖಾಡಕ್ಕೆ ಇಳಿಸಿದ್ದ ಕಾಂಗ್ರೆಸ್ ಕ್ಯಾಂಡಿಡೇಟ್ ತನ್ನ ದೋನಂಬರ್ ದಂಧೆಗೆಲ್ಲಿ ತೊಡಕಾಗಬಹುದೆಂದು ಬಿಜೆಪಿಯ ಮೊದ್ಮಣಿ ಗಂಗಾಧರ ಭಟ್‌ಗೆ ಬೆಂಬಲಿಸಿ ಗೆಲ್ಲಿಸಿದ್ದ.

ಇಷ್ಟಾದರೂ ಕಾಂಗ್ರೆಸ್‌ನಲ್ಲೇ ಇದ್ದ ಅವಾಂತರಕಾರಿ ಆನಂದ್ ಸಾವಕಾಶವಾಗಿ ದೇಶಪಾಂಡೆ ಗ್ಯಾಂಗಿಗೆ ಜಾರಿ ಕೊಂಡಿದ್ದ. ದೇಶಪಾಂಡೆ, ಮ್ಯಾಗ್ಗಿಯನ್ನು ಎದುರ್ಹಾಕಿಕೊಂಡು ಆನಂದ್‌ಗೆ 2008 ರ ಅಸೆಂಬ್ಲಿ ಟಿಕೆಟ್ ಕೊಡಿಸಿದ್ದರು. ಬಂದರು ಮಾಫಿಯಾದ ಪಾಪದ ಹಣ ನೀರಿನಂತೆ ಹರಿಸಿ ಆನಂದ್ ಶಾಸಕನಾಗೇ ಬಿಟ್ಟ. ಆದರೆ ನಿಷ್ಠೆ-ನಿಯತ್ತುಗಳಿಲ್ಲದ ಉಂಡಾಡಿ ಪುಂಡ ಆನಂದ್ ಆಶ್ರಯದಾತ ದೇಶಪಾಂಡೆಗೇ ದೋಖಾ ನೀಡಿ ಗೆದ್ದ ಒಂದೂವರೆ ತಿಂಗಳಲ್ಲೇ ಬಿಜೆಪಿ ಕೆಸರಿಗೆ ಧುಮುಕಿದ. ತನ್ನ ಅಕ್ರಮ ಸಾಮ್ರಾಜ್ಯ ವಿಸ್ತರಣೆಗೆ ನೆರವಾಗುವ ಮಂತ್ರಿಗಿರಿ ದುರಾಸೆಯಿಂದ ಬಿಜೆಪಿ ಪಾಲಾಗಿದ್ದ ಆನಂದನ ಈ ಮೂರು ವರ್ಷದ ನಿರ್ಲಜ್ಜ-ನೀತಿಗೆಟ್ಟ ನಡೆ-ನುಡಿಗಳೆಲ್ಲ ಈಗ ಇತಿಹಾಸ!


ಆಪರೇಷನ್ ಕಮಲದ ಪಕ್ಕಾ ಸಿಜರಿನ್ ಶಿಶು ಆನಂದ್ ಬಿಜೆಪಿಯಲ್ಲಿ ಮಂತ್ರಿಯೇನೋ ಆದ ಬಿಡಿ. ಆದರೆ ಹೋದಲ್ಲೂ ಮಾನ-ಮರ್ಯಾದೆಯಿಂದ ಉಳಿಯಲಿಲ್ಲ, ಕೊಟ್ಟ ಕುದುರೆಯನ್ನು ಏರಲಾಗದೆ ಈ ಹುಂಬ ಎಡವೆಡವಿ ಬಿದ್ದ. ಸಚಿವ ಸ್ಥಾನವನ್ನು ತನ್ನ ದಗಲುಬಾಜಿ ದಂಧೆ, ರಂಗಿಲಾ ಲಾಲಸೆಗಳಿಗೆ ಮೀಸಲಿಟ್ಟ. ಎರಡೆರಡು ಬಾರಿ ಕಣ್ಣುಮುಚ್ಚಿ ಆರಿಸಿದ ಅಂಕೋಲಾ-ಕಾರವಾರ ಕ್ಷೇತ್ರವಾಸಿಗಳಿಗೆ ದಿನ-ದಿನವೂ ಅನ್ಯಾಯ-ದ್ರೋಹ-ಮೋಸವನ್ನೇ ಮಾಡತೊಡಗಿದ. ದಿನಕ್ಕೊಂದು ರೀತಿಯ ದುಬಾರಿ ಕ್ರಾಪ್ ಮಾಡಿಕೊಂಡು ಪೋಲಿ ಗೆಟಪ್‌ನಲ್ಲಿ ಅಂಡಲೆಯುತೊಡಗಿದ. ಅಂಕೋಲೆಯ ಹನಿ ಬೀಚಲ್ಲಿ ಗಂಡನಿಂದ ದೂರಾದ ಅರಣ್ಯ ಇಲಾಖಾಧಿಕಾರಿಯೊಬ್ಬನ ಮಗಳೊಂದಿಗೆ ಟೈಮ್ ಪಾಸ್ ಮಾಡುವುದು, ಐಎಎಸ್ ಪ್ರೊಬೇಷನರಿಯಾಗಿ ಕಾರವಾರಕ್ಕೆ ಬಂದಿದ್ದ ಸಾಬಿ ಹುಡುಗಿ ಜತೆ ಸ್ನೇಹದಿಂದಿರುವುದೆಲ್ಲ ಟಾಕ್ ಆಫ್ ದಿ ಡಿಸ್ಟ್ರಿಕ್ಟ್ ಆಗಿ ಹೋಯ್ತು. ಇದು ಆತನ ಸಂಸಾರದಲ್ಲೂ ಸಮಸ್ಯೆ ತಂದೊಡ್ಡಿತ್ತು, ತಾಯಿ, ಮಾವ (ಗೋವಾದ ಮಾಜಿ ಮಂತ್ರಿ) ಸಂಜಯ ಬಾಂದೇಕರ್ ರಾಜಿಗೆ ಗಜಿವಿಜಿ ನಡೆಸಿದ್ದೂ ಬಹಿರಂಗ ರಹಸ್ಯವಾಗಿ ಹೋಯ್ತು. ಒಟ್ಟಿನಲ್ಲಿ ಮಂತ್ರಿಗಿರಿ ಭಾಗ್ಯ ಆನಂದನ ಬುದ್ಧಿಗೆ ಗೆದ್ದಲು ಹಿಡಿಸಿತ್ತು!




ಆನಂದನ ಮಂತ್ರಿಗಿರಿ ಕ್ಷೇತ್ರಕ್ಕಷ್ಟೇ ಸೀಮಿತವಾಗಿ ಹೋಗಿತ್ತು. ಮೀನುಗಾರಿಕೆ ಮತ್ತು ವಿಜ್ಞಾನ-ತಂತ್ರಜ್ಞಾನ ಇಲಾಖೆಯ ತಲೆ-ಬುಡವೇ ಆತನಿಗೆ ಅರ್ಥವಾಗಲಿಲ್ಲ. ಅಧಿಕಾರಿಗಳೇ ಮಂತ್ರಿ ಆಫೀಸಿನಲ್ಲಿ, ಇಲಾಖೆಯಲ್ಲಿ ಮೆರೆಯತೊಡಗಿದರು. ಕರಾವಳಿಯವನಾದರೂ ಮೀನುಗಾರಿಕೆ ಇಲಾಖೆಯ ಸಮಸ್ಯೆ-ಸೌಲಭ್ಯ ಅಡ್ನಾಡಿ ಅಸ್ನೋಟಿಕರ್‌ಗೆ ಗೊತ್ತಾಗಲಿಲ್ಲ. ಜಿಲ್ಲೆಯ ಅಥವಾ ಕ್ಷೇತ್ರದ ಮೀನುಗಾರಿಕೆಗೆ ಈ ಮೂರು ಕಾಸಿನ ಮಂತ್ರಿಯಿಂದ ಒಂದೇ ಒಂದು ಬಿಲ್ಲಿ ಪ್ರಯೋಜನವಾಗಲಿಲ್ಲ! ಬಂದರು ಮಾಫಿಯಾ, ಜಲ್ಲಿ ಕಲ್ಲಿನ ಕ್ವಾರಿ ಮಾಫಿಯಾದ ಡಾನ್ ಆಗುವ ಆಸೆಯಿಂದ ಬಂದರು ಮತ್ತು ಅರಣ್ಯ ಖಾತೆ ಕೊಡುವಂತೆ ಯಡ್ಡಿಗೆ ದುಂಬಾಲು ಬಿದ್ದನೇ ಹೊರತು ಇರುವ ಮಂತ್ರಿ ಅಧಿಕಾರ ಬಳಸಿ ಜನರಿಗೆ ನೆರವಾಗಬೇಕೆಂಬ ಕನಿಷ್ಠ ಕಳಕಳಿಯೂ ಈ ಕೃತಘ್ನ ಮನುಷ್ಯನಲ್ಲಿರಲಿಲ್ಲ.




ಆನಂದ್ ಅಸ್ನೋಟಿಕರ್ ಮಂತ್ರಿ ಆಗಿದ್ದೇ ಆಗಿದ್ದು ಕಾರವಾರ-ಅಂಕೋಲೆಗೆ ದರಿದ್ರ ಹಿಡಿದಂತಾಗಿ ಹೋಯ್ತು. ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಎಂಬ ಪಕ್ಕಾ ಪುರೋಹಿತಶಾಹಿ ಜತೆ ಪವರ್‌ಕ್ಲಾಶ್ ಶುರು ಹಚ್ಚಿಕೊಂಡಿದ್ದ ಈ ವಲಸಿಗನಿಗೆ ಜಿಲ್ಲಾಡಳಿತವೇ ಕ್ಯಾರೇ ಮಾಡುತ್ತಿರಲಿಲ್ಲ. ಕಾರವಾರ-ಅಂಕೋಲೆ ಜನರಿಗೆ ಹೇದಿ ಮಂತ್ರಿ ಆನಂದ್ ಮೇಲೆ ಸಿಟ್ಟು-ತಾತ್ಸಾರ ಮೂಡುವಂತೆ ಮಾಡಲು ಕಾಗೇರಿ ಸ್ಕೆಚ್ ಹಾಕಿಕೊಂಡು ಆತನ ಮಾತ್ಯಾವುದೂ ನಡೆಯದಂತೆ ಕರಾಮತ್ತು ಚಾಲೂ ಇಟ್ಟಿದ್ದರು. ಹೀಗಾಗಿ ಕಾರವಾರ-ಅಂಕೋಲೆಯ ಸಮಸ್ಯೆಗಳು ಪರಿಹಾರ ಆಗುವುದಿರಲಿ, ಇನ್ನಷ್ಟು ಉಲ್ಬಣಿಸಿಬಿಟ್ಟಿತು. ನಾಮ್‌ಕಾವಸ್ತೆ ಮಂತ್ರಿ ಆನಂದ್ ಮೈ-ಕೈ ಹೊಸಕಿಕೊಳ್ಳುವುದು ಬಿಟ್ಟು ಮತ್ತೇನೂ ಮಾಡಲಾಗಲಿಲ್ಲ.





ಆನಂದನ ದಂಧೆಗಳಿಗೂ ಕಾಗೇರಿ-ಯಡ್ಡಿ-ರೆಡ್ಡಿಗಳು ಕಲ್ಲು ಹಾಕ ತೊಡಗಿದ್ದರು. ಆಪರೇಷನ್ (ಕಮಲ) ಮಾಡಿಸಿಕೊಳ್ಳುವಾಗ ರೆಡ್ಡಿಗಳ ಜೊತೆಗಿದ್ದ ಬಾಂಧವ್ಯ ಕೆಲವೇ ತಿಂಗಳಲ್ಲಿ ಜಗಳಗಂಟ ಆನಂದ್ ಹಾಳು ಮಾಡಿಕೊಂಡಿದ್ದ. ಕ್ಷೇತ್ರದಲ್ಲಿನ ಆತನ ಎದುರಾಳಿ-ಕಾಂಗ್ರೆಸ್‌ನ ಸತೀಶ್ ಸೈಲ್ ಎಂಬ ಅಕ್ರಮ ಅದಿರು ರಫ್ತುದಾರನಿಗೆ ರೆಡ್ಡಿಗಳ ಜೊತೆಗಿದ್ದ ಬಿಸಿನೆಸ್ ರಿಲೇಷನ್ ಆನಂದ್‌ಗೆ ಮಾರಕವಾಗಿತ್ತು. ಹೀಗಾಗಿ ಆತ 'ರಾಜಮಹಲ್ ಸಿಲ್ಕ್' ಎಂಬ ಬೆಂಗಳೂರು ಮೂಲದ ಹಣವಂತರ ಕಂಪನಿ ಜೊತೆ ಸೇರಿ ಬೇಲೇಕೇರಿಯಲ್ಲಿ ಬಂದರು ಸ್ಥಾಪಿಸಲು ಮಾಡಿದ ಪ್ರಯತ್ನ ದೊಡ್ಡ ವಿವಾದಕ್ಕೆ ಸಿಲುಕಿ ಕೈಕೊಟ್ಟಿತು. ಕಾಳಿ ನದಿಯ ಅಪಾರ ಬೆಲೆಬಾಳುವ ಉಸುಕನ್ನು ಮಾಲ್ಡೀವ್ಸ್‌ಗೆ ಕಳಿಸಲು ಹಡಗಿಗೆ ಹೇರಿದಾಗ ಕಾಗೇರಿ ಅಡ್ಡಗಾಲು ಹಾಕಿದರು. ಜಲ್ಲಿಕಲ್ಲಿನ ಕ್ವಾರಿ ಮಾಫಿಯಾ ಕಟ್ಟಲು ಮಾಡಿದ ಕಟಿಪಿಟಿಗೂ ಕಾಗೇರಿ ಅವಕಾಶ ಕೊಡಲಿಲ್ಲ.

ಈ ಒಣ ರುಬಾಬಿನ ಕಾಗೇರಿ ಆನಂದ್ ನಡುವಿನ ಹೊಟ್ಟೆಕಿಚ್ಚಿನ ಮೇಲಾಟದ ದುಷ್ಪರಿಣಾಮ ಆಗಿದ್ದು ಮಾತ್ರ ಕಾರವಾರ-ಅಂಕೋಲೆಯ ಮೇಲೆ. ಇಡೀ ಜಿಲ್ಲೆಯಲ್ಲಿ ಜಲ್ಲಿಕಲ್ಲಿನ ಕ್ವಾರಿ ನಡೆಯುತ್ತಿದ್ದರೆ, ಕಾರವಾರ-ಅಂಕೋಲೆಯಲ್ಲಿ ಮಾತ್ರ ಅರಣ್ಯ ಕಾಯ್ದೆ ನೆಪದಿಂದ ಕಾಗೇರಿ ಕ್ವಾರಿ ಬಂದ್ ಮಾಡಿಸಿದ್ದರು. ಉಸುಕಂತೂ ಗೋವಾ ಅಥವಾ ಜಿಲ್ಲೆಯಲ್ಲೇ ಸಾಗಿಸಲಾಗದಂಥ ಭರ್ಜರಿ ನಿರ್ಬಂಧ ಕಾಗೇರಿ ಹಾಕಿಸಿದ್ದರು. ಇದರಿಂದ ಅಭಿವೃದ್ಧಿ ಕಾಮಗಾರಿಗೆ ಜಲ್ಲಿ ಉಸುಕು ಸಿಗದಂತಾಯ್ತು, ಉಸುಕು-ಜಲ್ಲಿ ದಂಧೆ ನಂಬಿ ಬದುಕಿದ್ದ ಸಾವಿರಾರು ಕಾರ್ಮಿಕರು ಬೀದಿ ಪಾಲಾದರು. ಇನ್ನೊಂದೆಡೆ ಸೀಬರ್ಡ್ ನೌಕಾನೆಲೆ ಸಂತ್ರಸ್ತರಿಗೆ ಪರಿಹಾರ ಪ್ರಕರಣ ಬಿಗಡಾಯಿಸಿತು. ಜಿಲ್ಲಾ ಆಸ್ಪತ್ರೆ ಎಂಬುದು ಸಾಕ್ಷಾತ್ ನರಕದಂತಾಗಿ ಹೋಯ್ತು. ರೈತ-ಮೀನುಗಾರರ ತೊಂದರೆ ತಾಪತ್ರಯ ಹೆಚ್ಚಾಯ್ತು. ಜಿಲ್ಲಾ ಕೇಂದ್ರ ಕಾರವಾರದ ಮಹತ್ವವೇ ಕಡಿಮೆ ಮಾಡಲು ಕಾಗೇರಿ ಜಿಲ್ಲಾ ಮಟ್ಟದ ಅನೇಕ ಸರ್ಕಾರಿ ಕಚೇರಿಗಳನ್ನು ತನ್ನ ತವರು ಶಿರಸಿಗೆ ಹೊತ್ತೈದರು. ಇದ್ಯಾವುದನ್ನು ಸಮರ್ಥವಾಗಿ ಎದುರಿಸಲು ಹೇತ್ಲಾಂಡಿ ಬೊದ್ದು ಮಂತ್ರಿ ಆನಂದನಿಂದಾಗಲಿಲ್ಲ. ಸರ್ಕಾರಿ ಸಂಬಳ-ಸೌಲತ್ತು-ಗೂಟದ ಕಾರುಬಾರಿಗಷ್ಟೇ ಆನಂದ್ ಮಂತ್ರಿಯಾಗಿದ್ದಂತಾಗಿತ್ತು!! ಬೊಕ್ಕಸಕ್ಕೆ ಹೊರೆ, ಭೂಮಿಗೆ ಭಾರ ಈ ಮಂತ್ರಿ ಎಂದು ಜನ ಜೋಕ್ ಮಾಡುವ ಹಾಸ್ಯಾಸ್ಪದ ಪ್ರಾಣಿ ಆಗಿಹೋಗಿದ್ದ ಆನಂದ್.



ತನ್ನ ಈ ದುರ್ಗತಿಗೆ ಸಿಎಂ ಯಡ್ಡಿ ಕಾಗೇರಿಗೆ ಸ್ಕೋಪ್ ಕೊಟ್ಟು ತನ್ನನ್ನು ಕಡೆಗಣಿಸುತ್ತಿರುವುದೇ ಕಾರಣ ಎಂಬುದು ಆನಂದ್‌ಗೆ ಖಾತ್ರಿಯಾಗಿ ಹೋಗಿತ್ತು. ಯಡ್ಡಿ ಆನಂದ್‌ನ ಹತ್ತಿರ ಹೋದಾಗೆಲ್ಲ ಸಿಡುಕಿ-ಬೈದು ಅಟ್ಟಿದ್ದೇ ಹೆಚ್ಚು. ಹೀಗಾಗಿ ಆನಂದ್ ಸಿಎಂ ಯಡ್ಡಿ ವಿರುದ್ಧ ಬಂಡಾಯ ಶುರುಹಚ್ಚಿಕೊಂಡ. ಜಾರಕಿಹೊಳಿ ಗ್ಯಾಂಗ್‌ನಲ್ಲಿ ಮುಂಚೂಣಿ ರೆಬೆಲ್ ಆಗಿ ಕಳಾಯಿಸಹತ್ತಿದ; ಯಡ್ಡಿಗೆ ನಾಯಕತ್ವಕ್ಕೆ ಬೆಂಬಲ ಇಲ್ಲವೆಂದು ರಾಜ್ಯಪಾಲರಿಗೆ ಪತ್ರ ಬರೆದು ಗೆಳೆಯರೊಂದಿಗೆ ಶಾಸಕತ್ವದಿಂದ ಅನರ್ಹನೂ ಆಗಿಹೋದ. ಆರೆಂಟು ತಿಂಗಳು ಅನರ್ಹನಾಗಿ ಈ ಆಯೋಗ್ಯ ಅಂತರ್ ಪಿಶಾಚಿಯಾಗಿ ಹೋಗಿದ್ದ. ಕ್ಷೇತ್ರದಲ್ಲಿ ನೆಲೆ-ಬೆಲೆ ಕಳೆದುಕೊಂಡಿದ್ದ ಆನಂದ್ ಕಾಂಗ್ರೆಸ್ ಬಾಗಿಲು ಬಡಿಯತೊಡಗಿದ್ದ. ಮಂತ್ರಿಗಿರಿ ಸಾಯ್ಲಿ, ಶಾಸಕತ್ವವೂ ಇಲ್ಲದೆ ಆನಂದ್ ಸಮುದ್ರದಿಂದ ತೆಗೆದು ಬೀಚ್‌ಗೆ ಎಸೆದ ಮೀನಿನಂತೆ ಚಡಪಡಿಸಿದ್ದು ಕರುಣಾಜನಕವಾಗಿತ್ತು.

ಆನಂದ್‌ನ ರಾಜಕೀಯ ಅವಸಾನ ಆಗೇಹೋಯ್ತೆಂಬ ವಾತಾವರಣ ಕಾರವಾರದಲ್ಲಿ ಸೃಷ್ಟಿಯಾಗಿತ್ತು. ಸ್ವತಃ ಆನಂದ್‌ಗೂ ಬದುಕುವ ಭರವಸೆ ಇಲ್ಲದಾಗಿತ್ತು. ಆ ಹೊತ್ತಲ್ಲಿ ಅದೃಷ್ಟ ವಶಾತ್ ಸುಪ್ರೀಂಕೋರ್ಟ್ ಆನಂದ್‌ಗೆ ಜೀವದಾನ ನೀಡಿತು. ಸ್ವತಃ ಆನಂದ್‌ಗೆ ಇದು ನಂಬಲಾಗದ ಖುಷಿ ಸಂಗ ಯಾಗಿತ್ತು. ಯಾವಾಗ ಶಾಸಕತ್ವಕ್ಕೆ 'ಅರ್ಹತೆ' ಸಿಕ್ಕಿತೋ ಆಗ ಆನಂದನ ಖದರೇ ಬದಲಾಗಿಹೋಯ್ತು. ಯಾವ ಯಡ್ಡಿ ತಮ್ಮ ನಾಯಕನಲ್ಲ ಎಂದು ಶಾಸಕತ್ವದಿಂದ ಡಿಬಾರ್ ಆಗಿದ್ದನೋ ಅದೇ ಯಡ್ಡಿಗೆ ಆನಂದ್ ಮತ್ತೆ ಬೆಂಬಲ ಘೋಷಿಸಿಬಿಟ್ಟ. ದುಡ್ಡು-ಅಧಿಕಾರ ಬಿಟ್ಟರೆ ಯಾವ ರಾಜ ಕೀಯ ಸಿದ್ಧಾಂತ, ಬದ್ಧತೆ, ನಾಚಿಕೆ, ನೈತಿಕತೆ ತನಗಿಲ್ಲವೆಂದು ಸ್ವಯಂ ಸಾಬೀತುಪಡಿಸಿಕೊಂಡುಬಿಟ್ಟ. ಈ ನಿಷ್ಠಾವಂತ ತಿಪ್ಪರಲಾಗದ ಹಿಂದೊಂದು ದೊಡ್ಡ ಡೀಲ್ ಅಡಗಿತ್ತು. ಯಡ್ಡಿ ಅನರ್ಹತೆಯಿಂದ ಬಚಾವಾದ ಬಿಜೆಪಿ ಶಾಸಕರಿಗೆ ತಲಾ ಹತ್ತತ್ತು ಕೋಟಿ ಕೊಟ್ಟು ಖರೀದಿಸಿದ್ದರು. ಸಂದರ್ಭ ಸಿಕ್ಕರೆ ಮತ್ತೆ ಮಿನಿಸ್ಟರ್ ಮಾಡುವ ಭರವಸೆಯೂ ಕೊಟ್ಟಿ ದ್ದರು. ಮಂತ್ರಿಗಿರಿಗಿಂತ ಶಾಸಕರಾಗಿ ಉಳಿವುದೇ ಈ ಗತಿಗೇಡಿ ಶಾಸಕರಿಗೆ ಆ ಹೊತ್ತಲ್ಲಿ ಅನಿವಾರ್ಯವಾಗಿತ್ತು.

ಅರ್ಹತೆ ಗಳಿಸಿಕೊಂಡು ಬರುವುದರಲ್ಲಿ ಯಡ್ಡಿ ಬಿಜೆಪಿಯಲ್ಲಿ ರಾಕ್ಷಸನಂತಾಗಿ ಹೋಗಿದ್ದರು; ಈ ಸೈತಾನ ಮತ್ತೆ ತನ್ನನ್ನು ಮಂತ್ರಿ ಮಾಡುವುದಿಲ್ಲ ಎಂಬುದು ಆನಂದ್‌ಗೆ ಖಾತ್ರಿಯಾಗಿ ಹೋಗಿತ್ತು. ಇರುವಷ್ಟು ದಿನ ಆಡಳಿತ ಪಕ್ಷದ ಶಾಸಕನಾಗಿ ಕ್ಷೇತ್ರದಲ್ಲಿ ಅಸ್ತಿತ್ವ ಉಳಿಸಿಕೊಳ್ಳುವ ದೂರಾಲೋಚನೆ ಆನಂದನದಾಗಿತ್ತು. ಶಾಸಕಗಿರಿ ಬಲದಿಂದ ತನ್ನ ಅಡ್ಡ ಕಸುಬನ್ನು ಹುಲುಸಾಗಿ ನಡೆಸುವ ಒಳ ಉದ್ದೇಶವಿತ್ತು. ಆದರೆ ಯಾವಾಗ ಯಡ್ಡಿ ಲೋಕಾಯುಕ್ತ ವರದಿಗೆ ಬಲಿಯಾಗಿ ಮಾಜಿಯಾಗಿ ಮನೆ ಸೇರಿದರೋ ಆಗ ಆನಂದ್‌ಗೆ ಹೊಸ ಸರ್ಕಾರದಲ್ಲಿ ಮತ್ತೆ ಮಂತ್ರಿಯಾಗುವ ಆಸೆ ಮೂಡಿತು. ಶೆಟ್ಟರ್ ಬಣದಲ್ಲಿ ಗುರುತಿಸಿಕೊಂಡ ಜಾರಕಿಹೊಳಿ ಅಂಡ್ ಗ್ಯಾಂಗ್‌ನ ಸದಸ್ಯ ಆನಂದ್ ಒಳಗೊಳಗೆ ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪ ಜೊತೆ ಡೀಲ್ ಮಾಡತೊಡಗಿದ್ದ.

ಜಾರಕಿಹೊಳಿ ಟೀಮ್‌ನಿಂದ ಆತನೊಬ್ಬನನ್ನೇ ಮಂತ್ರಿ ಮಾಡಲು ಡೀವಿ ನಿರ್ಧರಿಸಿದ್ದರು. ಆದರೆ ಕೊನೇಗಳಿಗೆಯಲ್ಲಿ ಈಶ್ವರಿ ಡೀವಿಗೆ ಆನಂದ್ ಅಸ್ನೋಟಿಕರ್‌ನನ್ನು ಮಂತ್ರಿ ಮಾಡುವಂತೆ ಒತ್ತಡ ಹೇರಿದರು. ಆನಂದ್ ಅದಾಗಲೇ ಈಶ್ವರಿ ಕಾಲಿಗೆ ಬಿದ್ದು ಬರೋಬ್ಬರಿ 20 ಕೋಟಿ ಕಾಣಿಕೆ ಒಪ್ಪಿಸಿ ಬಂದಿದ್ದನೆಂಬ ಸುದ್ದಿ ಕಾರವಾರದಲ್ಲಿ ಹಾರಾಡುತ್ತಿದೆ. ಆನಂದನ ಹಿಂಬಾಗಿಲ ಫಿಕ್ಸಿಂಗ್ ಮಹಿಮೆ ಬಲ್ಲವರಿಗಿದು ಆಶ್ಚರ್ಯದ ಸಮಾಚಾರವೇನಲ್ಲ. ಅದೇ ಹೊತ್ತಿಗೆ ಯಡ್ಡಿಯೂ ಆನಂದನ ಬಗ್ಗೆ ಸಾಫ್ಟ್ ಕಾರ್ನರ್ ಹೊಂದಿದ್ದರು. ಇದಕ್ಕೆ ಕಾರಣ ತನ್ನ ಎದುರಾಳಿ ಅನಂತ್‌ಕುಮಾರ್‌ನ ಬ್ರಾಹ್ಮಣ ಬೆಟಾಲಿಯನ್‌ನ ಕಾಗೇರಿಗೆ ಕೌಂಟರ್ ಮಾಡಲು ಉತ್ತರ ಕನ್ನಡದಲ್ಲೊಬ್ಬ ಇರಲೆಂಬ ಲೆಕ್ಕಾಚಾರ ಯಡ್ಡಿಯದಾಗಿತ್ತು. ಈಶ್ವರಿಗೆ ತನ್ನ ಬಣದಲ್ಲಿದ್ದೂ ಡೀವಿಗೆ ಓಟು ಕ್ರಾಸ್ ಮಾಡಿದ್ದ 'ಮೀರ್‌ಸಾಧಿಕ್' ಕಾಗೇರಿಗೆ ಪಾಠ ಕಲಿಸಲು ಆನಂದ್‌ಗೆ ಮಂತ್ರಿಗಿರಿ ದೀಕ್ಷೆ ಕೊಡುವ ಜರೂರತ್ತು ಬಂದಿತ್ತು. ಅಂತೂಇಂತೂ ಅನಾಹುತಕಾರಿ ಆನಂದ್ ಅಸ್ನೋಟಿಕರ್‌ಗೆ ಈಶ್ವರಪ್ಪನ ಪೇಮೆಂಟ್ ಕೋಟಾದಲ್ಲಿ ಮಂತ್ರಿ ಭಾಗ್ಯ ಖುಲಾಯಿಸಿಬಿಟ್ಟಿತು.


ಆನಂದ್‌ಗೆ ಸಂದರ್ಭದ ಪಿತೂರಿಯಿಂದ ಸಿಕ್ಕಿರುವ ಮಂತ್ರಿಗಿರಿಯಿಂದ ಅಂಕೋಲಾ-ಕಾರವಾರದ ಜನರಿಗಾದರೂ ಪ್ರಯೋಜನವಾದೀತಾ? ಊಹೂಂ; ಆ ಭರವಸೆ ಕ್ಷೇತ್ರದಲ್ಲಿ ಯಾವ ಗಾಂಪನಿಗೂ ಇಲ್ಲ. ಜಿಲ್ಲೆ-ರಾಜ್ಯಕ್ಕೆ ಈ ಮತಿಗೇಡಿ ಮಂತ್ರಿಯಿಂದ ಕೆಲಸ-ಕಾರ್ಯವಾಗುವುದಂತೂ ಸಾಧ್ಯವಿಲ್ಲ ಬಿಡಿ. ಆದರೆ ಆನಂದ್ ಮಾತ್ರ ಮಂತ್ರಿಗಿರಿ ಬಲದಿಂದ ಬಾಗಲಕೋಟೆ-ಇಳಕಲ್ ಕಡೆಯಿಂದ ಗ್ರಾನೈಟ್ ತರಿಸಿ ಫಾರಿನ್‌ಗೆ ಕಾರವಾರ ಬಂದರಿಂದ ಎಕ್ಸ್‌ಪೋರ್ಟ್ ಮಾಡುವ ಸ್ಕೆಚ್ ಹಾಕಿಕೊಂಡಿದ್ದಾನೆ. 'ಅನರ್ಹ' ಪಕ್ಷೇತರ ಶಾಸಕ ಸಂಗಾತಿ ಶಿವರಾಜ್ ತಂಗಡಗಿ ಎಂಬ ಗ್ರಾನೈಟ್ ಉದ್ಯಮಿ ಸಾಥ್ ಕೊಡಲಿದ್ದಾರಂತೆ. ಹಾಗಂತ ಕಾರವಾರದಲ್ಲಿ ಜನ ಮಾತಾಡಿ ಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಉತ್ತರ ಕನ್ನಡ ಗ್ರಹಚಾರವೇ ಸರಿ ಇದ್ದಂತಿಲ್ಲ. ಈಗಾಗಲೇ ಕಾಗೇರಿ-ಅಸ್ನೋಟಿಕರ್ ಎಂಬ ಜನದ್ರೋಹಿ ಮಂತ್ರಿದ್ವಯರು ಕುಸ್ತಿಗಿಳಿವ ಸಕಲ ಸೂಚನೆಗಳೂ ಗೋಚರಿಸುತ್ತಿದೆ. ಡೀವಿ ಸರ್ಕಾರವೆಂದರೆ ಹಳೇ ಮದ್ಯ-ಹಳೇ ಬಾಟಲಿ; ಮುಚ್ಚಳ ಮಾತ್ರ ಬೇರೆ ತಾನೆ? ಉತ್ತರ ಕನ್ನಡದಲ್ಲೂ ಅಷ್ಟೇ! ಅದೇ ಜಗಳಗಂಟ ಕಾಗೇರಿ-ಅಸ್ನೋಟಿಕರ್; ಅದೇ ದುರಂತ, ದಗಲುಬಾಜಿ, ದೌರ್ಭಾಗ್ಯ....

• ನಹುಷ

ಲೋಕಾಯುಕ್ತರ ಮಗನೇ ರೆಡ್ಡಿಗಳಿಗೆ ಲಾಯರ್!

ಕರ್ನಾಟಕದ ನೂತನ ಲೋಕಾಯುಕ್ತರಾದ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲರ ಒಬ್ಬ ಮಗ ಬಸವ...ಭು ಎಸ್. ಪಾಟೀಲ್‌ರವರು ಅಕ್ರಮ ಗಣಿಗಾರಿಕೆಯ ...ರೋಪಿಗಳಾದ ಬಳ್ಳಾರಿ ರೆಡ್ಡಿ ಬ್ರದರ್ಸ್‌ಗೆ ವಕೀಲರಾಗಿ ...ಸ ಮಾಡಿದ್ದರಾ?-

ನ್ಯಾಯಮೂರ್ತಿ ಶಿವರಾಜ್ ಪಾಟೀಲರು ಮುಖ್ಯಸ್ಥರಾಗಿರುವ ಲೋಕಾಯುಕ್ತ ಸಂಸ್ಥೆಯು ಬಳ್ಳಾರಿ ರೆಡ್ಡಿ ಗ್ಯಾಂಗಿನ ವಿರುದ್ಧ ವರದಿ ನೀಡಿದೆ. ಮತ್ತೊಂದೆಡೆ ಲೋಕಾಯುಕ್ತರ ಮಗ ಬಸವಪ್ರಭು ಪಾಟೀಲರು ಅದೇ ರೆಡ್ಡಿಗಳ ಪರವಾಗಿ ಈ ಹಿಂದೆ ಕೇಸ್‌ಗಳನ್ನು ನಡೆಸಿದ್ದುಂಟು. ಅಷ್ಟೇ ಅಲ್ಲದೆ ಬೇಲೇಕೇರಿ ಬಂದರಿನಲ್ಲಿದ್ದ ಕಬ್ಬಿಣದ ಅದಿರನ್ನು ಕದ್ದು ಸಾಗಿಸಿದ್ದಾರೆಂದು ಲೋಕಾಯುಕ್ತರೇ ಆರೋಪಿಸಿರುವ ಸಲ್ಗಾಂವಕರ್ ಮೈನಿಂಗ್ ಕಂಪನಿ, ಬಳ್ಳಾರಿಯ ತುಂಗಭದ್ರಾ ಮೈನಿಂಗ್ ಕಂಪನಿಗಳ ಕೇಸ್‌ಗಳನ್ನೂ ಬಸವಪ್ರಭು ಪಾಟೀಲ್ ನಡೆಸಿದ್ದಾರೆ.


ಬಸವ ಪ್ರಭು

...ಕರ್ನಾಟಕ ಹೈಕೋರ್ಟ್‌ನಲ್ಲಿ ...ಷ್ಯವಿರುವ ದಾಖಲೆಗಳು 'ಹೌದು' ...ನ್ನುತ್ತಿವೆ! ಬಸವ ಪ್ರಭು ...ಟೀಲ್ ಈಗ ಕರ್ನಾಟಕ ...ಕೋರ್ಟ್‌ನಲ್ಲಿ ಹಾಗೂ ...ಹಲಿಯ ಸುಪ್ರೀಂಕೋರ್ಟ್‌ನಲ್ಲೂ ...ಬ್ಬ ಯಶಸ್ವಿ ವಕೀಲರಾಗಿ ಕೆಲಸ ...ಡುತ್ತಿದ್ದಾರೆ. ರಾಜ್ಯದ ಅತ್ಯಂತ ...ಸ್ವಿ ಹಾಗೂ ಹೆಸರುವಾಸಿ ...ಯರ್‌ಗಳ ಪೈಕಿ ಒಬ್ಬರಾಗಿರುವ ...ವ ಪ್ರಭು ಪಾಟೀಲರಿಗೆ ...ರುಶಃ ಇದೊಂದು ಇಕ್ಕಟ್ಟಿನ ...ವೇಶ.

...ನ್ಯಾ. ಸಂತೋಷ್ ಹೆಗ್ಡೆ ...ೇಕಾಯುಕ್ತರಾಗಿದ್ದಾಗ ...ಳ್ಳಾರಿಯ ರೆಡ್ಡಿಗಳೂ ಸೇರಿದಂತೆ ...ನೇಕ ಗಣಿ ಉದ್ಯಮಿಗಳ ವಿರುದ್ಧ ಅಕ್ರಮ ...ಗಾರಿಕೆಗೆ ಸಂಬಂಧಿಸಿದ ವರದಿ ನೀಡಿದ್ದಾರೆ. ...ದರ ಜಾಗಕ್ಕೆ ಹೊಸ ಲೋಕಾಯುಕ್ತರಾಗಿ ಈಗ ನ್ಯಾ. ...ವರಾಜ್ ಪಾಟೀಲ್ ಬಂದಿದ್ದಾರೆ. ಮತ್ತೊಂದೆಡೆ ...ರೋಪಿ ರೆಡ್ಡಿಗಳ ಪರವಾಗಿ ಬಸವಪ್ರಭು ಪಾಟೀಲ್ ...ಸ್ ಹ್ಯಾಂಡಲ್ ಮಾಡಿದ್ದಾರೆ. ಆದರೆ ಈ ಕೇಸ್‌ಗಳು ...ೇಕಾಯುಕ್ತ ಕೋರ್ಟ್‌ನಲ್ಲಿಲ್ಲ, ಬದಲಾಗಿ ...ಕೋರ್ಟ್‌ನಲ್ಲಿವೆ. ಸದ್ಯದ ಪರಿಸ್ಥಿತಿಯಲ್ಲಿ ಈ ...ಸ್‌ಗಳು ಲೋಕಾಯುಕ್ತರ ವ್ಯಾಪ್ತಿಗೆ ಬರುವ ...ಧ್ಯತೆಗಳಿಲ್ಲ. ಆಕಸ್ಮಾತ್ ಮುಂದೊಂದು ದಿನ ...ಗ್ಗಳ ವಿರುದ್ಧದ ಕೇಸ್‌ಗಳು ಲೋಕಾಯುಕ್ತರ ...ಖಾ ವ್ಯಾಪ್ತಿಗೂ ಬಂದುಬಿಟ್ಟರೆ ಬಹುಶಃ ...ಸವಪ್ರಭು ಪಾಟೀಲ್ ರೆಡ್ಡಿಗಳಿಗೆ ಬೇರೆ ವಕೀಲರನ್ನು ...ಡುಕಿಕೊಳ್ಳಲು ಹೇಳುವ ಸಾಧ್ಯತೆಗಳಿವೆ.


ಯಾವ ಕೇಸು? ಏನು ಕತೆ?

... ಹೈಕೋರ್ಟ್ ಪ್ರಕರಣ ಸಂಖ್ಯೆ 3775/2007, ...83/2007 ಹಾಗೂ 3787/2007 ಈ ಮೂರು ...ಕ್ಕೆ ಹೈಕೋರ್ಟ್‌ನ ಧಾರವಾಡ ಬೇಂಚ್‌ನಲ್ಲಿರುವ ...ಸ್‌ಗಳಾಗಿವೆ. ಈ ಮೂರೂ ಕೇಸುಗಳಲ್ಲಿ ರೆಡ್ಡಿಗಳ ...ವಾಗಿ ನಿಂತು ಬಸವಪ್ರಭು ಪಾಟೀಲ್ ಕೇಸ್ ನಡೆಸಿದ್ದಾರೆ.

... 3775/07 ಪ್ರಕರಣದಲ್ಲಿ ಕರ್ನಾಟಕ ಸರ್ಕಾರವು ...ನಾರ್ದನ ರೆಡ್ಡಿಯನ್ನು ಪ್ರತಿವಾದಿಯಾಗಿಸಿದೆ. ಸುಗ್ಗಲಮ್ಮ ...ಟಿ ನಾಶಕ್ಕೆ ಸಂಬಂಧಿಸಿದ್ದ ಈ ಪ್ರಕರಣ 2007 ರ ...ಸ್ಟ್ 21 ರಂದು ಎಫ್‌ಐಆರ್ ಆಗಿ ಮೊದಲಿಗೆ ...ಳ್ಳಾರಿಯ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಪ್ರಕರಣ ಸಂಖ್ಯೆ ...8/2008 ರಲ್ಲಿ ವಿಚಾರಣೆಗೆ ಬಂದಿತ್ತು. ನಂತರ ...ಸ್ ಹೈಕೋರ್ಟ್ ಮೆಟ್ಟಿಲೇರಿದೆ.

3783/07 ಕೇಸ್‌ನಲ್ಲಿ ರೆಡ್ಡಿಗಳ ಓಬಳಾಪುರಂ ಮೈನಿಂಗ್ ಕಂಪನಿಯ ಅಧಿಕಾರಿ ರಾಚಮಂದ್ರ ರೆಡ್ಡಿ ವಿರುದ್ಧ ಇದೆ. ಬಳ್ಳಾರಿಯ ಪೊಲೀಸರು ಕ್ರೈಂ ನಂಬರ್ 112/07 ರಡಿ ರಾಮಚಂದ್ರ ರೆಡ್ಡಿ ವಿರುದ್ಧ ಕೇಸ್ ದಾಖಲಿಸಿದ್ದರು. ಈ ಪ್ರಕರಣವನ್ನು 3775/07 ಜೊತೆಗೆ ಈಗ ಲಿಂಕ್ ಮಾಡಲಾಗಿದೆ.


ಇನ್ನು ಮೂರನೆಯ ಕೇಸ್ 3787/2007 ಮಾಜಿ ಸಚಿವ ಶ್ರೀರಾಮುಲುಗೆ ಸಂಬಂಧಿಸಿದೆ. ಬಳ್ಳಾರಿಯಲ್ಲಿ ಅರಣ್ಯಾಧಿಕಾರಿಯಾಗಿದ್ದ ರಾಜಶೇಖರನ್‌ರ ಕಚೇರಿಗೆ ರಾಮುಲು ನುಗ್ಗಿ, ಬೆದರಿಕೆ ಹಾಕಿದ್ದ ಪ್ರಕರಣ ಇದು. ಕ್ರೈಂ ನಂ. 168/07 ಹಾಗೂ ಎಫ್‌ಐಆರ್ ಸಂಖ್ಯೆ 331/2007 ರಡಿ ಬಳ್ಳಾರಿಯ ಕೌಲ್ ಬಜಾರ್ ಪೊಲೀಸರು ರಾಮುಲು ವಿರುದ್ಧ ಪ್ರಕರಣ ದಾಖಲಿಸಿದ್ದರು.



ಈ ಮೂರು ಕೇಸ್‌ಗಳಲ್ಲಿ ಬಸವ ಪ್ರಭು ಪಾಟೀಲ್ ರೆಡ್ಡಿಗಳ ವಕೀಲರಾಗಿದ್ದರು. ಈ ಪ್ರಕರಣಗಳೀಗ ಹೈಕೋರ್ಟ್‌ನ ಧಾರವಾಡ ಪೀಠಕ್ಕೆ ವರ್ಗಾವಣೆಯಾಗಿವೆ.


ಮತ್ತೊಂದೆಡೆ ಲೋಕಾಯುಕ್ತರ ತನಿಖಾ ವರದಿಯಲ್ಲಿ ಹಾಗೂ ಕೋರ್ಟ್‌ನಲ್ಲೂ ರೆಡ್ಡಿ ಮತ್ತಿತರರ ವಿರುದ್ಧ ಅಕ್ರಮಗಳ ವರದಿ ಹಾಗೂ ಪ್ರಕರಣಗಳಿವೆ. ಹಾಲಿ ನ್ಯಾ. ಶಿವರಾಜ್ ಪಾಟೀಲ್ ವ್ಯಾಪ್ತಿಗೆ ಇವೆಲ್ಲಾ ಬರಲಿವೆ. ಹೀಗಿರುವಾಗ ವಕೀಲ ಬಸವಪ್ರಭು ಪಾಟೀಲ್ ರೆಡ್ಡಿಗಳ ಪರ ವಕಾಲತ್ ನಡೆಸುವುದು ಎಷ್ಟರಮಟ್ಟಿಗೆ ಸರಿ ಎನ್ನುವ ಪ್ರಶ್ನೆ ಏಳುತ್ತಿದೆ.

ಇದು ಅನುಮಾನದ ಪ್ರಶ್ನೆಯಲ್ಲ, Ethics ನ ವಿಚಾರ. ಲೋಕಾಯುಕ್ತ ನ್ಯಾಯಾಧೀಶರಾಗಿರುವ ಶಿವರಾಜ್ ಪಾಟೀಲರ ಬಗ್ಗೆ ಎಲ್ಲರಿಗೂ ಅಪಾರ ಗೌರವವಿದೆ. 2ಜಿ ತರಂಗಾಂತರ ಹಗರಣದ ತನಿಖಾ ಸಮಿತಿಯ ಮುಖ್ಯಸ್ಥರಾಗಿ ಅವರು ನಿಷ್ಪಕ್ಷಪಾತವಾಗಿ ಕೆಲಸ ಮಾಡಿದವರು. ಅವರ integrity, ಶ್ರದ್ಧೆ ಹಾಗೂ ಬದ್ಧತೆಗಳು ಪ್ರಶ್ನಾತೀತವಾಗಿದೆ. ಅಷ್ಟೇ ಅಲ್ಲದೆ ಶಿವರಾಜ್ ಪಾಟೀಲರ ಮಗ ವಕೀಲ ಬಸವ ಪ್ರಭು ಪಾಟೀಲರ ಬಗ್ಗೆಯೂ ರಾಜ್ಯದ ವಕೀಲ ಸಮುದಾಯದಲ್ಲಿ ಮೆಚ್ಚುಗೆಯ ಮಾತುಗಳೇ ಕೇಳಿಬರುತ್ತಿವೆ. ಕೈಗೆತ್ತಿಕೊಂಡ ಕೆಲಸಗಳನ್ನು ಅಚ್ಚುಕಟ್ಟಾಗಿ ಪ್ರಾಮಾಣಿಕವಾಗಿ ಮಾಡುತ್ತಾರೆಂಬ ಹೆಸರು ಗಳಿಸಿದ್ದಾರೆ. ಹಾಗಿದ್ದಾಗಲೂ ಬಸವ ಪ್ರಭು ಪಾಟೀಲರು ಇನ್ನುಮುಂದೆ ರೆಡ್ಡಿಗಳ ಪರವಾಗಿ ಕೇಸ್ ನಡೆಸುವುದು ಸೂಕ್ತವಲ್ಲ.



ರಾಜ್ಯ ಹೈಕೋರ್ಟ್‌ನಲ್ಲಿ ಈ ತರದ ಸಂಗತಿಗಳು ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತಿರುತ್ತವೆ.

ತೀರಾ ಇತ್ತೀಚೆಗೆ ಕಟ್ಟಾ ನಾಯ್ಡುನ ಜೊತೆಗಾರ ಶ್ರೀನಿವಾಸನ್‌ನ ಜಾಮೀನು ಅರ್ಜಿ ನ್ಯಾ. ಕೇಶವನಾರಾಯಣರ ಎದುರು ಬಂದಿತ್ತು. ಈಗ ನ್ಯಾಯಾಂಗ ಬಂಧನದಲ್ಲಿರುವ ಇಟಾಸ್ಕ ಕಂಪನಿಯ ಎಂ.ಡಿ. ಶ್ರೀನಿವಾಸನ್ ತಂದೆ ಎಸ್.ಕೆ.ವಿ. ಛಲಪತಿಯವರೂ ಹಿಂದೊಮ್ಮೆ ವಕೀಲ ವೃತ್ತಿ ನಡೆಸುತ್ತಿದ್ದವರು. ನ್ಯಾ. ಕೇಶವ ನಾರಾಯಣರು ಆಗ ಛಲಪತಿಯವರ ಬಳಿ ಜೂನಿಯರ್ ಆಗಿ ಕೆಲಸ ಮಾಡಿದ್ದರು. ಈಗ ಛಲಪತಿಯವರ ಮಗನ ಜಾಮೀನಿನ ಅರ್ಜಿಯೇ ತಮ್ಮ ಬೇಂಚ್‌ಗೆ ಬಂದಾಗ ಕೇಶವನಾರಾಯಣರು 'ಒಲ್ಲೆ' ಎಂದು ಹಿಂದೆ ಸರಿದಿದ್ದಾರೆ. ಶ್ರೀನಿವಾಸನ್‌ನ ಜಾಮೀನು ಅರ್ಜಿಯು ಈಗ ಬೇರೊಂದು ನ್ಯಾಯಾಧೀಶರ ಬೇಂಚ್‌ಗೆ ವರ್ಗಾವಣೆಗೊಂಡಿದೆ. ಅದೇರೀತಿ ಹೈಕೋರ್ಟ್ ನ್ಯಾಯಮೂರ್ತಿ ಶ್ರೀಧರರಾವ್‌ರ ಮಗ ಫಣಿರಾಜ್ ಕೂಡ ಈಗ ಹೈಕೋರ್ಟ್ ವಕೀಲರಾಗಿದ್ದಾರೆ. ಸಿ.ವಿ. ನಾಗೇಶ್‌ರ ಬಳಿ ಕೆಲಕಾಲ ಜೂನಿಯರ್ ಆಗಿ ಕೆಲಸ ಮಾಡಿದ್ದ ಫಣಿರಾಜ್ ಸ್ವತಂತ್ರವಾಗಿ ಪ್ರಾಕ್ಟೀಸ್ ಶುರು ಮಾಡಿದಾಗ ಈ 'ತಂದೆ-ಮಗ' ಪ್ರಶ್ನೆ ವಕೀಲ ಸಮುದಾಯದಲ್ಲಿ ಆಕ್ಷೇಪಣೆಯ ದನಿಯಾಗಿ ಕೇಳಿಬಂದಿತ್ತು.


ಶಿವರಾಜ್ ಪಾಟೀಲ್

ಸಾಮಾನ್ಯವಾಗಿ ಇಂಥ ಪ್ರಸಂಗಗಳು ಎದುರಾದಾಗ ನ್ಯಾಯಾಧೀಶರನ್ನು ಬೇರೆ ಸ್ಥಳಗಳಿಗೆ ವರ್ಗಾಯಿಸುವ ಪರಿಪಾಠವಿದೆ. ಅಥವಾ ಮುಜುಗರದ ಸನ್ನಿವೇಶದಿಂದ ಪಾರಾಗಲು ಲಾಯರ್‌ಗಳೇ ಕೇಸ್ ತೆಗೆದುಕೊಳ್ಳಲು ನಿರಾಕರಿಸುತ್ತಾರೆ ಅಥವಾ ನ್ಯಾಯಾಧೀಶರು ತಮಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಂಬಂಧಿಸಿದವರ ಕೇಸ್‌ಗಳು ತಮ್ಮ ಬಳಿಗೆ ಬಂದಾಗ ತಾವಾಗಿಯೇ ಹಿಂದೆ ಸರಿದು ಕೇಸ್‌ಗಳನ್ನು ಬೇರೆ ನ್ಯಾಯಾಧೀಶರು ವಿಚಾರಣೆ ನಡೆಸುವಂತೆ ಕೋರುವುದೂ ಉಂಟು.

ಇಟಾಸ್ಕ ಶ್ರೀನಿವಾಸನ್‌ನ ಜಾಮೀನು ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ನ್ಯಾ. ಕೇಶವನಾರಾಯಣ್ ಹಿಂದೆ ಸರಿಯಲು ಇದೇ ಕಾರಣವಾಗಿತ್ತು. ಈಗ ನೋಡಿ ಏನಾಗುತ್ತದೆಂದು.

ನ್ಯಾಯಮೂರ್ತಿ ಶಿವರಾಜ್ ಪಾಟೀಲರು ಮುಖ್ಯಸ್ಥರಾಗಿರುವ ಲೋಕಾಯುಕ್ತ ಸಂಸ್ಥೆಯು ಬಳ್ಳಾರಿ ರೆಡ್ಡಿ ಗ್ಯಾಂಗಿನ ವಿರುದ್ಧ ವರದಿ ನೀಡಿದೆ. ಮತ್ತೊಂದೆಡೆ ಲೋಕಾಯುಕ್ತರ ಮಗ ಬಸವಪ್ರಭು ಪಾಟೀಲರು ಅದೇ ರೆಡ್ಡಿಗಳ ಪರವಾಗಿ ಈ ಹಿಂದೆ ಕೇಸ್‌ಗಳನ್ನು ನಡೆಸಿದ್ದುಂಟು. ಅಷ್ಟೇ ಅಲ್ಲದೆ ಬೇಲೇಕೇರಿ ಬಂದರಿನಲ್ಲಿದ್ದ ಕಬ್ಬಿಣದ ಅದಿರನ್ನು ಕದ್ದು ಸಾಗಿಸಿದ್ದಾರೆಂದು ಲೋಕಾಯುಕ್ತರೇ ಆರೋಪಿಸಿರುವ ಸಲ್ಗಾಂವಕರ್ ಮೈನಿಂಗ್ ಕಂಪನಿ, ಬಳ್ಳಾರಿಯ ತುಂಗಭದ್ರಾ ಮೈನಿಂಗ್ ಕಂಪನಿಗಳ ಕೇಸ್‌ಗಳನ್ನೂ ಬಸವಪ್ರಭು ಪಾಟೀಲ್ ನಡೆಸಿದ್ದಾರೆ.

ಇದು ಶಿವರಾಜ್ ಪಾಟೀಲರು ಲೋಕಾಯುಕ್ತರಾಗಿ ಬರುವ ಮುನ್ನ ನಡೆದಿರುವ ಸಂಗತಿ ಮಾತ್ರ. ಆದರೆ ಈಗ ಬಸವಪ್ರಭು ಪಾಟೀಲರು ನ್ಯಾಯಾಂಗದ ಘನತೆ, ಪಾವಿತ್ರತೆಯನ್ನು ಕಾಪಾಡಬೇಕಾದ ಕಾರಣದಿಂದ ರೆಡ್ಡಿ ಹಾಗೂ ಇತರ ಗಣಿ ಕಂಪನಿಗಳಿಂದ ದೂರವಿದ್ದರೇನೇ ಉತ್ತಮ ಅಲ್ಲವೆ?

ಬಸವ ಪ್ರಭು ಪಾಟೀಲರಿಗೆ ಈ ಸೂಕ್ಷ್ಮ ಖಂಡಿತಾ ಅರ್ಥವಾಗುತ್ತದೆಂಬುದೇ ನಮ್ಮ ನಂಬಿಕೆ.

• ಪಾರ್ವತೀಶ

...ಡ್ರಗ್ ದೊರೆ ಸಂತೋಷ್ ಶೆಟ್ಟಿ

...ೇ ಪುಟದಿಂದ....

...ವನು ಬಾಲು ಡೋಕ್ರೆ ಅಲಿಯಾಸ್ ಗುಡ್ಡು!

... ನೋಡನೋಡುತ್ತಲೇ ಗುಡ್ಡು ರಾಜನ್‌ನ ನೀಲಿಗಣ್ಣಿನ ...ಡುಗನಾಗಿ ಬದಲಾದ. ಕೆಲವೇ ದಿನಗಳಲ್ಲಿ ಡ್ರಗ್ಸ್ ...ವಹಾರ, ಸುಪಾರಿ ಕೊಲೆ, ಹಫ್ತಾ ಜವಾಬ್ದಾರಿಗಳೆಲ್ಲ ...ಡ್ಡುವಿನ ಪಾಲಾದವು. ಇದರಿಂದ ಕುದ್ದುಹೋದ ನೇಪಾಳಿ ...ತ್ತು ಶೆಟ್ಟಿ ಮತ್ತಷ್ಟು ಹತ್ತಿರಾಗಿ ರಾಜನ್‌ನಿಂದ ನಿಧಾನಕ್ಕೆ ...ರಾಗತೊಡಗಿದರು. ತದನಂತರ 2008 ರ ಹೊತ್ತಿಗೆ ...ಜಯ್ ಶೆಟ್ಟಿ ಎಂಬ ಮತ್ತೋರ್ವ ಹಂತಕನ ಜೊತೆಗೂಡಿ ...ಂತ್ರ ಗ್ಯಾಂಗೊಂದನ್ನು ಕಟ್ಟಿ ರಾಜನ್‌ನಿಂದ ಶಾಶ್ವತವಾಗಿ ...ರಾದರು.

... ಇದಾದ ನಂತರದಲ್ಲಿ ಭರತ್ ಹಾಗೂ ಶೆಟ್ಟಿ ...ಸಿದ ಅಂದಾದುಂದಿಗಳು ಒಂದೆರಡಲ್ಲ. ...ಬುಸಾಲು ಸುಪಾರಿ ಕೊಲೆಗಳು ಈ ಜೋಡಿಯ ...ಯಿಂದ ನಡೆದುಹೋಗಿವೆ. ಮುಂಬೈನ ಹಫ್ತಾ ...ೂಲಿಯಲ್ಲೂ ಬಲಾಢ್ಯರಾಗಿ ಬದಲಾಗಿದ್ದಾರೆ. ...ದರೆ ಇವರ ನಡೆಗೆ ಅಡ್ಡಿಯಾಗುತ್ತಿದ್ದದ್ದು ಹಳೇ ...ಥಿ ಛೋಟಾ ರಾಜನ್‌ನ ಗ್ಯಾಂಗು. ಇದೀಗಲೇ ...ವೂದ್, ಛೋಟಾಗಳಿಗೆ ಸರಿಸಮನಾಗಿ ...ಳೆಯುತ್ತಿರುವ ಶೆಟ್ಟಿಗೆ ಹಗ್ಗ ಹೊಸೆಯಲು ಮುಂಬೈ ಕ್ರೈಂ ಬ್ರಾಂಚ್ ಪೊಲೀಸರು ನಿರ್ಧರಿಸಿದ್ದರು.

ಸಂತೋಷ್ ಶೆಟ್ಟಿಯ ನೆಲೆಯಿರುವುದು ಥೈಲ್ಯಾಂಡ್‌ನಲ್ಲಿ ಅಂತೊಂದೇ ವಿಚಾರ ಪೊಲೀಸರಿಗೆ ಗೊತ್ತಿದ್ದದ್ದು. ಈ ಬಗ್ಗೆ ಥಾಯ್ ರಕ್ಷಣಾ ಇಲಾಖೆಯೊಂದಿಗೆ ಸಂಪರ್ಕವಿಟ್ಟುಕೊಂಡು ಸಂದರ್ಭಕ್ಕಾಗಿ ಕಾಯುವುದೊಂದೇ ಪೊಲೀಸರಿಗಿದ್ದ ಅನಿವಾರ್ಯ ಮಾರ್ಗ. ಇತ್ತ ಬ್ಯಾಂಕಾಕ್ ಹೋಟೆಲ್‌ನಲ್ಲಿ ಹುಡುಗಿಯರೊಂದಿಗೆ ಮಜಾ ಉಡಾಯಿಸುತ್ತಾ ಮೈಮರೆತಿದ್ದ ಸಂತೋಷ್‌ಗೆ ತನ್ನ ಕತ್ತಿಗೆ ಕುಣಿಕೆ ತಯಾರಾಗುತ್ತಿರುವ ವಿಚಾರ ತಿಳಿಯಲೇ ಇಲ್ಲ. ಥಾಯ್ ಪೊಲೀಸರು ತನ್ನ ಬೆಂಬಿದ್ದು ಕಣ್ಣಿಟ್ಟಿರುವ ವಿಚಾರವೂ ಆತನ ಗಮನಕ್ಕೆ ಬಂದಿರಲಿಲ್ಲ.


ಶಾಹಿದ್ ಅಜ್ಮಿ

ಅದ್ಯಾಕೋ ಮೊನ್ನೆ ಸಂತೋಷ್ ಶೆಟ್ಟಿ ಇದ್ದಕ್ಕಿದ್ದಂತೆ ದುಬೈಗೆ ಹೊರಟು ನಿಂತಿದ್ದಾನೆ. ಈ ವಿಚಾರ ಥಾಯ್ ಪೊಲೀಸರಿಗೆ ತಿಳಿದದ್ದೇ ಭಾರಿ ಕಣ್ಣಾವಲಿಟ್ಟು ಕಾಯತೊಡಗಿದರು. ಗಮನೀಯ ಅಂಶವೆಂದರೆ, ಶೆಟ್ಟಿ ವಿದೇಶಗಳಿಗೆ ಹಾರಾಡುತ್ತಿದ್ದದ್ದೇ ನಕಲಿ ಪಾಸ್‌ಪೋರ್ಟ್‌ಗಳ ಮೂಲಕ! ಈ ಬಗ್ಗೆ ಬ್ಯಾಂಕಾಕ್ ಪೊಲೀಸರು ಸ್ಪಷ್ಟ ಮಾಹಿತಿಯೊಂದಿಗೆ ಅಖಾಡಕ್ಕಿಳಿದಿದ್ದರು. ಈ ಸಂದರ್ಭದಲ್ಲೇ ಸಂತೋಷ್ ಶೆಟ್ಟಿ ನಕಲಿ ಪಾಸ್‌ಪೋರ್ಟ್ ಒಂದನ್ನು ಸಿದ್ಧಪಡಿಸಿ ದುಬೈಗೆ ಹಾರಲು ದಿನ ಗೊತ್ತುಪಡಿಸಿದ್ದ. ಆ ನಕಲಿ ಪಾಸ್‌ಪೋರ್ಟ್‌ನಲ್ಲಿದ್ದ ಶೆಟ್ಟಿಯ ನಕಲಿ ಹೆಸರು ನಿಕೋಲಸ್ ಶರ್ಮಾ!

ಬ್ಯಾಂಕಾಕ್ ಪೊಲೀಸರು ತಕ್ಷಣ ಮುಂಬೈನ ಅಕ್ರಮ ತಡೆ ಘಟಕದ ಪೊಲೀಸರಿಗೆ ಮಾಹಿತಿ ರವಾನಿಸಿದ್ದಾರೆ. ತಕ್ಷಣ ಇನ್ಸ್‌ಪೆಕ್ಟರ್ ನಿತಿನ್ ಅಲಕ್‌ನೂರ್, ಸುಧೀರ್ ಧಳವಿ, ಸತೀಶ್ ಮಾಯ್ಕರ್ ಹಾಗೂ ಎಸ್. ಜಗದಾಳೆ ಮುಂತಾದ ಅಧಿಕಾರಿಗಳು ಬ್ಯಾಂಕಾಕ್‌ಗೆ ತೆರಳಿ ದುಬೈಗೆ ಹೊರಟುನಿಂತಿದ್ದ ಸಂತೋಷ್ ಶೆಟ್ಟಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಈ ಸಲ ಶೆಟ್ಟಿಗೆ ಬಿಡುಗಡೆ ಸುಲಭವಲ್ಲ. ಈ ಹಿಂದಿನ ಎಲ್ಲಾ ಪ್ರಕರಣಗಳೂ ಆತನಿಗೆ ಅಟಕಾಯಿಸಿಕೊಳ್ಳಲಿವೆ. ಮಾದಕದ್ರವ್ಯ ಮಾರಾಟ, ಸುಪಾರಿ ಕೊಲೆ, ಹಫ್ತಾ ವಸೂಲಿ ಮುಂತಾದ ಕೇಸುಗಳೆಲ್ಲ ಜಡಿದುಕೊಂಡರೆ ಆತನಿಗೆ ಜೈಲು ಕಾಯಂ ಆಗುವುದರಲ್ಲಿ ಸಂದೇಹವಿಲ್ಲ.

ಮುಂಬೈ ಹಾಗೂ ಭಾರತದಲ್ಲಿ ಮಾಡಬಾರದ್ದು ಮಾಡಿ ವಿದೇಶ ಸೇರಿಕೊಳ್ಳುವುದು ಅಂತಾರಾಷ್ಟ್ರೀಯ ಪಾತಕಿಗಳಿಗೆ ಖಯಾಲಿಯಾಗಿ ಹೋಗಿವೆ. ದಾವೂದ್ ಇಬ್ರಾಹಿಂ ಕೂಡಾ ಇದೇ ತಂತ್ರ ಅನುಸರಿಸಿ ಭಾರತವನ್ನು ಸತಾಯಿಸುತ್ತಿರುವುದು ಕಣ್ಣಮುಂದಿನ ಸತ್ಯ. ಇಂಥಾ ಸಂದರ್ಭದಲ್ಲಿ ಸಂತೋಷ್ ಶೆಟ್ಟಿಯನ್ನು ವಿದೇಶದಿಂದಲೇ ಹೆಡೆಮುರಿಗೆ ಕಟ್ಟಿ ತಂದಿರುವುದು ಎಲ್ಲಾ ಪಾತಕಿಗಳಿಗೂ ಎಚ್ಚರಿಕೆಯ ಕರೆಗಂಟೆಯಂತಿದೆ.

ಅಪರಾಧ ವಿಭಾಗದ ಜಂಟಿ ಆಯುಕ್ತ ಹಿಮಾಂಶು ರಾಯ್ 'ಸಂತೋಷ್ ಶೆಟ್ಟಿಯ ಬಂಧನ ಸಾಂಕೇತಿಕ' ಅಂದಿದ್ದಾರೆ. ವಿದೇಶದ ಬಲ ಸೇರಿಕೊಂಡಿರುವ ಪಾಪಿಗಳಿಗೂ ಇದೇ ಗತಿ ಎಂಬಂಥ ಅರ್ಥ ಸೂಚಿಸುತ್ತಿವೆ. ಇದು ನಿಜಕ್ಕೂ ಒಳ್ಳೆಯ ಬೆಳವಣಿಗೆ.

ಜೋಗಯ್ಯ ಗೆಲ್ಲುವನೇ?

ನಿರ್ದೇಶಕ ಪ್ರೇಮ್ ಅವರ 'ಜೋಗಯ್ಯ' ಚಿತ್ರದ ಮೂಲಕ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಸೆಂಚುರಿ ಬಾರಿಸಿದ್ದಾರೆ! ಎಲ್ಲರಲ್ಲಿ ಅಪಾರ ಕುತೂಹಲ ಮೂಡಿಸಿರುವ 'ಜೋಗಯ್ಯ'ನ ಬಗ್ಗೆ ನಮಗೆ ಸಿಕ್ಕಿದ್ದು ದೊರಕಿದ್ದು ನೋಡಿದ್ದನ್ನು ವಿಶೇಷವಾಗಿ ಇಲ್ಲಿ ನೀಡುತ್ತಿದ್ದೇವೆ.....


ಚಿತ್ರ ಬಿಡುಗಡೆಯಾಗುವ ಮುನ್ನಾದಿನ - ಅಂದರೆ ಗುರುವಾರದ ತನಕ - ನಿರ್ದೇಶಕ ಕಂ ನಿರ್ಮಾಪಕ ಪ್ರೇಮ್ ಈ ಚಿತ್ರದ ಮೊದಲ ಕಾಪಿಯನ್ನು ನಾಯಕ ನಟ ಶಿವರಾಜ್‌ಕುಮಾರ್‌ಗಾಗಲಿ ಅಥವಾ ಚಿತ್ರದ ಹಂಚಿಕೆದಾರರಿಗಾಗಲಿ ಇನ್ನೂ ತೋರಿಸಿರಲಿಲ್ಲ, ಇದು ಪ್ರೇಮ್ ಅವರ ಶೈಲಿ. ಕೊನೆ ಕ್ಷಣದ ತನಕ ಚಿತ್ರದ ಬಗ್ಗೆ ಯಾವುದೇ ಮಾಹಿತಿ ಹೊರಬರದಂತೆ ಗೌಪ್ಯತೆಯನ್ನು ಕಾಪಾಡಿಕೊಳ್ಳುವಲ್ಲಿ ಪ್ರೇಮ್ ನಿಸ್ಸೀಮ. ಆದರೂ ನಿಮಗಾಗಿ, ಶಿವಣ್ಣನ ಅಭಿಮಾನಿಗಳಿಗಾಗಿ ನಾವು ಈ ಚಿತ್ರದ ಬಗ್ಗೆ ಎಲ್ಲೂ ಯಾರೂ ನೀಡದಂತಹ ಫುಲ್ ಡೀಟೈಲ್ಸ್‌ಅನ್ನು ನೀಡುತ್ತಿದ್ದೇವೆ.

ಇಡೀ ಚಿತ್ರದ ಕಥೆಯನ್ನು ಒಂದೇ ವಾಕ್ಯದಲ್ಲಿ ಹೇಳುವುದಾದರೆ ಇದು ಭೂಗತ ಜಗತ್ತಿನ ದಗಲ್ಬಾಜಿ ಮತ್ತು ಒಬ್ಬ ಶ್ರಮಿಕನ ಬೆವರಿನ ಸಂಸ್ಕೃತಿಯ ಮುಖಾಮುಖಿಯ ಕಥಾವಸ್ತು. ಹೀಗೆಂದಾಕ್ಷಣ ನಿಮಗೆಲ್ಲ ಇಂತಹ ಚಿತ್ರಗಳಿಗೆ ಮುನ್ನುಡಿ ಬರೆದ ಹಾಲಿವುಡ್‌ನ 'ಗಾಡ್‌ಫಾದರ್' ಚಿತ್ರ ನೆನಪಾಗಬಹುದು. ಆದರೆ ನಿರ್ದೇಶಕ ಪ್ರೇಮ್ ತನ್ನ ನಿರೂಪಣೆ ಮತ್ತು ಜಾಣತನದಿಂದ ಈ ಚಿತ್ರದ ಮೇಲೆ 'ಗಾಡ್‌ಫಾದರ್'ನ ನೆರಳು ಬೀಳದಂತೆ ಎಚ್ಚರ ವಹಿಸಿದ್ದಾರೆ. ಶಿವಣ್ಣ ತಮ್ಮ ಅಭಿಮಾನಿಗಳನ್ನು ಈ ಚಿತ್ರದಲ್ಲಿ ಸಖತ್ತಾಗಿ ಮನರಂಜಿಸಲಿದ್ದಾರೆ.

ಒಂದು ಫೈಟಿಂಗ್ ದೃಶ್ಯದಲ್ಲಿ ಸುಮಾರು ನಾಲ್ಕು ನಿಮಿಷಗಳ ಕಾಲ ಶಿವಣ್ಣ ಗಾಳಿಯಲ್ಲೇ ತೇಲಾಡುತ್ತಾರೆ. ಆತ ಯಾವಾಗ ನೆಲದ ಮೇಲೆ ಕಾಲಿಡುತ್ತಾರೋ ಎಂದು ಅಭಿಮಾನಿಗಳು ಕಾತುರದಿಂದ ಈ ಫೈಟನ್ನು ನೋಡುವಂತಾಗುತ್ತದೆ. ಹಾಗೆಯೇ ಒಂದು ಕುದುರೆ ಸವಾರಿ ದೃಶ್ಯ ಮತ್ತು ತ್ರೀ-ಡಿ ತಾಂತ್ರಿಕತೆಯ ಫೈಟಿಂಗ್ ಕೂಡ ಇದ್ದು ಪ್ರೇಕ್ಷಕರಿಗೆ ಕೊಟ್ಟ ಕಾಸಿಗೆ ಸಂಪೂರ್ಣ ಫಲಕೊಡುತ್ತದೆ.

ಇಡೀ ಚಿತ್ರದಲ್ಲಿ ನಿರ್ದೇಶಕ ಪ್ರೇಮ್ ಫೈಟಿಂಗ್, ಸೆಂಟಿಮೆಂಟ್ಸ್, ನೃತ್ಯ ಮತ್ತು ಫ್ಯಾಂಟಸಿಗಳನ್ನು ಹಿತಮಿತವಾಗಿ ಬೆರೆಸಿ ಪ್ರೇಕ್ಷಕರಿಗೆ ನೀಡಿದ್ದಾರೆಂದೇ ಹೇಳಬಹುದು. ಚಿತ್ರ ಆರಂಭವಾಗುವುದು ಅಘೋರಿಗಳ ನೃತ್ಯದೊಂದಿಗೆ. ಆರಂಭದ ಈ ನೃತ್ಯ ರೋಮಾಂಚನ ಮೂಡಿಸುವಂತಿದೆ. ಎಂದಿನಂತೆ ಚಿತ್ರದ ಕ್ಲೈಮ್ಯಾಕ್ಸ್ ಅದ್ಭುತವಾಗಿದೆ.

ಈ ಚಿತ್ರದಲ್ಲಿ 'ಮುಂಗಾರು ಮಳೆ' ಹುಡುಗಿ ಪೂಜಾ ಗಾಂಧಿ ದಿಢೀರನೆ ಲಾಯರ್ ಪಾತ್ರದಲ್ಲಿ ಬಂದು ಅಚ್ಚರಿಮೂಡಿಸುತ್ತಾರೆ. ಆದೇರೀತಿ ದರ್ಶನ್ ಜೊತೆ 'ಗಜ'ದಲ್ಲಿ ನಟಿಸಿದ್ದ ಮಲೆಯಾಳಿ ಹುಡುಗಿ ನವ್ಯ ನಾಯರ್ ಕೂಡಾ ಸಣ್ಣ ಪಾತ್ರವೊಂದರಲ್ಲಿ ಕಾಣಿಸಿಕೊಂಡು ಖುಷಿ ನೀಡುತ್ತಾಳೆ. ಶಿವಣ್ಣನ ವೃತ್ತಿ ಬದುಕಿನ ಆರಂಭದ 'ಆನಂದ್' ಚಿತ್ರದಲ್ಲಿ ನಟಿಸಿದ್ದ ಗುರುದತ್ ಮತ್ತು ಬಾಲರಾಜ್ ಅವರನ್ನೂ ಪ್ರೇಮ್ ಶಿವಣ್ಣನ 100ನೇ ಚಿತ್ರವಾದ 'ಜೋಗಯ್ಯ'ದಲ್ಲಿ ಸಾಂದರ್ಭಿಕವಾಗಿ ಬಳಸಿದ್ದಾರೆ. 'ವೀರಪ್ಪನ್' ಚಿತ್ರವನ್ನು ನಿರ್ದೇಶಿಸಿ ರಾಜ್ಯಪ್ರಶಸ್ತಿ ಪಡೆದಿದ್ದ ರವೀಂದ್ರನಾಥ್ ಅವರೂ ಸಣ್ಣ ಪಾತ್ರದಲ್ಲಿ ಗಮನಾರ್ಹವಾಗಿ ನಟಿಸಿ ತಾನೊಬ್ಬ ಉತ್ತಮ ಕಲಾವಿದ ಎಂಬುದನ್ನು ತೋರಿಸಿದ್ದಾರೆ. ಇನ್ನೂ ಒಂದು ವಿಶೇಷವೆಂದರೆ ಬಿಬಿಎಂಪಿಯ ಅಧಿಕಾರಿಣಿಯಾಗಿರುವ ಜ್ಯೋತಿ ಎಂಬಾಕೆಯ ಅದ್ಭುತ ನಟನೆ. ಬಹುಶಃ 'ಜೋಗಯ್ಯ'ದ ನಂತರ ಆಕೆ ಸರ್ಕಾರಿ ಕೆಲಸವನ್ನು ಬಿಡಬೇಕಾದಷ್ಟು ಬೇಡಿಕೆ ಗಾಂಧಿನಗರದಿಂದ ಬಂದರೂ ಅಚ್ಚರಿಯಿಲ್ಲ. ಶಿವಣ್ಣನ ಎದುರು ಖಳನಾಯಕನಾಗಿ ನಟಿಸಿರುವ 'ಕಬಡ್ಡಿ' ಚಿತ್ರದ ಹೀರೋ ಪ್ರವೀಣ್ ಕೂಡಾ ಗಮನ ಸೆಳೆಯುತ್ತಾರೆ. ಇವರುಗಳ ಜೊತೆಗೆ ರಂಗಭೂಮಿಯ ಅನೇಕ ಕಲಾವಿದರನ್ನು ಪ್ರೇಮ್ ತಮ್ಮ ಈ ಚಿತ್ರದಲ್ಲಿ ಬಳಸಿಕೊಂಡಿದ್ದಾರೆ.



'ಜೋಗಯ್ಯ' ಚಿತ್ರದ ಹಾಡುಗಳು ಎಷ್ಟು ಚೇತೋಹಾರಿಯಾಗಿ ಮೂಡಿ ಬಂದಿವೆಯೋ ಅದಕ್ಕೆ ತಕ್ಕುದಾಗಿ ಅದ್ಭುತವಾದ ಚಿತ್ರೀಕರಣವನ್ನೂ ಪ್ರೇಮ್ ಮಾಡಿದ್ದಾರೆ. ಮೊನ್ನೆ ಮೊನ್ನೆ ಬಂದ 'ಜಾನಿ' ಚಿತ್ರಕ್ಕಾಗಿ ಹಾಕಿದ ಸೆಟ್‌ನಲ್ಲಿ ಪ್ರೇಮ್ 'ಕುರಿ ಸಾಂಗ್' ಅನ್ನು ಚಿತ್ರೀಕರಿಸಿರುವ ರೀತಿ ನಿಜಕ್ಕೂ ಅದ್ಭುತವಾಗಿದೆ.

'ಜೋಗಿ' ಚಿತ್ರದ ಗೆಲುವಿಗೆ ಕಾರಣ ನಾಯಕ ಮತ್ತು ಆತನ ತಾಯಿಯ ನಡುವಿನ ಸೆಂಟಿಮೆಂಟ್. ಅಲ್ಲಿ ತಾಯಿಯ ಪಾತ್ರವಹಿಸಿದ್ದ ಅರುಂಧತಿ ನಾಗ್ ಕೊನೆಯಲ್ಲಿ ನಿಧನ ಹೊಂದುತ್ತಾರೆ. ಈ ಚಿತ್ರದಲ್ಲಿದ್ದ ತಾಯಿ ಸೆಂಟಿಮೆಂಟ್ಸ್‌ಅನ್ನು ಪ್ರೇಮ್ ಹೇಗೆ ಈ ಚಿತ್ರದಲ್ಲಿ ಬಳಸುತ್ತಾರೆ ಎಂದೇ ಬಹಳಷ್ಟು ಚರ್ಚೆ ನಡೆದಿತ್ತು, ಆದರೆ ಇಲ್ಲಿ ತಾಯಿ ಪಾತ್ರದ ಸೆಂಟಿಮೆಂಟ್ಸ್ ದೃಶ್ಯಗಳಿಲ್ಲದಿದ್ದರೂ ಇಡೀ ಚಿತ್ರದಲ್ಲಿ 'ತಾಯಿ ಪ್ರಜ್ಞೆ'ಯನ್ನು ನಿರ್ದೇಶಕ ಪ್ರೇಮ್ ಬಹಳ ಜಾಣ್ಮೆಯಿಂದ ಹೀರೋ ಜತೆಗೆ ತೋರಿಸಿದ್ದಾರೆ. ಶಿವಣ್ಣ ಮತ್ತು ಅರುಂಧತಿ ನಾಗ್ ನರ್ತಿಸುವ ಒಂದು ಸಣ್ಣ ತುಣುಕು ಬಿಟ್ಟರೆ ಬೇರೆ ಏನನ್ನೂ 'ಜೋಗಿ'ಯಿಂದ ಎರವಲು ಪಡೆದಿಲ್ಲ.

ಉಪೇಂದ್ರ ಬರೆದು, ಹಾಡಿರುವ 'ತಗಲಾಕ್ಕೊಂಡೆ...ನಾನು ತಗಲಾಕ್ಕೊಂಡೆ...' ಹಾಡನ್ನಂತೂ ಪ್ರೇಮ್ ಅಭಿಮಾನಿಗಳು ಕುಣಿದುಕುಪ್ಪಳಿಸುವ ರೀತಿಯಲ್ಲಿ ಚಿತ್ರೀಕರಿಸಿದ್ದಾರೆ. ಈ ಹಾಡಿನಲ್ಲಿ ಶಿವಣ್ಣ ನೂರಾರು ಗೆಟಪ್‌ಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ವಿಶೇಷವೆಂದರೆ ಅವರು ಈ ಹಿಂದೆ ನಟಿಸಿರುವ 99 ಚಿತ್ರಗಳಲ್ಲಿ ಯಾವ್ಯಾವ ಗೆಟಪ್‌ಗಳಲ್ಲಿ ಕಾಣಿಸಿಕೊಂಡಿದ್ದರೋ ಅಂತಹ ಅನೇಕ ಗೆಟಪ್‌ಗಳಲ್ಲಿ ಈ ಹಾಡಿನಲ್ಲಿ ಶಿವಣ್ಣ ಕಾಣಿಸಿಕೊಳ್ಳುವುದರಿಂದ ಒಂದು ರೀತಿಯಲ್ಲಿ 99 ಚಿತ್ರಗಳ ಅವಲೋಕನದಂತಿದೆ ಈ ಹಾಡು....

ಚಿತ್ರದ ವಿರಾಮದ ತನಕ ಬಹುತೇಕ ಎಲ್ಲಾ ಪಾತ್ರಗಳ ಪರಿಚಯವಾಗುತ್ತಾ ಹೋಗುತ್ತದೆ. ಹೀಗಾಗಿ ಹಾಡು ಮತ್ತು ಫೈಟಿಂಗ್‌ಗಳ ರಸದೌತಣ ಚಿತ್ರದ ಮೊದಲರ್ಧದಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ವಿರಾಮದ ನಂತರ ಇಡೀ ಚಿತ್ರ ನಾಯಕ ಶಿವರಾಜ್‌ಕುಮಾರ್ ಹೆಗಲಮೇಲೆಯೇ ಸವಾರಿ ಮಾಡುತ್ತದೆ. ನಿಜಕ್ಕೂ ತನ್ನ 100ನೆಯ ಚಿತ್ರದಲ್ಲಿ ಶಿವರಾಜ್‌ಕುಮಾರ್ ತನ್ಮಯತೆಯಿಂದ ನಟಿಸಿದ್ದಾರೆ ಎನ್ನಬಹುದು.

ಸಾಮಾನ್ಯವಾಗಿ ಜನಪ್ರಿಯ ನಾಯಕನಟನೊಬ್ಬನ 100ನೇ ಚಿತ್ರ ಬಿಡುಗಡೆಯಾದಾಗ ಅದರ ಯಶಸ್ಸಿನ ಕೀರ್ತಿ ಬಹುಪಾಲು ನಾಯಕನಿಗೆ ಮಾತ್ರ ಸಲ್ಲುತ್ತದೆ. ಆದರೆ ಈ ಚಿತ್ರದಲ್ಲಿ ನಾಯಕ ಶಿವಣ್ಣ ಮತ್ತು ನಿರ್ದೇಶಕ ಪ್ರೇಮ್ ಇಬ್ಬರೂ ತಮ್ಮ ತಮ್ಮ ಪ್ರತಿಭೆಯನ್ನು ಸಾಣೆಗಿಟ್ಟಂತೆ ಕೆಲಸ ಮಾಡಿದ್ದಾರೆ. ಆಧುನಿಕ ತಂತ್ರಜ್ಞಾನವಾದ ಗ್ರಾಫಿಕ್ ಮತ್ತು ತ್ರಿ-ಡಿ ಬಳಕೆ ಮಾತ್ರವಲ್ಲ, ಚಿತ್ರಕಥೆ ಹೆಣೆಯುವಲ್ಲಿ ಮತ್ತು ನಿರೂಪಣೆಯಲ್ಲಿ ಕೂಡಾ ಪ್ರೇಮ್ ತನ್ನ ಜಾಣ್ಮೆಯನ್ನು ಪ್ರದರ್ಶಿಸಿದ್ದಾರೆ. ನಾಯಕ ಶಿವರಾಜ್‌ಕುಮಾರ್ ಸೆಂಟಿಮೆಂಟ್ ದೃಶ್ಯಗಳಲ್ಲಿ ಗಮನಸೆಳೆದರೆ, ಎಂದಿನಂತೆ ಫೈಟಿಂಗ್ ಮತ್ತು ಹಾಡಿನ ದೃಶ್ಯಗಳಲ್ಲಿ ಪವರ್‌ಫುಲ್ಲಾಗಿ ಕಾಣಿಸಿಕೊಂಡಿದ್ದಾರೆ. 'ಹೊಸ ಹುಡುಗಿ' ಸುಮಿತ್ ಕೌರ್ ಅತ್ವಾರ್ ತೆಳ್ಳಗೆ ಬಳುಕುತ್ತಾ ಬಾಳೆದಿಂಡಿನಂತೆ ಕಾಣಿಸುತ್ತಾ, ನರ್ತಿಸುತ್ತಾ ವಿಸ್ಮಯ ಮೂಡಿಸುವಲ್ಲಿ ಸಫಲರಾಗಿದ್ದಾರೆ.

ಹೀಗೆ ಒಂದು ಸದಭಿರುಚಿಯ ಪಕ್ಕಾ ಮಸಾಲೆ ಚಿತ್ರವನ್ನು ನೀಡಿರುವ ಪ್ರೇಮ್ ತಾನು ಬರೀ ಗಿಮಿಕ್ ರಾಜ, ಬುರುಡೆದಾಸ ಅಲ್ಲ, ಅದರ ಜೊತೆಗೆ ಒಬ್ಬ 'ಕನಸುಗಾರ', 'ಹಠವಾದಿ' ಮತ್ತು ಹೇಳಿದ್ದನ್ನು ಮಾಡಿಯೇ ತೀರುವ ಮಾತುಗಾರ ಎಂಬುದನ್ನು ತೋರಿಸಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಸೋಲಿನ ಸರಪಳಿಯಲ್ಲಿ ಬಂಧಿಯಾಗಿದ್ದ ನಿರ್ದೇಶಕ ಪ್ರೇಮ್- ನಟ ಶಿವಣ್ಣ ಈಗ 'ಜೋಗಯ್ಯ'ನಿಂದಾಗಿ ಬಿಡುಗಡೆ ಹೊಂದಲಿದ್ದಾರೆಯೆ? ಕಾದು ನೋಡೋಣ.

• ಶೆಣೈ

ರಕ್ಷಿತಾ ತಂದೆ ಮತ್ತು ಮಗು

'ಜೋಗಯ್ಯ' ಚಿತ್ರದಲ್ಲಿ ನಿರ್ದೇಶಕ ಪ್ರೇಮ್ ಅವರ ತಾರಾಪತ್ನಿ ರಕ್ಷಿತಾ ನಟಿಸಿದ್ದಾರೆಯೇ? ಎಂಬ ಕುತೂಹಲ ಅಭಿಮಾನಿಗಳಲ್ಲಿತ್ತು, ಹಾಗೆಯೇ ಯಾವುದಾದರೂ ಒಂದು ಸಣ್ಣ ಪಾತ್ರದಲ್ಲಿ ನಿರ್ದೇಶಕ ಪ್ರೇಮ್ ಕಾಣಿಸಿಕೊಳ್ಳುತ್ತಾರೆ ಎಂಬ ಗಾಳಿ ಸುದ್ದಿಯೂ ಎಲ್ಲ ಕಡೆ ಹರಡಿತ್ತು,



ಈಗ ಚಿತ್ರ ಬಿಡುಗಡೆಯ ನಂತರ ಪ್ರೇಮ್ ಆ ಎಲ್ಲಾ ಊಹಾಪೋಹಗಳಿಗೆ ಇತಿಶ್ರೀ ಹಾಡಿದ್ದಾರೆ. ಪ್ರೇಮ್ ಅಥವಾ ರಕ್ಷಿತಾ ಇಡೀ ಚಿತ್ರದಲ್ಲಿ ಎಲ್ಲೂ ಕಾಣಿಸಿಕೊಂಡಿಲ್ಲ. ಆದರೆ ಈ ಚಿತ್ರವನ್ನು ರಕ್ಷಿತಾಳ ತಂದೆ ಕ್ಯಾಮೆರಾಮನ್ ದಿವಂಗತ ಗೌರಿಶಂಕರ್ ಅವರಿಗೆ ಅರ್ಪಿಸುವ ಮುಖಾಂತರ ಪ್ರೇಮ್ ತನ್ನ ಮಾವನಿಗೆ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ವಿಶೇಷವೆಂದರೆ ಶಿವರಾಜ್‌ಕುಮಾರ್ ಅವರ ಚೊಚ್ಚಲು 'ಆನಂದ್' ಚಿತ್ರಕ್ಕೂ ಗೌರಿಶಂಕರ್ ಅವರೇ ಛಾಯಾಗ್ರಾಹಕ ರಾಗಿದ್ದರು. ಹೀಗಾಗಿ ಇದು ಶಿವರಾಜ್‌ಕುಮಾರ್ ಕಡೆಯಿಂದಲೂ ಒಂದು ರೀತಿಯಲ್ಲಿ ಗೌರಿಶಂಕರ್‌ಗೆ ಶ್ರದ್ಧಾಂಜಲಿ ಅರ್ಪಿಸಿದಂತಿದೆ. ಮತ್ತೊಂದೆಡೆ ರಕ್ಷಿತಾ-ಪ್ರೇಮ್‌ರ ಮುದ್ದು ಮಗ ಸೂರ್ಯ ಪರೋಕ್ಷವಾಗಿ ಈ ಚಿತ್ರದ ಮುಖಾಂತರ ಬಣ್ಣದ ಲೋಕಕ್ಕೆ ಕಾಲಿಟ್ಟಂತಿದೆ. ಚಿತ್ರದ ಆರಂಭದಲ್ಲಿ 'ಪ್ರೇಮ್ ಪ್ರೊಡಕ್ಷನ್ಸ್ ಅರ್ಪಿಸುವ' ಎಂಬ ಸಾಲುಗಳು ಬಂದಾಗ ಕಾಣಿಸುವ ಗ್ರಾಫಿಕ್ ಮಗು ಬೇರೆ ಯಾರೂ ಅಲ್ಲ, ಅದು ರಕ್ಷಿತಾ-ಪ್ರೇಮ್‌ರ ಸುಪುತ್ರ.

ಈ ಬಗ್ಗೆ ಪ್ರತಿಕ್ರಿಯಿಸಿದ ರಕ್ಷಿತಾ "ನನಗೆ ನಿರ್ಮಾಪಕಿಯಾಗಿ ಈ ಚಿತ್ರ ತಂದುಕೊಡುವ ಕೋಟ್ಯಾಂತರ ರೂ. ಲಾಭಕ್ಕಿಂತ ಈ ಎರಡು ಪುಟ್ಟ ಸಂಗತಿಗಳು ಹೆಚ್ಚು ಸಂತಸ ನೀಡಿವೆ" ಎಂದು ಭಾವುಕರಾಗುತ್ತಾರೆ.

ಪ್ರಚಾರದ ಭರಾಟೆಯಲ್ಲೇ ಜನ್ಮವೆತ್ತ 'ಜೋಗಯ್ಯ'

'ಜೋಗಯ್ಯ' ಚಿತ್ರ ಪ್ರಾರಂಭವಾದ ಬರೋಬ್ಬರಿ ಒಂದು ವರ್ಷ ಒಂದು ತಿಂಗಳ ನಂತರ ಬಿಡುಗಡೆಯ ಭಾಗ್ಯ ಕಾಣುತ್ತಿದೆ.


ಕಳೆದ ವರ್ಷ ಜುಲೈ ತಿಂಗಳಲ್ಲಿ ಈ ಚಿತ್ರದ ಮುಹೂರ್ತವನ್ನು ನಿರ್ಮಾಪಕಿ ರಕ್ಷಿತಾ ಮತ್ತು ನಿರ್ದೇಶಕ ಪ್ರೇಮ್ ಜೋಡಿ ಅದ್ದೂರಿಯಾಗಿ ನಡೆಸಿತ್ತು, ಬೆಂಗಳೂರಿನ ಒಳ ಕ್ರೀಡಾಂಗಣದಲ್ಲಿ ನಡೆದ ಮುಹೂರ್ತಕ್ಕೆ ತೆಲುಗು ಮತ್ತು ತಮಿಳಿನ ಚಿತ್ರರಂಗದಿಂದ ಚಿರಂಜೀವಿ, ಸೂರ್ಯ, ವಿಜಯ್ ಮೊದಲಾದ ನಾಯಕನಟರನ್ನು ಕರೆಸಲಾಗಿತ್ತು, ಕನ್ನಡದ ಈ ಚಿತ್ರಕ್ಕೂ ನೆರೆಯ ರಾಜ್ಯಗಳ ನಟರಿಗೂ ಎತ್ತಿಂದೆತ್ತಣ ಸಂಬಂಧ ಎಂದು ಜನ ಅಚ್ಚರಿಪಟ್ಟಿದ್ದರೂ ಇದಕ್ಕೆ ಸಕತ್ ಪ್ರಚಾರವಂತೂ ಸಿಕ್ಕಿತ್ತು.



ಅಷ್ಟಕ್ಕೆ ತೃಪ್ತಿ ಪಟ್ಟುಕೊಳ್ಳದ ಪ್ರೇಮ್ ತಮ್ಮ ಈ ಚಿತ್ರದ ನಾಯಕಿಯಾಗಿ ನಾಲ್ಕು ಕೋಟಿ ರೂಪಾಯಿ ಸಂಭಾವನೆ ಪಡೆಯುವ ಬಾಲಿವುಡ್‌ನ ಪ್ರಿಯಾಂಕ ಚೋಪ್ರಾಳನ್ನು ಕರೆಸುವುದಾಗಿ ಹೇಳಿ ಮತ್ತಷ್ಟು ಪ್ರಚಾರ ಪಡೆದರು. ಆದರೆ ಕೊನೆಗೆ ಆತ ಕರೆದುಕೊಂಡು ಬಂದದ್ದು ನಾಲ್ಕು ಸಾವಿರ ರೂಪಾಯಿ ಕೂಡ ಬಾಳದ ಸೌಮಿತ್ ಕೌರ್ ಅಗರ್ವಾಲ್ ಎಂಬ ಹೊಸ ನಾಯಕಿಯನ್ನು!

ಆದರೂ 'ಜೋಗಯ್ಯ' ಚಿತ್ರಕ್ಕೆ ಎಲ್ಲಿಲ್ಲದ ಪ್ರಚಾರ ಸಿಕ್ಕಿದೆ. ಇದರಿಂದಾಗಿ ಜನರಲ್ಲಿ ಅಪಾರ ನಿರೀಕ್ಷೆಯನ್ನೂ ಹುಟ್ಟಿಸಿದೆ. ಈ ಮಧ್ಯೆ ರಕ್ಷಿತಾ ಮತ್ತು ಪ್ರೇಮ್ ದಾಂಪತ್ಯ ಜೀವನದಲ್ಲಿ ಬಿರುಕು ಬಿಟ್ಟಿದೆ ಎಂದೂ, ಅದಕ್ಕೆ ಕಾರಣ 'ಜೋಗಯ್ಯ' ಚಿತ್ರದ ನಾಯಕಿ ಸೌಮಿತ್ ಕೌರ್ ಅಗರ್ವಾಲ್ ಎಂದೂ ಗಾಂಧಿನಗರದಲ್ಲಿ ಗುಲ್ಲೆದ್ದಿತ್ತು, ಆದರೆ ಇದೂ ಕೂಡ ಚಿತ್ರದ ಪಬ್ಲಿಸಿಟಿಗಾಗಿ ಪ್ರೇಮ್ ಮಾಡಿದ ಒಂದು ತಂತ್ರ ಎಂಬುದು ಕೆಲವರ ಅಭಿಪ್ರಾಯ.

ಅದೇನೇ ಇರಲಿ, ಬರೀ ಪ್ರಚಾರ ಚಿತ್ರವೊಂದನ್ನು ಗೆಲ್ಲಿಸುವುದಿಲ್ಲ, ಬದಲಾಗಿ ಚಿತ್ರ ಚೆನ್ನಾಗಿದ್ದರೆ ಮಾತ್ರ ಜನ ಅದನ್ನು ಸ್ವೀಕರಿಸುತ್ತಾರೆ. 'ಜೋಗಯ್ಯ' ಏನಾಗುತ್ತಾನೋ ನೋಡಬೇಕಿದೆ.



...ಂಚುರಿಯತ್ತ ...ವಣ್ಣನ ...ಂಚಾರ

...ರಿಗೂ ಗೊತ್ತಿರುವಂತೆ ಶಿವರಾಜ್‌ಕುಮಾರ್ ...ಮ ಚಿತ್ರಗಳ ಸರದಾರ. 'ಆನಂದ್' ಚಿತ್ರದಿಂದ ...ಯ್ಯ' ಚಿತ್ರದ ತನಕ ಶಿವಣ್ಣ ನಡೆದು ಬಂದ ...ಂಡಿತವಾಗಿಯೂ ಹೂವು ಹಾಸಿದ ...ಗಿರಲಿಲ್ಲ, ಬದಲಾಗಿ ಅದು ಕಲ್ಲುಮುಳ್ಳಿನ ... ಆಗಿತ್ತು ಎಂದರೆ ತಪ್ಪಾಗಲಾರದು.

...ಜ್‌ಕುಮಾರ್ 'ಆನಂದ್' ಚಿತ್ರಕ್ಕೆ ನಾಯಕ ...ಯ್ಕೆಯಾದಾಗ ಗಾಂಧಿನಗರದಲ್ಲೂ ವಂಶ ...ರ್ಯ ಪದ್ಧತಿ ಆರಂಭವಾಯಿತು ಎಂದು ...ಎತ್ತಿದವರೇ ಹೆಚ್ಚು. ಆದ್ದರಿಂದ ಶಿವರಾಜ್ ... ಪಾಲಿಗೆ ಅವರು ಡಾ. ರಾಜ್‌ಕುಮಾರ್ ...ತ್ರ ಆಗಿದ್ದದ್ದು ವರ ಮತ್ತು ಶಾಪ ಎರಡೂ ...ತನ್ನ ತಂದೆಯ ಜನಪ್ರಿಯತೆ, ಪ್ರತಿಭೆ ಮತ್ತು ...ಗಳ ಎದುರು ತನ್ನಲ್ಲೂ ಪ್ರತಿಭೆ ಇದೆ, ತಾನೂ ...ತೆ ಪಡೆಯಬಲ್ಲೆ ಎಂಬುದನ್ನು ಸಾಬೀತು ...ಶಿವಣ್ಣ ತನ್ನ ವೃತ್ತಿ ಬದುಕಿನ ಆರಂಭದಿಂದಲೂ ...ಬೇಕಾಯಿತು.

... ನಟಿಸಿದ ಮೊದಲ ಮೂರು ಚಿತ್ರಗಳಾದ ..., 'ರಥಸಪ್ತಮಿ' ಮತ್ತು 'ಮನಮೆಚ್ಚಿದ ... ಬಾಕ್ಸ್ ಆಫೀಸ್‌ನಲ್ಲಿ ಸಿಲ್ವರ್ ಜ್ಯೂಬಿಲಿ ...ಕಂಡಿದ್ದರಿಂದ ಅವರ ವೃತ್ತಿಜೀವನಕ್ಕೆ ಒಳ್ಳೆಯ ...ಸಿಕ್ಕಿತು. ಅಲ್ಲಿಯ ತನಕ ಕನ್ನಡ ಚಿತ್ರರಂಗದ ...ಲ್ಲಿ ಯಾವೊಬ್ಬ ನಟ ನಟಿಸಿದ ಮೊದಲ ... ಚಿತ್ರಗಳು ರಜತಮಹೋತ್ಸವ ಕಂಡ ...ಣೆಯೇ ಇರಲಿಲ್ಲ, ಸಹಜವಾಗಿ ಶಿವಣ್ಣನಿಗೆ ... ಹೀರೋ' ಎಂಬ ಬಿರುದು ಕೂಡ ...

...ಚಿತ್ರಗಳ ಅಪೂರ್ವ ಯಶಸ್ಸು ಶಿವಣ್ಣನಿಗೆ ... ಆತ್ಮವಿಶ್ವಾಸವನ್ನು ತಂದುಕೊಟ್ಟವು. ಈ ... ಸಾಂಸಾರಿಕ ಕಥಾವಸ್ತು ಹೊಂದಿದ್ದರಿಂದ ...ನ ಸದಸ್ಯರೆಲ್ಲ ಒಟ್ಟಿಗೆ ಕುಳಿತು ನೋಡು... ಆದರೆ ಆನಂತರ ಶಿವಣ್ಣ ನಟಿಸಿದ ಹೊಡಿ, ... ಸೂತ್ರದ ಚಿತ್ರಗಳು ಅವರನ್ನು ಮಾಸ್ ...ಮಾಡಿದವು. ಸಿನಿಮಾ ಭಾಷೆಯಲ್ಲಿ ಹೇಳುವು...ವರಾಜ್ ಕುಮಾರ್ ಬಿ ಮತ್ತು ಸಿ ಕೇಂದ್ರಗಳ ... ಆದರು.

... ಸಂದರ್ಭದಲ್ಲಿ ಅಂತಹ ಹೊಡಿ ಬಡಿ ... ಅಂಟಿಕೊಳ್ಳದೆ ನಟನೆಗೆ ಅವಕಾಶವಿರುವ ... ಮರೆಯಲ್ಲಿ'ಯಂಥ ಚಿತ್ರಗಳಲ್ಲೂ ನಟಿಸಿ ...ಲ್ಲೂ ಇಲ್ಲೂ ಎಲ್ಲೆಲ್ಲೂ ಸಲ್ಲುವ ನಟನಾಗಿ ...ಗಿ ಬೆಳೆಯುತ್ತಾ ಬಂದರು.

... ಯಶಸ್ಸುಗಳಿಂದಾಗಿ ಚಿತ್ರರಂಗದಲ್ಲಿ ಉನ್ನತ ... ಶಿವಣ್ಣ ತಮ್ಮ ಚಿತ್ರಗಳ ಆಯ್ಕೆಯಲ್ಲಿ ...ರಂಭಿಸಿದರು. ಅವರು ನಟಿಸಿದ ಅನೇಕ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದವು. ಆಗ ಶಿವಣ್ಣನ ಕಾಲ ಮುಗಿಯಿತು ಎಂದು ಅನಿಸಲಾರಂಭಿಸಿತ್ತು. ಇಂತಹ ಸಂದರ್ಭದಲ್ಲಿ ಶಿವಣ್ಣನ ವೃತ್ತಿ ಜೀವನಕ್ಕೆ ಪುನರ್ ಜನ್ಮ ನೀಡಿದ್ದು ಉಪೇಂದ್ರ ನಿರ್ದೇಶನದ 'ಓಂ' ಚಿತ್ರ.

ಇದಾದನಂತರ ಬಂದ 'ನಮ್ಮೂರ ಮಂದಾರ ಹೂವೆ' ಮತ್ತು 'ಜನುಮದ ಜೋಡಿ' ತರಹದ ಚಿತ್ರಗಳು ಶಿವಣ್ಣನ ಪ್ರತಿಭೆಗೆ ಸಾಕ್ಷಿಯಾದವು. ಈ ಚಿತ್ರದಲ್ಲಿ ಹೊಡಿ, ಬಡಿ, ಕಡಿ ತರಹದ ಮಾಮೂಲಿ ಸೂತ್ರಗಳಿರಲಿಲ್ಲ, ಅಶ್ಲೀಲ ಸಂಭಾಷಣೆಗಳಿರಲಿಲ್ಲ, ಅಥವಾ ಶಿವಣ್ಣನ ಅಭಿಮಾನಿಗಳು ಇಷ್ಟಪಡುವ ಆಧುನಿಕ ನೃತ್ಯವೂ ಇರಲಿಲ್ಲ, ಆದರೂ ಈ ಚಿತ್ರಗಳು ಕರ್ನಾಟಕದ ಮೂಲೆಮೂಲೆಯಲ್ಲಿ ಜಯಭೇರಿ ಬಾರಿಸಿದವು.

ಇದಾದನಂತರ ಮತ್ತೆ ಶಿವಣ್ಣನ ಚಿತ್ರಗಳು ಮುಗ್ಗರಿಸಲಾರಂಭಿಸಿದವು. 'ಮತ್ತದೇ 'ಮುಗಿಯಿತಾ ಶಿವಣ್ಣನ ಕತೆ' ಎನ್ನುವಷ್ಟರಲ್ಲಿ ಶಿವಣ್ಣ ನಟಿಸಿದ ಚಿತ್ರವೊಂದು ಪವಾಡದ ರೀತಿಯಲ್ಲಿ ಹಿಟ್ ಆಯಿತು. ಆ ಚಿತ್ರದ ಹೆಸರು 'ತವರಿಗೆ ಬಾ ತಂಗಿ'. ಈ ಚಿತ್ರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ತುಂಬಿದ ಪ್ರದರ್ಶನಗಳನ್ನು ಕಂಡಿತಲ್ಲದೆ ಅಣ್ಣ-ತಂಗಿ ನಡುವಿನ ಬಾಂಧವ್ಯದ ಕಥಾವಸ್ತು ಹೊಂದಿದ್ದ ಹಲವಾರು ಚಿತ್ರಗಳ ಜನ್ಮಕ್ಕೂ ನಾಂದಿ ಹಾಡಿತು.

ಇದಾದ ಮೇಲೆ 'ಡಾನ್', 'ಸ್ಟೈಲ್' ಮತ್ತು 'ರೌಡಿ ಅಳಿಯ' ತರಹದ ಹಲವಾರು ಮಾಮೂಲಿ ಚಿತ್ರಗಳು ಬಂದು ಮತ್ತೆ ಶಿವಣ್ಣನ ವೃತ್ತಿ ಬದುಕು ಅಂತ್ಯಗೊಳ್ಳುವ ಹಂತಕ್ಕೆ ಬಂದು ನಿಂತಿತ್ತು. ಆಗ ಬಂದದ್ದೇ ಪ್ರೇಮ್ ನಿರ್ದೇಶನದ 'ಜೋಗಿ'. ಈ ಚಿತ್ರ ಮತ್ತು ಅದರಲ್ಲಿನ ಹಾಡುಗಳು ದೊಡ್ಡ ಹಿಟ್‌ಗಳಾಗಿ ಪ್ರೇಮ್‌ಗೆ ಬೇಡಿಕೆ ತಂದಿತ್ತಲ್ಲದೆ ನಿರ್ಮಾಪಕ ಅಶ್ವಿನಿ ರಾಮ್‌ಪ್ರಸಾದ್ ಅವರಿಗೆ ಕೋಟಿಗಟ್ಟಲೆ ಲಾಭ ತಂದಿತ್ತು.

ಆದರೆ ಯಥಾಪ್ರಕಾರ ಈ ಹಿಟ್ ಸಿನಿಮಾದ ನಂತರ ಶಿವಣ್ಣನ ಚಿತ್ರಗಳು ಮತ್ತೆ ಮಕಾಡೆ ಮಲಗಲಾರಂಭಿಸಿದವು. ಅಷ್ಟೇ ಅಲ್ಲ 'ಜೋಗಿ' ಶಿವಣ್ಣ ನಟಿಸಿರುವ ಯಾವ ಚಿತ್ರವೂ ಸೂಪರ್ ಹಿಟ್ ಆಗಿಲ್ಲ. ಈಗ 'ಜೋಗಯ್ಯ' ಮತ್ತೆ ಶಿವಣ್ಣನಿಗೆ ತಾರಾಮೌಲ್ಯವನ್ನು ತಂದುಕೊಡುತ್ತದೆಯೇ ಎಂಬುದೇ ಅವರ ಅಭಿಮಾನಿಗಳ ಮತ್ತು ಗಾಂಧಿನಗರದ ನಿರ್ಮಾಪಕರ ಕಾತುರವಾಗಿದೆ.

ಶಿವಣ್ಣನ ವೃತ್ತಿ ಬದುಕಿನ ಒಂದು ಅಚ್ಚರಿ ಏನೆಂದರೆ ಇವರ ಹಲವಾರು ಸಿನಿಮಾಗಳು ಬಾಕ್ಸಾಫೀಸಿನಲ್ಲಿ ನೆಲಕಚ್ಚುತ್ತಿರುವಾಗಲೂ ಅವರ ಕಾಲ್‌ಶೀಟ್ ಪಡೆಯಲು ಅವರ ಮನೆಮುಂದೆ ನಿಲ್ಲುವ ನಿರ್ಮಾಪಕರ ಸಾಲು ಎಂದೂ ಕಡಿಮೆಯಾಗಿಲ್ಲ. ಹೀಗಾಗಿ ಅವರ ಚಿತ್ರಗಳು ಸೋತ ವೇಗದಲ್ಲೇ ಅವರ ಹೊಸ ಚಿತ್ರಗಳು ಸೆಟ್ಟೇರುತ್ತಲೇ ಇರುತ್ತವೆ. ಈ ಕಾರಣದಿಂದಲೇ ಅವರು ಇಷ್ಟು ಬೇಗ ನೂರರ ಗಡಿಯನ್ನು ತಲುಪಲು ಸಾಧ್ಯವಾಗಿದೆ.

ನೀವೇ ಗಮನಿಸಿ, ಶಿವರಾಜ್‌ಕುಮಾರ್ ಜೊತೆ ಜೊತೆಗೇ ಕ್ರೇಜಿಸ್ಟಾರ್ ರವಿಚಂದ್ರನ್, ರಮೇಶ್ ಅರವಿಂದ್ ಮತ್ತು ಜಗ್ಗೇಶ್ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟರು. ಅವರಲ್ಲಿ ರವಿಚಂದ್ರನ್ ಇನ್ನೂ 50 ಚಿತ್ರಗಳ ಗಡಿ ದಾಟಿಲ್ಲ, ರಮೇಶ್ ಈಗ ಲೆಕ್ಕಕ್ಕೇ ಇಲ್ಲ, ಜಗ್ಗೇಶ್ ಕಾಮಿಡಿ ಹೀರೋ ಹೊರತು ಎಲ್ಲ ತರಹದ ಪಾತ್ರಗಳಲ್ಲಿ ನಟಿಸುವ ಪ್ರತಿಭೆಯಲ್ಲ. ಆದರೆ ಶಿವಣ್ಣ ಮಾತ್ರ ಇಂದಿಗೂ ಹೀರೋ ಆಗಿದ್ದಾರೆ, ಹಿಟ್‌ಗಳನ್ನು ಕೊಡುತ್ತಿದ್ದಾರೆ, ವಿವಿಧ ಪಾತ್ರಗಳಲ್ಲಿ ನಟಿಸುತ್ತಾ ಸೈ ಎನಿಸಿಕೊಳ್ಳುತ್ತಿದ್ದಾರೆ, ಹಿಂದಿನಷ್ಟೇ ಹುಮ್ಮಸ್ಸಿನಿಂದ ಡ್ಯಾನ್ಸ್ ಮಾಡುತ್ತಾರೆ ಲಾಂಗನ್ನೂ ಬೀಸುತ್ತಾರೆ, ಮೊದಲಿಗಿಂತಲೂ ಹೆಚ್ಚೆಚ್ಚು ಅಭಿಮಾನಿಗಳನ್ನು ಹೊಂದಿದ್ದಾರೆ!

ಎಂದೂ ವಾದವಿವಾದಗಳಲ್ಲಿ ಸಿಲುಕಿಕೊಳ್ಳದ, ಪ್ರತಿಷ್ಠೆ ಮೇಲೆ ನಿಲ್ಲದ, ತನ್ನ ತಂದೆಯಂತೆ ಸರಳತೆಯನ್ನು ಮೈಗೂಡಿಸಿಕೊಂಡಿರುವ, ಸಭ್ಯವ್ಯಕ್ತಿಯಾದ ಶಿವರಾಜ್‌ಕುಮಾರ್ ಸದ್ಯಕ್ಕೆ ಗಾಂಧಿನಗರದ ಮಾಯಾಲೋಕದ ಎಲ್ಲ ಜನರ ಕೇಂದ್ರಬಿಂದು ಆಗಿದ್ದಾರೆ.

ಇನ್ನು ಹಲವು ತಿಂಗಳಲ್ಲಿ ಶಿವಣ್ಣನಿಗೆ 50 ವರ್ಷ ತುಂಬುತ್ತದೆ. ಅವರು ಚಿತ್ರರಂಗಕ್ಕೆ ಕಾಲಿಟ್ಟು 25 ವರ್ಷಗಳಾಗಿವೆ, ಈಗ ಅವರ 100 ನೇ ಚಿತ್ರ ಬಿಡುಗಡೆಯಾಗಿದೆ. ಪುಟ್ಟಸ್ವಾಮಿಯಾಗಿ ಜನಿಸಿದ, ತಾನು ನಟನಾಗಲು ಸಾಧ್ಯವೇ ಎಂಬ ಆತಂಕ ತುಂಬಿದ್ದ ಯುವಕನಾಗಿದ್ದ, ಶಿವರಾಜ್‌ಕುಮಾರ್ ಆಗಿ ಚಿತ್ರರಂಗಕ್ಕೆ ಪರಿಚಯವಾದ, ಈಗ ಎಲ್ಲರ ಪ್ರೀತಿಯ ಶಿವಣ್ಣನಾಗಿರುವ ಈ ನಟನ ಎರಡನೇ ಇನ್ನಿಂಗ್ಸ್‌ಗೆ ನಮ್ಮ ಶುಭಕಾಮನೆ.

ಎಲ್ಲೆಡೆ 'ಜೋಗಯ್ಯ'ನ ಮ್ಯಾಜಿಕ್

ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಕಪಾಲಿ ಮತ್ತು ಸಂತೋಷ್ ಥಿಯೇಟರ್‌ಗಳಲ್ಲಿ 'ಜೋಗಯ್ಯ' ಬಿಡುಗಡೆಯಾಗುವ ಮುಖಾಂತರ ಒಂದು ಹೊಸ ದಾಖಲೆಯನ್ನು ಸೃಷ್ಟಿಸಿದೆ. ಈ ಹಿಂದೆ ಡಾ.ರಾಜ್‌ಕುಮಾರ್ ನಟಿಸಿದ 'ಜೀವನಚೈತ್ರ' ಮಾತ್ರ ಇದೇ ರೀತಿ ಎರಡು ಥಿಯೇಟರ್‌ಗಳಲ್ಲಿ ಏಕಕಾಲದಲ್ಲಿ ಬಿಡುಗಡೆಯಾಗಿತ್ತು.


ಅಷ್ಟೇ ಅಲ್ಲ, ಈಗಾಗಲೇ ಈ ಚಿತ್ರದ ಟಿಕೆಟ್‌ಗಳೂ ಕಳೆದ ಒಂದು ವಾರದಿಂದ ಮುಂಗಡ ಬುಕ್ ಆಗಿವೆ. ರಾಜ್‌ಕುಮಾರ್ ಅವರ ಸಿನಿಮಾಗಳನ್ನು ಹೊರತುಪಡಿಸಿದರೆ ಬೇರಾವ ನಾಯಕನ ಚಿತ್ರದ ಟಿಕೆಟ್‌ಗಳು ಕೂಡಾ ಇಷ್ಟೊಂದು ಅಡ್ವಾನ್ಸ್ ಬುಕಿಂಗ್ ಮಾರಾಟವಾಗಿರಲಿಲ್ಲ.

'ಜೋಗಯ್ಯ'ನ ಮತ್ತೊಂದು ಹೈಲೆಟ್ ಅಂದರೆ ಸುಮಾರು 250ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಇದು ಬಿಡುಗಡೆಯಾಗುತ್ತಿರುವುದು. ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಒಂದು ಚಿತ್ರ 250 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವುದು ಇದೇ ಮೊದಲು!

ಗಿಮಿಕ್ ರಾಜ ಪ್ರೇಮ್‌ನ ವೃತ್ತಾಂತ

ನಿರ್ದೇಶಕ ಪ್ರೇಮ್ ಅವರ ಇನ್ನೊಂದು ಹೆಸರೇ 'ಗಿಮಿಕ್ ರಾಜ'. ಅದಕ್ಕೆ ಕಾರಣ ಅವರು ಮಾಡುವ ಗಿಮಿಕ್‌ಗಳು ಮತ್ತು ಆ ಮೂಲಕ ತಮ್ಮ ಚಿತ್ರಕ್ಕೆ ಪುಕ್ಕಟೆ ಪ್ರಚಾರ ಪಡೆಯುವುದು.

ಕೆಲ ವರ್ಷಗಳ ಹಿಂದಷ್ಟೇ ಗಾಂಧಿನಗರಕ್ಕೆ ಕಾಲಿಟ್ಟ ಪ್ರೇಮ್ ಆಗಲೂ ಗಿಮಿಕ್ ಮಾಡಿಯೇ ಜನರ ಗಮನ ಸೆಳೆದಿದ್ದರು. 'ಕರಿಯ' ಎಂಬ ಚಿತ್ರವನ್ನು ನಿರ್ದೇಶಿಸಿದ ಪ್ರೇಮ್ ಆ ಚಿತ್ರದಲ್ಲಿ ಸುಮಾರು 30ಕ್ಕೂ ಹೆಚ್ಚು ಬೆಂಗಳೂರಿನ ಭೂಗತ ಜಗತ್ತಿನ ರೌಡಿಗಳನ್ನು ಜೂನಿಯರ್ ಆರ್ಟಿಸ್ಟ್‌ಗಳಾಗಿ ಬಳಸುವ ಮೂಲಕ ಭಾರೀ ಸುದ್ದಿ ಮಾಡಿದ್ದರು. ಆಗ ಚಿತ್ರಮಂದಿರದ ಮುಂದೆ ಈ ರೌಡಿಗಳ ಕಟೌಟುಗಳನ್ನು, ಅಟ್ಟಹಾಸವನ್ನು ನೋಡಿ ಜನ ಅಸಹ್ಯ ಪಟ್ಟುಕೊಂಡಿದ್ದರು. ಇದೆಲ್ಲದರ ನಡುವೆಯೂ 'ಕರಿಯ' ಚಿತ್ರ ಹಿಟ್ ಆಯಿತು. ಅದನ್ನು ಕಂಡು ಗಾಂಧಿನಗರ ಈ ಪ್ರೇಮ್ ಬರೀ ಗಿಮಿಕ್ ರಾಜಾ ಅಲ್ಲ, ಇದರ ಜೊತೆಗೆ ಆತನಲ್ಲಿ ಸ್ವಲ್ಪ ಪ್ರತಿಭೆಯೂ ಇದೆ ಎಂದುಕೊಂಡರು.



ಆ ನಂತರ ಹೊಸಬರಾದ ಅಜಯ್ ರಾವ್ ಮತ್ತು ಸುನಿಲ್ ರಾವ್ ಇವರನ್ನು ಹಾಕಿ 'ಎಕ್ಸ್‌ಕ್ಯೂಸ್ ಮಿ' ಎಂಬ ಚಿತ್ರ ನಿರ್ದೇಶಿಸಿದ ಪ್ರೇಮ್ ಅದರಲ್ಲೂ ತಮ್ಮ ಪ್ರತಿಭೆಯನ್ನು ತೋರಿಸಿ ತಮ್ಮ ತಾರಾಮೌಲ್ಯವನ್ನು ಹೆಚ್ಚಿಸಿಕೊಂಡರು. ಅದಾದನಂತರ ಪ್ರೇಮ್ ಕೈಹಾಕಿದ್ದು ಶಿವರಾಜ್‌ಕುಮಾರ್ ಅಭಿನಯದ 'ಜೋಗಿ' ಚಿತ್ರಕ್ಕೆ.

ಹೀಗೆ ಮೊದಲ ಮೂರು ಚಿತ್ರಗಳ ಮೂಲಕ ಒಂದೊಂದು ರೀತಿಯಲ್ಲಿ ಸುದ್ದಿ ಮಾಡಿದ ಮತ್ತು ಬಾಕ್ಸ್ ಆಫೀಸಿನಲ್ಲಿ ಜಯ ಸಾಧಿಸಿದ ಪ್ರೇಮ್ ಸ್ವಲ್ಪ ಕಾಲದಲ್ಲೇ ಗಾಂಧಿನಗರದ ಪ್ರಮುಖ ನಿರ್ದೇಶಕನಾಗಿ ಬೆಳೆದುಬಿಟ್ಟರು. ಮೊದಲೇ ಗಾಂಧಿನಗರದಲ್ಲಿ ಗೆದ್ದೆತ್ತಿನ ಬಾಲ ಹಿಡಿಯುವವರು ಜಾಸ್ತಿ, ಆದ್ದರಿಂದ ಬಹಳಷ್ಟು ನಿರ್ಮಾಪಕರು ಪ್ರೇಮ್‌ಗೆ ಅಡ್ವಾನ್ಸ್ ಹಣವನ್ನು ಕೊಟ್ಟು ಅವರಿಂದ ತಮ್ಮ ಚಿತ್ರ ನಿರ್ದೇಶಿಸಲು ಮುಂದಾದರು.

ಈ ಮಧ್ಯೆ ಪ್ರೇಮ್ ಉಪೇಂದ್ರನ ಮಾದರಿಯಲ್ಲೇ ತಮ್ಮನ್ನು ರೂಪಿಸಿಕೊಳ್ಳಲು ಶುರುಮಾಡಿದರು. ಸಿನಿಮಾ ನಿರ್ದೇಶನ ಮತ್ತು ಅದರ ಪ್ರಚಾರಕ್ಕಾಗಿ ಗಿಮ್ಮಿಕ್ಕುಗಳನ್ನು ಮಾತ್ರವಲ್ಲ, ಅದರ ಹಾಡುಗಳನ್ನು ಬರೆಯುವುದರಿಂದ ಹಿಡಿದು ತಾವೇ ಹಾಡಲೂ ಪ್ರಾರಂಭಿಸಿದರು. 'ಹ'ಕಾರ 'ಶ'ಕಾರ ಗೊತ್ತಿಲ್ಲದಿದ್ದರೂ, ಅಷ್ಟೇನು ಚೆನ್ನಾಗಿ ಹಾಡಲು ಬರದಿದ್ದರೂ ಪ್ರೇಮ್ ಹಾಡುಗಾರನಾದರು. ಆದರೆ ಅವರು ಹಾಡಿದ ಹಾಡುಗಳ ಸಂಗೀತ್ ಕ್ಯಾಚಿ ಆಗಿದ್ದರಿಂದ ಅವರ ಇತಿಮಿತಿಗಳು ಮುಚ್ಚಿಹೋದವು.

ಇಷ್ಟೆಲ್ಲ ಆದ ಮೇಲೆ ತಾನೂ ಉಪೇಂದ್ರನಂತೆ ಹೀರೋ ಆಗಬಾರದೇಕೆ ಎಂಬ ಹಂಬಲ ಪ್ರೇಮ್ ಅವರಲ್ಲಿ ಹುಟ್ಟಿಕೊಂಡಿತು. ನೋಡಲು ಅಷ್ಟೇನು ಚೆನ್ನಾಗಿಲ್ಲದ, ನಟನೆ ಬಾರದ ಪ್ರೇಮ್ ಈ ದುಸ್ಸಾಹಸಕ್ಕೆ ಕೈಹಾಕಿದ್ದನ್ನು ಕಂಡು ಗಾಂಧಿನಗರ ಜನ ಬೆಚ್ಚಿಬಿದ್ದರು. ಅವರ ಕೆಲವು ಪರಮಾಪ್ತ ಸ್ನೇಹಿತರೂ "ನೀನು ಹೀರೋ ಆಗಬೇಡ, ಹೀರೋಗಳನ್ನು ತಯಾರಿಸುವ ನಿರ್ದೇಶಕನಾಗು" ಎಂದು ಹೇಳಿದರೂ ಪ್ರೇಮ್ ಕೇಳಲಿಲ್ಲ. ಆತನ ಈ ಮಹತ್ವಾಕಾಂಕ್ಷೆಗೆ ಬಲಿಯಾದದ್ದು ಮಾತ್ರ ಅಶ್ವಿನಿ ರಾಮ್‌ಪ್ರಸಾದ್. ಹೇಗಿದ್ದರೂ ಪ್ರೇಮ್ ನಿರ್ದೇಶಿಸಿದ್ದ ಮತ್ತು ಸ್ವತಃ ರಾಮ್‌ಪ್ರಸಾದ್ ನಿರ್ಮಿಸಿದ್ದ 'ಜೋಗಿ' ಹಿಟ್ಟಾಗಿತ್ತಲ್ಲ, ಹಾಗೆಯೇ ಪ್ರೇಮ್ ನಿರ್ದೇಶಿಸಿ-ಹೀರೋ ಆಗಲಿರುವ ಚಿತ್ರ ಕೂಡ ಹಿಟ್ ಆಗುತ್ತದೆ ಎಂಬ ನಂಬಿಕೆಯಿಂದ ಅದನ್ನು ನಿರ್ಮಿಸಲು ರಾಮ್‌ಪ್ರಸಾದ್ ಮುಂದಾದರು.

ಆಗ ಪ್ರೇಮ್ ನಿರ್ದೇಶಿಸಿ-ನಟಿಸಿದ ಚಿತ್ರವೇ 'ಪ್ರೀತಿ ಯಾಕೆ ಭೂಮಿ ಮೇಲಿದೆ?' ಎಂಬ ಅಸಂಬದ್ಧ ಚಿತ್ರ. ಇದಕ್ಕೂ ಪ್ರೇಮ್ ಹಲವಾರು ಗಿಮಿಕ್‌ಗಳನ್ನು ಮಾಡಿದರು. ಬಿಚ್ಚಮ್ಮ ಮಲ್ಲಿಕಾ ಶೆರಾವತ್‌ಳನ್ನು ಮುಂಬೈಯಿಂದ ಕರೆಸಿ ಬೆಂಗಳೂರಿನ ಬೀದಿಗಳಲ್ಲಿ ಕುಣಿಸಿದರು. ದುಬಾರಿಯಾದ ಗ್ರಾಫಿಕ್‌ಗಳನ್ನು ಉಪಯೋಗಿಸಿ ತನ್ನ ಹತ್ತಾರು ಮುಖಗಳು ಒಮ್ಮೆಗೆ ಪರದೆಯ ಮೇಲೆ ಕಾಣಿಸುವಂತೆ ಮಾಡಿದರು. ಇದಕ್ಕೆಲ್ಲ ಪಾಪ ರಾಮ್‌ಪ್ರಸಾದ್ ಕೋಟ್ಯಾಂತರ ರೂಪಾಯಿಗಳನ್ನು ಹೊಳೆಯಂತೆ ಹರಿಸಿದರು.


ಆದರೆ 'ಪ್ರೀತಿ ಯಾಕೆ...' ಬಾಕ್ಸ್ ಆಫೀಸಿನಲ್ಲಿ ಇನ್ನಿಲ್ಲದಂತೆ ನೆಲ ಕಚ್ಚಿತು. ನಿರ್ದೇಶಕ ಪ್ರೇಮ್ ಅವರನ್ನು ಎರಡೂ ಕೈಗಳಿಂದ ಆಲಂಗಿಸಿದಂತೆ ಹ್ಯಾಪೆ ಮುಖದ ಹೀರೋ ಪ್ರೇಮ್‌ನನ್ನು ಪ್ರೇಕ್ಷಕ ಮಹಾಪ್ರಭು ಸ್ವೀಕರಿಸಲಿಲ್ಲ. ಅಷ್ಟೇ ಅಲ್ಲ, ಈ ಸೋಲಿನಿಂದ ನಿರ್ದೇಶಕ ಪ್ರೇಂ ಮತ್ತು ಹೀರೋ ಪ್ರೇಂ ಇಬ್ಬರ ಮಾರುಕಟ್ಟೆ ಒಮ್ಮೆಗೆ ಢಮಾರ್ ಎಂದಿತು.

ಇಷ್ಟೆಲ್ಲದರ ಮಧ್ಯೆ ಪ್ರೇಮ್ ಸುದ್ದಿ ಮಾಡಿದ್ದು ತನ್ನ ಪ್ರಣಯಗೀತೆ ಮುಖಾಂತರ. ಆಗಿನ ನಂ.1 ನಾಯಕಿ ರಕ್ಷಿತಾ ಜತೆಗೆ ಪ್ರೇಮ್‌ನ ಪ್ರಣಯದಾಟವು ಪತ್ರಿಕೆಗಳ ಗಾಸಿಪ್ ಕಾಲಂಗಳಲ್ಲಿ ವಿಜೃಂಭಿಸಲಾರಂಭಿಸಿತು. ಆರಂಭದಲ್ಲಿ ಈ ಸುದ್ದಿಯನ್ನು ಯಾರೂ ನಂಬಲೇ ಇಲ್ಲ, ಮಂಡ್ಯದ ಈ ಹಳ್ಳಿ ಹೈದ ಪ್ರೇಮ್‌ನನ್ನು ಮುಂಬೈಯಲ್ಲಿ ಬೆಳೆದ ಕಾನ್ವೆಂಟ್ ಹುಡುಗಿ ರಕ್ಷಿತಾ ಮದುವೆಯಾಗುವುದುಂಟೆ ಎಂದು ಜನ ನಕ್ಕಿದ್ದರು. ಆದರೂ ಎಲ್ಲರ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡಿದ ಪ್ರೇಮ್ ರಕ್ಷಿತಾಳನ್ನು ಮದುವೆಯಾದರು. ಅಷ್ಟೇಅಲ್ಲ, ತಮ್ಮ ಮದುವೆ ಕಾರ್ಯಕ್ರಮವನ್ನು ಒಂದು ಟಿವಿ ಚಾನೆಲ್ ನೇರ ಪ್ರಸಾರ ಮಾಡುವಂತೆ ನೋಡಿಕೊಂಡ ಪ್ರೇಮ್ ಆಹ್ವಾನ ಪ್ರತಿಗಳನ್ನು ಕಳ್ಳೆಪುರಿಯಂತೆ ಹಂಚಿ ತಮ್ಮ ಮದುವೆಯನ್ನೂ ಜಾತ್ರೆಯಂತೆ ಆಚರಿಸುವ ಮೂಲಕ ಮತ್ತಷ್ಟು ಸುದ್ದಿ ಮಾಡಿ ತಾವು ಎಲ್ಲದರಲ್ಲೂ ಗಿಮಿಕ್ ರಾಜ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದರು.

ಇದಾದ ನಂತರ ಕಳೆದುಹೋದ ತನ್ನ ತಾರಾಮೌಲ್ಯವನ್ನು ಮತ್ತೆ ಪಡೆಯಲು ಪ್ರೇಮ್ 'ರಾಜ್' ಎಂಬ ಚಿತ್ರ ನಿರ್ದೇಶಿಸಿದರು. ಪುನೀತ್ ರಾಜ್‌ಕುಮಾರ್ ನಾಯಕನಾಗಿದ್ದ 'ರಾಜ್' ಚಿತ್ರಕ್ಕಾಗಿಯೂ ಮತ್ತದೇ ಗಿಮಿಕ್ಕು ಇತ್ಯಾದಿಗಳನ್ನು ಮಾಡಿದರೂ, ರಾಜ್‌ಕುಮಾರ್-ಪಾರ್ವತಮ್ಮ ಅವರ ದಾಂಪತ್ಯವನ್ನೇ ಆಧರಿಸಿ 'ಹಾರೋ' ಎಂಬ ಹಾಡನ್ನು ರಚಿಸಿದ್ದರೂ 'ರಾಜ್' ಚಿತ್ರ ಬಾಕ್ಸಾಫೀಸಿನಲ್ಲಿ ನಿರೀಕ್ಷಿಸಿದಷ್ಟು ಯಶಸ್ಸನ್ನು ಕಾಣಲಿಲ್ಲ.

ಈಗಾಗಲೇ ಮೂರು ಹಿಟ್ ಮತ್ತು ಎರಡು ಫ್ಲಾಪ್ ಚಿತ್ರಗಳನ್ನು ನೀಡಿರುವ ಪ್ರೇಮ್‌ಗೆ ಈಗ ಅಗ್ನಿಪರೀಕ್ಷೆಯ ಕಾಲ. ಇಂತಹ ಸಂಕಷ್ಟದ ಸಂದರ್ಭದಲ್ಲೇ ಪ್ರೇಮ್ ಧೈರ್ಯವಮಾಡಿ ಸ್ವಂತ ನಿರ್ಮಾಣಕ್ಕೆ ಕೈಹಾಕಿ ಶಿವರಾಜ್‌ಕುಮಾರ್ ಅವರ ನೂರನೇ ಚಿತ್ರವಾದ 'ಜೋಗಯ್ಯ'ನನ್ನು ತೆರೆಗೆ ತಂದಿದ್ದಾರೆ.

ಪ್ರೇಮ್ ಅವರ ವೃತ್ತಿಬದುಕಿನ ಅಳಿವು-ಉಳಿವನ್ನು 'ಜೋಗಯ್ಯ' ನಿರ್ಧರಿಸಲಿದ್ದಾನೆ!



ಮಾತು ಮರೆತ ಸರ್ಕಾರ

ಪೋಸ್ಕೊ ಪೀಡೆ ಮತ್ತೆ ವಕ್ಕರಿಸಿತು!

ಈ ಶನಿ ಸರ್ಕಾರ ಸಮಾಧಿ ಸೇರಿದರೂ ರೈತನನ್ನು ನೆಮ್ಮದಿಯಿಂದ ಬದುಕಲು ಬಿಡುವುದಿಲ್ಲ ಎಂದು ಪ್ರಮಾಣ ಮಾಡಿದಂತಿದೆ. ಬಂಡವಾಳಶಾಹಿಗಳ ಎಂಜಲು ಕಾಸಿನ ಆಸೆಗಾಗಿ ಬಲವಂತವಾಗಿ ರೈತರಿಂದ ಜಮೀನು ಕಿತ್ತುಕೊಂಡು ಕಾರ್ಖಾನೆ ಸ್ಥಾಪಿಸಲು ಹೊರಟಿದ್ದ ಸರ್ಕಾರಕ್ಕೆ ಸರಿಯಾಗಿ ಗುದಮುರಗಿ ಬಿದ್ದಿತ್ತು, ಗದಗ ಜಿಲ್ಲೆಯ ರೈತ ಸಮೂಹ, ಪ್ರಗತಿಪರ ಸಂಘಟನೆಗಳು ಸೇರಿದಂತೆ ಹತ್ತಾರು ಜನಪರ ಸಂಘ ಸಂಸ್ಥೆಗಳ ಬೆಂಬಲದೊಂದಿಗೆ ತೋಂಟದ ಸಿದ್ದಲಿಂಗ ಸ್ವಾಮಿಗಳ ನೇತೃತ್ವದಲ್ಲಿ ಪ್ರಬಲ ಹೋರಾಟ ನಡೆದು ಸರ್ಕಾರದ ತಳ ಅಲ್ಲಾಡಿತ್ತು. ಯಡಿಯೂರಪ್ಪ ಅನ್ನದಾತನ ಆಕ್ರೋಶಕ್ಕೆ ಹೆದರಿ ಪೋಸ್ಕೊ ಕಾರ್ಖಾನೆ ಸ್ಥಾಪನೆ ಮಾಡುವುದಿಲ್ಲ ಎಂದು ಜಿಲ್ಲಾಧಿಕಾರಿ ಮೂಲಕ ಲಿಖಿತ ಭರವಸೆ ನೀಡಿದ್ದ. ಇದರಿಂದ ಇಲ್ಲಿಯ ರೈತರು ತಮ್ಮ ಹೋರಾಟಕ್ಕೆ ಜಯ ದಕ್ಕಿತು ಎಂದು ವಿಜಯೋತ್ಸವ ಆಚರಿಸಿದ್ದರು. ಆದರೀಗ ಕಳ್ಳನಾಗಿ ಮನೆ ಸೇರಿರುವ ಯಡ್ಡಿ ಸದ್ದಿಲ್ಲದೇ ಕೈಗಾರಿಕಾ ಮಂತ್ರಿ ನಿರಾಣಿ ಮೂಲಕ ಪೋಸ್ಕೊ ಸ್ಥಾಪನೆಗೆ ಎಲ್ಲ ತಯಾರಿಯನ್ನು ಮಾಡಿ ಮುಗಿಸಿದ್ದಾನೆ.




ಜಿಲ್ಲಾ ಮಂತ್ರಿ ಸಿ.ಸಿ.ಪಾಟೀಲ ಸೇರಿದಂತೆ ಜಿಲ್ಲೆಯ ಎಲ್ಲಾ ಚೆಡ್ಡಿ ಶಾಸಕರು ಪೋಸ್ಕೊ ಹಾಕಿದ ಬಿಸ್ಕೆಟಿನ ಋಣಕ್ಕಾಗಿ ಓಟು ಹಾಕಿದ ಅನ್ನದಾತನಿಗೆ ಹಾಡುಹಗಲೇ ಬೆನ್ನಿಗೆ ಚೂರಿ ಹಾಕಲು ಸಜ್ಜಾಗಿ ನಿಂತಿದ್ದಾರೆ. ಈ ಹಿಂದೆ ಕೊಟ್ಟ ಮಾತು ರೈತರು ಮತ್ತು ಮಠಾಧೀಶರನ್ನು ಯಾಮಾರಿಸಲು ಇವರು ಹೂಡಿದ ತಂತ್ರ ಎಂಬುದು ಈಗ ಬೆತ್ತಲಾಗಿದೆ.

ನಿರಾಣಿಯ ನರಿ ಬುದ್ಧಿ

ಯಡ್ಡಿಯ ಚೇಲಾ ಮಂತ್ರಿ ಮುರುಗೇಶ ನಿರಾಣಿ ಈ ತಿಂಗಳು 23ಕ್ಕೆ ಪೋಸ್ಕೊ ಸ್ಥಾಪನೆ ಬಗ್ಗೆ ಅಂತಿಮ ನಿರ್ಧಾರ ಆಗಲಿದೆ ಎಂದು ನರಿಬುದ್ಧಿಯನ್ನು ಪ್ರದರ್ಶಿಸಿದ್ದಾನೆ.

ಜಿಲ್ಲಾ ಮಂತ್ರಿ ಸಿ.ಸಿ. ಪಾಟೀಲನ ಮೂಲಕ ಬೇನಾಮಿ ಹೆಸರಲ್ಲಿ 300ಕ್ಕೂ ಹೆಚ್ಚು ಎಕರೆ ಭೂಮಿ ಖರೀದಿಸಿರುವ ನಿರಾಣಿ ಮತ್ತವನ ಇಂಡಸ್ಟ್ರಿಯಲ್ ಸ್ನೇಹಿತರು ಈಗಾಗಲೇ ರೈತರಿಂದ ಖರೀದಿ ಕರಾರುಪತ್ರ ಬರೆಸಿಕೊಂಡು ಪೋಸ್ಕೊಗೆ ನೀಡಲು ತಯಾರಾಗಿದ್ದಾರೆ. ಇದರ ಜೊತೆಗೆ ಮುಂಡರಗಿಯ ಸೋಮಶೇಖರ ಚೆನ್ನಳ್ಳಿಯ ರಿಯಲ್ ಎಸ್ಟೇಟ್ ಮಾಫಿಯಾದಲ್ಲಿ ಚೆಡ್ಡಿ ರೈತರುಗಳಾದ ಚನ್ನವೀರಪ್ಪ ಅಂಗಡಿ, ಆಡಿವೆಪ್ಪ ಬಳಗನೂರ, ಶಂಕ್ರಪ್ಪ ಬೇವೂರ, ಬಸವರಾಜ ಕರಮಡಿ, ಶೇಖರಪ್ಪ ಅಬ್ಬಿಗೆರೆ, ಮುತ್ತಪ್ಪ ಕರಮಡಿ, ಚನ್ನಪ್ಪ ಪುರದ, ರಾಜೂ ಸಜ್ಜನ, ಡಿ.ಎಂ. ಚೆನ್ನಳ್ಳಿ, ಜಂತ್ಲಿ ಶಿರೂರ ಗ್ರಾಮದ ಚನ್ನಬಸಪ್ಪ ಚವರರೆಡ್ಡಿ, ಎಲ್ಲಪ್ಪ ರಾಮೇನಹಳ್ಳಿ, ಗೂರಪ್ಪ ಪಲ್ಲ?ದ ಯಲ್ಲಪ್ಪ ಮುದಿಗೊಂಡ, ಮಲ್ಲಪ್ಪ ಮುದಿಗೆಣ್ಣವರ ಎಂಬ ಮಂತ್ರಿ ಸಿ.ಸಿ. ಪಾಟೀಲ ಮತ್ತು ಶಾಸಕ ಕಳಕಪ್ಪ ಬಂಡಿಯ ಖಾಸಾ ಬಂಟರು ಈ ಭಾಗದಲ್ಲಿ ನೂರಾರು ಎಕರೆ ಜಮೀನನ್ನು ಖರೀದಿಸಿ ಕೈಗಾರಿಕೆಗೆ ನೀಡಲು ರೆಡಿಯಾಗಿ ನಿಂತಿದ್ದಾರೆ. ಇವರೆಲ್ಲಾ ಈ ಭೂಮಿ ಖರೀದಿಸಿದ್ದು ಪೋಸ್ಕೊ ಸ್ಥಾಪನೆಯ ವಿಷಯ ಹೊರಬೀಳುವುದಕ್ಕೂ ಮೊದಲು. ಸದ್ಯ ಇವರೆಲ್ಲಾ ಭೂಮಿ ನೀಡಲು ನಿರಾಕರಿಸಿದ್ದ ರೈತರ ಮೈಂಡ್ ವಾಶ್ ಮಾಡುವ ಕೆಲಸದಲ್ಲಿ ಬಿಸಿಯಾಗಿದ್ದಾರೆ. ಹತ್ತಾರು ಸುಳ್ಳು ಭರವಸೆಗಳನ್ನು ನೀಡಿ ರೈತರಿಂದ ಖಾಲಿ ಬಾಂಡ್ ಮೇಲೆ ಹಾಗೂ ಅಫಿಡವಿಟ್ ಮಾಡಿದ ಒಪ್ಪಿಗೆ ಪತ್ರದ ಮೇಲೆ ಸಹಿ ಪಡೆಯುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ 45%ರಷ್ಟು ರೈತರು ನಿರಾಣಿಯ ಈ ನರಿ ಬುದ್ಧಿಗೆ ಬಲಿಯಾಗಿದ್ದಾರೆ!







ನಿರಾಣಿ ಎಲ್ಲ ತಯಾರಿ ಮಾಡಿಕೊಂಡೇ ಫೀ ಇಳಿದಿದ್ದಾನೆ ಎಂಬುದಕ್ಕೆ ಮೊನ್ನೆ ಬಾಗಲಕೋಟೆಯಲ್ಲಿ ಪೋಸ್ಕೊ ಸ್ಥಾಪನೆ ಮಾಡೇ ತೀರುತ್ತೇನೆ ಎಂ ನೀಡಿದ ಹೇಳಿಕೆಯೇ ಸಾಕ್ಷಿ. ಈ ಸಂದರ್ಭದಲ್ಲಾತ ಪೋಸ್ಕೊ ಪ್ರೈ. ಮಹಾ ವ್ಯವಸ್ಥಾಪಕ ಇದೇ 23ರಂದ ಬೆಂಗಳೂರಿಗೆ ಬರಲಿದ್ದು, ಅವನನ್ನು ಗದುಗಿನ ತೋಂಟದಾರ್ಯ ಸ್ವಾಮಿ ಮನವೊಲಿಕೆಗೆ ಛೂ ಬಿಡುವ ಸಂಚ ರೂಪಿಸಿರುವುದನ್ನು ಬಾಯಿ ಬಿಟ್ಟಿದಾ 80% ರಷ್ಟು ರೈತರು ಬಾಂಡ್ ಮೂಲಕ ಒಪ್ಪಿಗೆ ನೀಡಿದ್ದಾರೆ ಎಂದು ಹೇಳಿಕೊಂಡ ತಿರುಗಾಡುತ್ತಿರುವ ನಿರಾಣಿ ರೈತರಲ್ಲಿ ಒಡಕು ಹುಟ ಅನಿವಾರ್ಯವಾಗಿ ಭೂಮಿ ಹಸ್ತಾಂತರಿಸುವ ವಾತಾವರಣ ನಿರ್ಮಾಣ ಮಾಡುವ ಸಂಚನ್ನು ಸ್ಥಳೀಯ ಚೆಡ್ಡಿಗಳಿಂದ ಮಾಡಿಸುತ್ತಿದ್ದಾನೆ.

ಹೆದರಿದ್ದೇಕೆ?

ಉತ್ತರ ಕರ್ನಾಟಕ ಭಾ ಲಿಂಗಾಯತರ ಬಲದಿಂದ ಅಧಿಕಾ ಬಂದಿರುವ ಬಿ.ಜೆ.ಪಿ ಸರ್ಕಾರ ಪೋ ಕಂಪನಿ ಸ್ಥಾಪನೆಗೆ ವಕಾಲತ್ತು ವಹಿ ಹೋಗಿ ಆ ಜನಾಂಗದ ವಿರೋ ಕಟ್ಟಿಕೊಳ್ಳುವಂತಾಗಿತ್ತು. ಡಾ|| ಸಿದ್ದ ಸ್ವಾಮಿಗಳ ನೇತೃತ್ವದಲ್ಲಿ ನಡೆದ ಪೋ ವಿರೋಧಿ ಹೋರಾಟಕ್ಕೆ ರಾಜ್ಯದ ವಿವಿಧ ಭಾಗಗಳ 65 ಹೆಚ್ಚು ಮಠಾಧೀಶರು ಸರ್ಕಾರದ ವಿರುದ್ಧ ನಿಂತಿದ್ದ ಲಿಂಗಾಯತ ಮುಖ್ಯಮಂತ್ರಿ ಎ ಬೀಗುತ್ತಿದ್ದ ಭಂಡ ಯಡ್ಡಿಯ ತಳ ಬುಡ ಅದುರಿ ಹೋಗಿತ್ತು. ಜುಲೈ 13ರ ದೆಹಲಿಯಿಂದಲೇ ಜಿಲ್ಲಾಧಿಕಾರಿಗ ಫೋನ್ ಮಾಡಿ ಪೋಸ್ಕೊ ಸ್ಥಾಪನೆಯಿ ಸರ್ಕಾರ ಹಿಂದೆ ಸರಿಯಲು ಹೇಳಿದ್ದ ವಿಚಾರವನ್ನು ತೋಂಟದಾರ್ಯ ಸ್ವಾಮಿಗ ತಿಳಿಸಿ ಹೋರಾಟದಿಂದ ಹಿ ಸರಿಯುವಂತೆ ವಿನಂತಿಸಿಕೊಳ್ ಸೂಚಿಸಿದ್ದ ಆದರೆ ಈ ಬಗ್ಗೆ ಲಿಖಿತ ಆ ಬರುವವರೆಗೂ ಹೋರಾಟ ಕೈಬಿ


ಮಲೆ ಮಹದೇಶ್ವರ ಬೆಟ್ಟ

ಜಯವಿಭವನ ವಿಕಟಾಟ್ಟಹಾಸ




ಮಲೈ ಮಹದೇಶ್ವರನ ಸನ್ನಿಧಿಯಲ್ಲಿ ಪಾಪದ ನೌಕರರಿಗೆ, ವ್ಯಾಪಾರವನ್ನೇ ನೆಚ್ಚಿಕೊಂಡಿರುವ ಬಡಬಗ್ಗರಿಗೆ ನೆಮ್ಮದಿಯೆಂಬುದು ಮರೀಚಿಕೆಯಾಗಿದೆ. ಆಡಳಿತ ಮಂಡಳಿಯ ಅಂದಾದುಂದಿ, ಅಧಿಕಾರಿಗಳಾಗಿ ಬಂದವರ ದುಷ್ಟತನ ಇಲ್ಲಿಯವರ ಪಾಲಿಗೆ ಹೊಸದಲ್ಲ, ಆದರೀಗ ಅದೆಲ್ಲವನ್ನೂ ಮೀರಿಸುವ ಗುಣಲಕ್ಷಣ ಹೊಂದಿರುವ ಗಡವನೊಬ್ಬ ವಿಶೇಷ ಆಡಳಿತಾಧಿಕಾರಿಯಾಗಿ ವಕ್ಕರಿಸಿಕೊಂಡಿದ್ದಾನೆ. ಆತ ಜಯವಿಭವ ಸ್ವಾಮಿ!

ಹಾಲಿ ಇ.ಓ. ಆಗಿರುವ ಎ. ವಿಜಯಾಳ ಕಸರತ್ತುಗಳಿಂದಾಗಿ ಮಹದೇಶ್ವರ ಬೆಟ್ಟ ಬ್ರಾಹ್ಮಣ್ಯದ ಅಜೆಂಡಾಗಳಿಗೆ ತುತ್ತಾಗುತ್ತಿದೆ. ಜೊತೆಗೆ ಈಕೆಯ ನೆರಳಲ್ಲಿಯೇ ಹಲವಾರು ಅಕ್ರಮಗಳೂ ನಡೆಯುತ್ತಿವೆ. ಈ ಬಗ್ಗೆ 'ಪತ್ರಿಕೆ' ಹಲವಾರು ಬಾರಿ ವರದಿ ಪ್ರಕಟಿಸಿ ಎಚ್ಚರಿಸಿತ್ತು, ಆದರೂ ಸಹ ವಿಜಯಾಳ ಸರ್ವಾಧಿಕಾರಿ ಧೋರಣೆಯಾಗಲಿ, ಅಪರಾತಪರಾಗಳಾಗಲಿ ಕಡಿಮೆಯಾಗಿರಲಿಲ್ಲ, ಈ ಬಗ್ಗೆ ಬೆಟ್ಟದ ನಿಷ್ಠ ಭಕ್ತರು ಎಡೆಬಿಡದೆ ದೂರುಗಳನ್ನು ನೀಡಿದ್ದರಿಂದ ಮುಜರಾಯಿ ಇಲಾಖೆ ಭಯಂಕರ ಕುತಂತ್ರವೊಂದನ್ನು ನಡೆಸಿದೆ. ಆದರನ್ವಯ ಏಕಾಏಕಿ ವಿಶೇಷ ಅಧಿಕಾರಿ ಅಂತೊಂದು ಸ್ಥಾನ ರಚಿಸಿ ಅದಕ್ಕೆ ಜಯವಿಭವನೆಂಬ ವಂಚಕನನ್ನು ತಂದು ಕೂರಿಸಲಾಗಿದೆ.




ಜಯವಿಭವ ಸ್ವಾಮಿಯ ಜಾತಕ ಜಾಲಾಡಲು ನಿಂತರಂತೂ ರಾಜಕೀಯ ಪಿತೂರಿಗಳ ಸರಮಾಲೆಯೇ ಗೋಚರಿಸುತ್ತದೆ. ಈತ ಮೂಲತಃ ಮಿಲಿಟರಿ ಮ್ಯಾನ್. ತದನಂತರ ಕೆಎಎಸ್ ಮುಗಿಸಿ ಬೆಂಗಳೂರಿನ ಸುತ್ತ ಭೂಸ್ವಾಧೀನಾಧಿಕಾರಿಯಾಗಿ 'ಸೇವೆ' ಸಲ್ಲಿಸಿದ್ದ ಜಯವಿಭವ ವಿ.ಸೋಮಣ್ಣನ ಮನೆಯಾಳಿನಂತೆ ಅತ್ಯಂತ ನಿಷ್ಠನಾಗಿದ್ದ. ಈ ಮೂಲಕ ದೈವಭಕ್ತ ಯಡಿಯೂರಪ್ಪನೂ ಪರಿಚಯವಾಗಿದ್ದ. ಈ ಬಲದಿಂದಲೇ ಸದರಿ ಶನಿ ಮಹದೇಶ್ವರ ಬೆಟ್ಟಕ್ಕೆ ಅಮರಿಕೊಂಡಿದೆ.

ಏನೇನೋ ಮಸಲತ್ತುಗಳಿಂದ 'ಬೆಟ್ಟ' ಹತ್ತಿ ಖಡಕ್ ಅಧಿಕಾರಿಯಂತೆ ಪೋಸು ಕೊಡಲಾರಂಭಿಸಿತು. ಬೆಟ್ಟದಲ್ಲಿ ನಡೆಯುತ್ತಿರುವ ಅಂದಾದುಂದಿಯಿಂದ ರೋಸತ್ತಿದ್ದ ಭಕ್ತಗಣದಲ್ಲಿ ಅದೊಂದು ರೀತಿಯ ಆಶಾಭಾವನೆ ಸ್ಫುರಿಸಿತ್ತು, ಇದಕ್ಕೆ ಸರಿಯಾಗಿ ಏಕಾಏಕಿ ಕೆಲ ಅಕ್ರಮಗಳನ್ನು ಮಟ್ಟಹಾಕಿ ಸ್ವಚ್ಛತೆಗೆ ಆದ್ಯತೆ ನೀಡಲಾರಂಭಿಸಿದ ಜಯವಿಭವ, ನೌಕರರಿಗೆ ವಾಕಿಟಾಕಿ, ಭಕ್ತರಿಗಾಗಿ ಮಾಹಿತಿ ಕೇಂದ್ರ, ಕೊಳಗಳ ಹೂಳು ತೆಗೆಸುವುದು ಮುಂತಾದ ಅನೇಕ ಕೆಲಸಗಳನ್ನು ಮಾಡಿದ. ಕೆಲ ಪತ್ರಕರ್ತರು ಅದರ ಹಿಂದಿದ್ದ ಸಂಚು ಅರಿಯದೆ ಜಯವಿಭವನನ್ನು ಹೀರೋನಂತೆ ಬಿಂಬಿಸಿ ಪೇಜು ತುಂಬಿಸಲಾರಂಭಿಸಿದರು.



ಇದೆಲ್ಲದರ ನಡುವೆಯೇ ಬೆಟ್ಟದ ಪರಿಸರದಲ್ಲಿ ಹಲವಾರು ರೀತಿಯ ಭೂತಚೇಷ್ಟೆಗಳು ಶುರುವಾದವು. ದೇವಾಲಯದ ಆವರಣದಲ್ಲಿ ಪೂಜಾ ಸಾಮಗ್ರಿ ಮಾರುವ ನೂರಾರು ಅಂಗಡಿಗಳು ರಾತ್ರೋರಾತ್ರಿ ಸುಟ್ಟು ಭಸ್ಮವಾದವು. ಲಕ್ಷಾಂತರ ರೂ. ನಷ್ಟ ಅನುಭವಿಸಿದ ವ್ಯಾಪಾರಸ್ಥರು ಅಕ್ಷರಶಃ ಬೀದಿಗೆ ಬಿದ್ದರು. ಇವರ ಪಾಡು ನೋಡಲಾಗದ ಸಂಸ್ಥೆಯೊಂದು ಅಂಗಡಿ ನಿರ್ಮಿಸಲು ಸಹಾಯಹಸ್ತ ಚಾಚಿತು. ಆದರೆ ಜಯವಿಭವ ಸ್ವಾಮಿ ಸ್ಥಳಾವಕಾಶ ನೀಡದೆ ದೌಲತ್ತು ತೋರಿಸಿದ. ವ್ಯಾಪಾರಸ್ಥರು ಅದಕ್ಕೂ ಬಗ್ಗದಿದ್ದಾಗ ಪೊಲೀಸ್ ಬಲ ಪ್ರಯೋಗಿಸಿ, ಬಗ್ಗುಬಡಿದ. ಇದಾದದ್ದೇ ವ್ಯಾಪಾರಸ್ಥರಿಗೆಲ್ಲ ರಾತ್ರೋರಾತ್ರಿ ತಮ್ಮ ಅಂಗಡಿಗಳಿಗೆ ಬೆಂಕಿ ಇಟ್ಟ ಕೊಳ್ಳಿ ದೆವ್ವ ಯಾವುದೆಂದು ಖಚಿತವಾಗಿ ಹೋಗಿತ್ತು!




ಜಯವಿಭವಸ್ವಾಮಿ

ಇಲ್ಲಿನ ವ್ಯಾಪಾರಿಗಳೆಲ್ಲ ಬೆಟ್ಟದ ಆವರಣದಲ್ಲಿನ ಪುಟ್ಟ ಮಳಿಗೆಗಳನ್ನೇ ಬದುಕಾಗಿಸಿಕೊಂಡಿರುವವರು. ಬೆಂಕಿಯಿಂದಾಗಿ ಅದೂ ಕೂಡಾ ಕೈತಪ್ಪಿದಂತಾಗಿತ್ತು, ಅವರೆಲ್ಲ ಅನಿವಾರ್ಯವಾಗಿ ಜಿಲ್ಲಾಧಿಕಾರಿಗಳ ಕಡೆಯಿಂದ ಪರಿಹಾರದ ಹಣಕ್ಕಾಗಿ ಎದುರು ನೋಡುತ್ತಿದ್ದರು. ಆದರೆ ಜಯವಿಭವ ಸ್ವಾಮಿ ದೇವಸ್ಥಾನದ ವತಿಯಿಂದಲೇ ಅಂಗಡಿ ಕಟ್ಟಿಸುವುದಾಗಿ ಘೋಷಿಸುವ ಮೂಲಕ ಅದಕ್ಕೂ ಮಣ್ಣುಹಾಕಿದ. ಅದರ ಬೆನ್ನಿಗೇ ಸಣ್ಣಪುಟ್ಟ ಹೋಟೆಲ್‌ಗಳನ್ನು ಎತ್ತಂಗಡಿ ಮಾಡಿಸಿ ಅಕ್ಷರಶಃ ದುಷ್ಟತನ ಪ್ರದರ್ಶಿಸಿದ. ಇದೆಲ್ಲದರಿಂದ ಮಾನವೀಯತೆಯಿಲ್ಲದವನು ಎಂಬ ಅಪಕೀರ್ತಿ ತಗುಲಿಕೊಳ ಸೂಚನೆ ಸಿಗುತ್ತಲೇ ದಿನಕ್ಕೆ ಬಾರಿ ಊಟದ ಜೊತೆಗೆ ಬೆ ಉಪಾಹಾರವನ್ನೂ ದೇವಾಲ ದಲ್ಲೇ ಮಾಡಿ ಅಂತ ಕರೆ ಬಿಟ್ಟ! ಇದರಿಂದಲೇ ಒಂದ ಪ್ರಚಾರವನ್ನು ಗಿಟ್ಟಿಸಿಕೊ ಗಮನಿಸಲೇಬೇಕಾದ ಅಂಶವೆ ಜಯವಿಭವನ ದುಷ್ಟತನದಿಂ ಕನಿಷ್ಠ ನಾನೂರು ಕುಟುಂಬ ಅಕ್ಷರಶಃ ಬೀದಿಪಾಲಾಗಿವೆ.

ಹಾಗಂತ ಬೆಟ್ಟದ ಪರಿಸ ಬೀದಿ ವ್ಯಾಪಾರವೇನೂ ನಿಂ ಅದೆಷ್ಟೋ ವರ್ಷಗಳಿಂದ ಕಸುಬು ನೆಚ್ಚಿಕೊಂಡಿರುವವರನ್ನು ಬೀದಿಪಾಲು ಮಾ ಜಯವಿಭವ ಅಲ್ಲಿಗೆ ಸ್ವಜಾತಿ ಲಿಂಗಾಯತ ವ್ಯಾಪಾರಿಗ ತಂದು ಕೂರಿಸಲಾರಂಭಿಸಿದ. ವಿವಿಧ ಕಾಮಗಾ ಕೆಲಸಕಾರ್ಯಕ್ಕೂ ತನ್ನ ಜಾತಿಯ ಕಾರ್ಮಿಕರಿಗೆ ಆ ನೀಡಲಾರಂಭಿಸಿದ. ಇದು ಜಯವಿಭವನ ಜಾತಿಪ್ರೇ ಕಾಯಿಲೆಗೊಂದು ಸ್ಯಾಂಪಲ್ ಅಷ್ಟೆ.

ಜಯವಿಭವನ ಹಾರಾಟದ ಮುಂದೀಗ ಇ.ಓ.ವಿಜಯಾಳೇ ಥಂಡಾ ಹೊಡೆದಿದ್ದಾಳೆ. ಹಣಕಾ ವ್ಯವಹಾರವೂ ಸೇರಿದಂತೆ ಸಕಲವೂ ಜಯವಿಭವನ ಮುಷ್ಟಿಗೆ ಸಿಲುಕಿ ಬೆಟ್ಟದ ಆಡಳಿತ ವೈಖರಿ ಮತ್ತು ಕುಲಗೆಟ್ಟುಹೋಗಿದೆ. ಈತ ಬಂದ ಹೊಸತರಲ್ಲಿ



ಜುಲೈ 14 ರಂದು ಮಠಾಧೀಶರು ಸಮಾವೇಶ
ಹೋರಾಟಕ್ಕೆ ತೀವ್ರ ಸ್ವರೂಪ ಕೊಟ್ಟಿದ್ದರು. ಇದಾದ
ನವೇ "ಪೋಸ್ಕೊ ಕಂಪನಿಗೆ ಜಮೀನು ನೀಡಲು
ರೈತರು ಒಪ್ಪಿಗೆ ನೀಡಿದರೂ ಕಾರ್ಖಾನೆ
ವುದಿಲ್ಲ" ಎಂದು ಸ್ಪಷ್ಟಪಡಿಸಿದ್ದ ಪತ್ರವನ್ನು ಅಪರ
ಕಾರಿ ಪಿ.ಟಿ ರುದ್ರೇಶ
ತೋಂಟದ ಡಾ||
ಾಗ ಸ್ವಾಮಿಗಳಿಗೆ
ರು.
ನರೆ ಈಗ 80
ರೈತರು ಒಪ್ಪಿಗೆ
ರೆ ಪೋಸ್ಕೊ
ಸರ್ಕಾರ ಸಿದ್ಧ
ಹೇಳುತ್ತಿರುವುದು
ಸರ್ಕಾರ
ಟ್ಟಿರುವುದಕ್ಕೆ
ವರಣೆಯಾಗಿದೆ.
ಲ್ಲಿ ಈ ಪ್ರಸ್ತಾವನೆ
ಟ್ಟಿರುವ ಕುರಿತು ಇದುವರೆಗೂ ಗೆಜೆಟ್
ಫಿಕೇಶನ್ ಸಹ ಹೊರಬಂದಿಲ್ಲ.
ಧೀನ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ
ಬಿಗಾಗಲಿ, ಸಂಬಂಧಿಸಿದ ಇತರೆ ಯಾವುದೇ
ಗಾಗಲಿ ಅಧಿಕೃತ ಆದೇಶ ನೀಡದಿರುವುದು
ಯಾಮಾರಿಸುವ ತಂತ್ರವಲ್ಲದೇ ಇನ್ನೇನು?


ತೋಂಟದಾರ್ಯ ಸ್ವಾಮಿ


ಪೋಸ್ಕೊ ಹೋತು ಭೂಬ್ಯಾಂಕ್ ಬಂತು

ಹೋದ್ಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷೀಲಿ.. ಎಂಬಂತೆ ಹಳ್ಳಿಗುಡಿ ಮತ್ತದರ ಸುತ್ತಲಿನ ಗ್ರಾಮದ ರೈತರಿಗೆ ಭೂ ಬ್ಯಾಂಕ್ ಹೆಸರಿನ ಭೂತ ಬೆನ್ನುಹತ್ತಿದೆ. ಯಡ್ಡಿಯ ಪೋಸ್ಕೊ ಪಲಾಯನದ ನಾಟಕೀಯ ಹೇಳಿಕೆಯಿಂದ ಇಲ್ಲಿಯ ರೈತರು ಕೊಂಚ ನೆಮ್ಮದಿ ಕಂಡು ಜಮೀನು ಉಳಿಯಿತು ಎಂದು ಭಾವಿಸಿದ್ದರು. ಆದರೆ ಅದೇ ಯಡ್ಡಿ ಮತ್ತೊಂದು ಬತ್ತಿ ಇಟ್ಟು ಮನೆಗೆ ಹೋಗಿದ್ದಾನೆ ಎಂಬುದು ಇಲ್ಲಿಯ ಕೃಷಿ ಇಲಾಖೆಯ ಅಧಿಕಾರಿಗಳು ಕೈಯಲ್ಲಿ ಎರಡು ಫೈಲ್ ಹಿಡಿದುಕೊಂಡು ಗ್ರಾಮದ ಜಮೀನುಗಳಲ್ಲಿ ಸರ್ವೆ ಮಾಡಲು ಬಂದಾಗಲೆ ರೈತರಿಗೆ ಅರಿವಾಗಿದೆ. ಕೃಷಿ ಆಧಾರಿತ ಕೈಗಾರಿಕೆಯನ್ನು ಈ ಭಾಗದಲ್ಲಿ ಸ್ಥಾಪಿಸಲು ನಿರ್ಧರಿಸಿ ಅದಕ್ಕೆ ಬೇಕಾಗುವ ಜಮೀನನ್ನು ವಶಪಡಿಸಿಕೊಳ್ಳಲು ಸದ್ದಿಲ್ಲದೇ ಸಿದ್ಧತೆ ನಡೆದಿದೆ. ಈಗಾಗಲೇ ಮುಂಡರಗಿ ತಾಲೂಕಿನ ಜಂತ್ಲಿ-ಶಿರೂರಿನಲ್ಲಿ 1588 ಎಕರೆ, ಪೇಠಾಲೂರಿನಲ್ಲಿ 1502 ಎಕರೆ, ಮೇವುಂಡಿಯಲ್ಲಿ 716 ಎಕರೆ ಪ್ರದೇಶವನ್ನು ಭೂಸ್ವಾಧೀನಕ್ಕೆ ಗುರುತಿಸಲಾಗಿದೆ. ಈ ಹಿಂದೆ ವಾಣಿಜ್ಯ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾಗಿದ್ದ ಸರ್ಕಾರಕ್ಕೆ ಕೆಐಎಡಿಬಿ ಸರ್ವೆ ನಡೆಸಿ ಮಾಹಿತಿ ಕೊಟ್ಟಿತ್ತು. ಈಗ ಕೃಷಿ ಆಧಾರಿತ ಕೈಗಾರಿಕೆ ಸ್ಥಾಪನೆಯ ಹೆಸರಲ್ಲಿ ಕೃಷಿ ಇಲಾಖೆ ಯಾವ ಭೂ ಪ್ರದೇಶ ಯೋಗ್ಯವಾಗಿದೆ ಎಂಬುದನ್ನು ಸರ್ವೆ ಮಾಡಿ ಗುರುತಿಸಲು ಮುಂದಾಗಿದೆ. ಸರ್ಕಾರದ ಕೃಷಿ ಇಲಾಖೆಯ ಅಪರ ಕಾರ್ಯದರ್ಶಿಯ ಆದೇಶದಂತೆ ಗದುಗಿನ ಜಂಟಿ ಕೃಷಿ ನಿರ್ದೇಶಕ ಹಾಗೂ ತೋಟಗಾರಿಕಾ ಉಪ ನಿರ್ದೇಶಕರು ಈ ಎಲ್ಲ ಕೆಲಸ ಮಾಡಿ ಮುಗಿಸಿದ್ದಾರೆ.

ಧಾರ್ಮಿಕ ಮುಖಂಡರು ಮತ್ತು ಭೂಮಿಯನ್ನೇ ನಂಬಿ ಬದುಕುವ ನೇಗಿಲ ಯೋಗಿಯನ್ನು ಕುತಂತ್ರದಿಂದ ಮೋಸಗೊಳಿಸುವ ಚೆಡ್ಡಿ ಸರ್ಕಾರದ ನೀಚ ಬುದ್ಧಿಗೆ ಇನ್ನೊಂದು ಸುತ್ತಿನ ತಪರಾಕಿ ಬೀಳಲಿರುವುದು ಖಚಿತ. ಇವರ ಪ್ರತಿಯೊಂದು ತಂತ್ರಗಳನ್ನು ಗಮನಿಸುತ್ತಿರುವ ಸಾವಿರಾರು ರೈತರು ಮತ್ತೆ ತೋಂಟದಾರ್ಯ ಸ್ವಾಮಿಯವರ ನೇತೃತ್ವದಲ್ಲಿ ಬೀದಿಗಿಳಿಯುವ ಎಲ್ಲ ಲಕ್ಷಣಗಳು ಸ್ಪಷ್ಟಗೊಂಡಿದೆ.

• ಹುರಳಿಕುಪ್ಪಿ ವಿನಯ

ಭಾರತದ ಮಾನ ತೆಗೆಯಲು ಒಬ್ಬ ಎಸ್ಸೆಂ ಕೃಷ್ಣ ಸಾಕು!



ಎಸ್ಸೆಂ ಕೃಷ್ಣಾಗೆ ಆಡಿಯೋ-ವಿಡಿಯೋ ಎರಡೂ ಫೇಲಾಗಿರಬಹುದಾ?

ಎಪ್ಪತ್ತೊಂಭತ್ತು ವರ್ಷದ ಭಾರತದ ವಿದೇಶಾಂಗ ಸಚಿವ ಎಸ್ಸೆಂ ಕೃಷ್ಣಗೆ ಈಗ ಬಾಯಿಬಿಟ್ಟರೆ ಬಣ್ಣಗೇಡು ಎನ್ನುವಂತಾಗಿದೆ. ಮನಮೋಹನ್ ಸಿಂಗ್‌ರ ಕ್ಯಾಬಿನೆಟ್‌ನ ಅತ್ಯಂತ ದಡ್ಡ ಮಂತ್ರಿ ಅಂದರೆ ಅದು ಕನ್ನಡ ಕುವರ ಎಸ್ಸೆಂ ಕೃಷ್ಣಾನೇ ಇರಬಹುದೆನ್ನಲು ಮೊನ್ನೆ ಇನ್ನೊಂದು ಸಾಕ್ಷಿ ಸಿಕ್ಕಿದೆ.

ಲೋಕಸಭಾ ಅಧಿವೇಶನ ನಡೆಯುತ್ತಿದ್ದಾಗ ಸಂಸತ್ ಸದಸ್ಯರೊಬ್ಬರು ಎದ್ದು ನಿಂತು ಪಾಕಿಸ್ತಾನದ ವೈದ್ಯ ಡಾ. ಮೊಹಮ್ಮದ್ ಖಲೀಲ್ ಚಿಸ್ತಿ ಎಂಬುವರನ್ನು ಜೈಲಿಗಟ್ಟಿರುವುದರ ಬಗ್ಗೆ ಪ್ರಸ್ತಾಪಿಸಿ ಆತನಿಗೆ ತುಂಬಾ ವಯಸ್ಸಾಗಿ ಹೋಗಿರುವುದರಿಂದ ಮಾನವೀಯತೆಯ ಆಧಾರದಲ್ಲಿ ಬಿಡುಗಡೆ ಮಾಡುವುದು ಸೂಕ್ತ ಅಲ್ಲವೆ ಎಂದು ಕೇಳಿದ್ದರು.

ಆಗ ಚಕ್ಕಂತ ಎದ್ದು ನಿಂತ ಕೃಷ್ಣ "ಹೌದೌದು. ನೀವು ಹೇಳುವುದು ಸರಿ. ಆತನನ್ನು ಮಾನವೀಯತೆ ಆಧಾರದಲ್ಲಿ ಬಿಡುಗಡೆ ಮಾಡುವಂತೆ ನಾನು ಪಾಕಿಸ್ತಾನ ಸರ್ಕಾರವನ್ನು ಕೇಳುತ್ತೇನೆ" ಎಂದುಬಿಟ್ಟರು. ಅಸಲಿ ಸಂಗತಿ ಏನೆಂದರೆ ಡಾ. ಮಹಮದ್ ಬಂಧಿಯಾಗಿರುವುದು ಪಾಕಿಸ್ತಾನದಲ್ಲಲ್ಲ, ರಾಜಸ್ತಾನದ ಅಜ್ಮೀರ್ ಜೈಲಿನಲ್ಲಿ!

ಎಂತದ್ದೋ ಖಾಸಗಿ ಕೆಲಸದ ಮೇಲೆ ಅಜ್ಮೀರ್‌ಗೆ ಬಂದಿದ್ದ ಮೊಹಮದ್ ಇಲ್ಲಿ ಬೇಡದ ಗಲಾಟೇಲಿ ಸಿಲುಕಿ ಜೈಲು ಪಾಲಾಗಿದ್ದಾನೆ. ಆತನಿಗೆ ತೀರಾ ವೃದ್ಧಾಪ್ಯ ಈಗ. ಸಾಮಾನ್ಯವಾಗಿ ವಿದೇಶಿ ಪ್ರಜೆಗಳು ಇಂತಾ ಕೇಸ್ ಮಾಡಿಕೊಂಡಾಗ ಉಭಯ ದೇಶಗಳ ರಾಯಭಾರ ಕಛೇರಿಗಳಿಗೆ ತಕ್ಷಣ ಮಾಹಿತಿ ತಲುಪುತ್ತವೆ. ತೀರಾ ಮುಖ್ಯ ಸಂಗತಿಯಾದರೆ ಆಯಾ ದೇಶಗಳ ವಿದೇಶಾಂಗ ಸಚಿವರಿಗೂ ವಿಚಾರ ತಿಳಿದಿರುತ್ತದೆ. ಆದರೆ ಮೊದ್ಮಣಿ ಕೃಷ್ಣಾಗೆ ಇದ್ಯಾವುದೂ ಗೊತ್ತಿರಲಿಲ್ಲ. ಗೊತ್ತಿರದಿದ್ದರೆ ಹಾಳಾಗಲಿ, ವಿಚಾರಿಸಿ ನಂತರ ಹೇಳಿಕೆ ನೀಡುತ್ತೇನೆ ಅಂತಲಾದರೂ ಹೇಳಬಹುದಿತ್ತು, ಅದು ಬಿಟ್ಟು ಅಸಂಬದ್ಧ ಉತ್ತರ ನೀಡಿ ಮುಖಭಂಗ ಮಾಡಿಕೊಂಡಿದ್ದಾರೆ ಕೃಷ್ಣ.

ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಇಂಗ್ಲಿಷ್ ಪತ್ರಕರ್ತರನ್ನು ಚೆನ್ನಾಗಿ ಮೇಯಿಸಿ ಹೊಗಳಿಸಿಕೊಂಡು ಕಾಲಕಳೆದ ಕೃಷ್ಣಾರ ಅಸಲಿ ಅಯೋಗ್ಯತೆ ದೆಹಲಿಯಲ್ಲಿ ಬಟಾಬಯಲಾಗುತ್ತಿದೆ. ವಿದೇಶಾಂಗ ಸಚಿವನಾದ ಹೊಸದರಲ್ಲಿ ಬಂಗಲೆ ಸಿಗುವುದು ತಡವಾಯಿತೆಂದು ಫೈವ್ ಸ್ಟಾರ್ ಹೋಟೆಲ್‌ನಲ್ಲಿ ತಿಂಗಳುಗಟ್ಟಲೆ ವಾಸವಿದ್ದರು ಕೃಷ್ಣ. ಅದರ ದಿನದ ಬಾಡಿಗೆಯೇ ಲಕ್ಷಾಂತರ ರೂಪಾಯಿ ಇತ್ತು. ಕೊನೆಗೆ ಇದು ಪ್ರಧಾನಿ ಮನಮೋಹನ್ ಸಿಂಗ್‌ಗೂ ಗೊತ್ತಾಗಿ ಗದರಿಸಿದ ಮೇಲೆಯೇ ಕೃಷ್ಣ ಸ್ಟಾರ್ ಹೋಟೆಲ್‌ನಿಂದ ಆಚೆ ಬಂದದ್ದು. ಕಳೆದ ಫೆಬ್ರವರಿಯಲ್ಲಿ ವಿಶ್ವಸಂಸ್ಥೆಯ ಸಭೆಯೊಂದರಲ್ಲಿ ಪೋರ್ಚುಗಲ್ ವಿದೇಶಾಂಗ ಸಚಿವನ ಲಿಖಿತ ಭಾಷಣದ ಪ್ರತಿ ಕೈಲಿಡಿದು ಓದಿದ್ದೇ ಓದಿದ್ದು.

ಈತ ಶತದಡ್ಡ ಎನ್ನುವುದು ಆವತ್ತು ಇಡೀ ಜಗತ್ತಿಗೇ ಗೊತ್ತಾಯಿತು.

ಟೆನ್ನಿಸ್ ಶೋಕಿ, ಸೂಟುಬೂಟಿನ ಖಯಾಲಿ ಬಿಟ್ಟರೆ ವಿದೇಶಾಂಗ ಮಂತ್ರಿಯಾಗಿ ಕೃಷ್ಣ ಇಂತಹ ಯಡವಟ್ಟುಗಳನ್ನು ಪದೇಪದೇ ಮಾಡಿಕೊಳ್ಳುತ್ತಿದ್ದಾರೆ. ಈ ಪ್ರತಿಭೆಗೆ ಮುಂದೊಂದು ದಿನ ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷನಾಗಿ ತಾನೇ ಮತ್ತೆ ಮುಖ್ಯಮಂತ್ರಿಯಾಗಬೇಕೆಂಬ ದುರಾಸೆಯೂ ಇದೆ. ಇನ್ನೊಂದು ವಿಚಾರ ಏನೆಂದರೆ ಕೃಷ್ಣಾಗೆ ಕಿವಿ ಸರಿಯಾಗಿ ಕೇಳಿಸುತ್ತಿಲ್ಲ. ಹಾಗಾಗಿ ಅವರ ಒಂದು ಕಿವಿ ರಾಘವೇಂದ್ರ ಶಾಸ್ತ್ರಿ ಕೈಲೂ ಇನ್ನೊಂದು ಕಿವಿ ಅಳಿಯ ಸಿದ್ಧಾರ್ಥನ ಕೈಲೂ ಇದೆ. ಕೃಷ್ಣಾ ಯಾವುದೇ ದೇಶಕ್ಕೆ ಹೋದರೂ ಅಳಿಯನ ಬ್ಯುಸಿನೆಸ್ ಬೆಳೆಸುವ ಲಿಂಕ್ ಹುಡುಕುತ್ತಾರೆಂಬ ಸುದ್ದಿ ಇದೆ. ಇನ್ನು ಕೃಷ್ಣರ ಬಾಯಿಯ ರಿಮೋಟ್ ಅಮೆರಿಕಾದವರ ಕೈಲಿದೆ.

ಹೀಗಾದಾಗಲೇ ಸಂಸತ್ ಅಧಿವೇಶನದಲ್ಲೇ ಪೆದ್ದು ಹೇಳಿಕೆ ನೀಡಿ ನಗೆಪಾಟಲಿಗೀಡಾಗುವ ಸನ್ನಿವೇಶ ಉಂಟಾಗುವುದು. ಪುಣ್ಯಕ್ಕೆ ಆವತ್ತು ಅಲ್ಲೇ ಇದ್ದ ಪ್ರಧಾನಿ ಸಿಂಗ್ ಮಧ್ಯೆ ಪ್ರವೇಶಿಸಿ ಡಾ. ಮೊಹಮದ್‌ರ ಬಗ್ಗೆ ಸರಿಯಾಗಿ ಮಾತನಾಡಿ ಕೃಷ್ಣರ ಅಲ್ಲಲ್ಲ ದೇಶದ ಮರ್ಯಾದೆ ಉಳಿಸಿದರು.

ಸ್ಕೋ

ಷ್ಟಿ ಬದಲಾವಣೆಯ
ನನಂತೆ ಪೋಸು
ನನಲ್ಲಾ? ಅದೆಲ್ಲದರ
ಮೂ ಅಕ್ರಮದ ವಾಸನೆ
ಮುಲಾರಂಭಿಸಿದೆ. ಕೊಳಗಳ
ಸ್ತಾವ ಪ್ರಕ್ರಿಯೆಯಲ್ಲಂತೂ
ಅಂದಾದುಂದಿ
ಹೋಗಿದೆ. ಇದಕ್ಕೆ
ದೇ ಟೆಂಡರ್ ಕರೆಯದೆ
ರ್ಗದ ಕಳ್ಳಕಾಕರಿಂದ
ಮಾಡಿಸಿ ಕಾಸು
ಮಲಾಗಿದೆ. ಇನ್ನು
ನದ ದುಡ್ಡು
ಯುತ್ತಲೇ. ಜಯವಿಭವನ
ಗಳೂ ಮೇರೆ ಮೀರಿವೆ.
ಉಳಿದುಕೊಂಡಿರುವ ಗಿರಿದರ್ಶಿನಿ ವಸತಿ
ನ್ಥೆಯ ಹೇಳಿಕೇಳಿ ನಂ.ಒನ್. ಅದನ್ನೂ
ಇನ್ನಷ್ಟು ಐಷಾರಾಮಿಯಾಗಿ
ಕೊಂಡಿದ್ದಾನೆ. ಈ ಘನಕಾರ್ಯಕ್ಕೆ
ಾದದ್ದು ಬೆಟ್ಟದ ಹುಂಡಿ ಕಾಸು. ಈತನಿಗೆ
ಲೊಂದು ಕಾರಿನ ವ್ಯವಸ್ಥೆಯನ್ನೂ
ಾಗಿದೆ. ಆದರೀಗ ದೇವಸ್ಥಾನದ
ಂದಲೇ 16 ಲಕ್ಷದ
ಟ್ ಕಾರ್ ಅನ್ನೂ ಬುಕ್
ಿದ್ದಾನೆ. ಭಕ್ತರನ್ನು ಅತಿಯಾಗಿ
ಾಯಿಸುವ ಮುಡಿಸೇವೆ,
ಬಿಡುವ ಜಾಗ,
ಯುಗಳ ಟೆಂಡರ್‌ಗಳಲ್ಲೂ
ಗುಂಜಿಕೊಂಡಿದ್ದಾನೆಂಬ
ಪಗಳಿವೆ.
ದೇವಸ್ಥಾನದ ವತಿಯಿಂದ
ರು ವ್ಯವಹಾರಗಳು
ುತ್ತವೆ. ಅದರಲ್ಲಿ ಸಾರಿಗೆ
ವೂ ಒಂದು. ಇದರ ವತಿಯಿಂದ ಈವರೆಗೆ
ಸ್ ಖರೀದಿಸಲಾಗಿದೆ. ಅವುಗಳ ಮೇಲಿನ
ಗಳೆಲ್ಲಾ ಮುಕ್ತಾಯಗೊಂಡು 60 ಲಕ್ಷದಷ್ಟು
ಿದೆ. ಆದರೆ ಜಯವಿಭವ ಎಲ್ಲವನ್ನೂ ಜಾತಿ


ವಿ.ವಿಜಯ

ಆಧಾರದಲ್ಲೇ ನೋಡುವಾತ. ಇದೇ ಸಂಚಿನ ಮೂಲಕ ಸಾರಿಗೆ ವಿಭಾಗವನ್ನು ಕಟ್ಟಿ ಬೆಳೆಸಲು ಶ್ರಮಿಸಿದ ನೌಕರರನೇಕರನ್ನು ಬೀದಿಪಾಲಾಗಿಸಿ ದುಷ್ಟತನ ಮೆರೆದಿದ್ದಾನೆ. ಉಳಿದವರಿಗೆ ಊಟ-ತಿಂಡಿಗೆ ಸರಿಯಾಗಿ ಹಣ ಕೊಡದೆ ಕಾಡಿಸುತ್ತಿದ್ದಾನೆ. ಅಪಘಾತಗಳಾದರೂ, ಕಾಯಿಲೆ ಬಾಧಿಸಿದರೂ ಬಿಡಿಗಾಸಿನ ನೆರವನ್ನೂ ನೀಡುತ್ತಿಲ್ಲ. ಇದರ ವಿರುದ್ಧ ನೌಕರರು ಇದೀಗಲೇ ನೌಕರರ ಸಂಘದ ಮೂಲಕ ಕಾರ್ಮಿಕ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದಾರೆ.

ಈ ರೀತಿ ಸರ್ವಾಧಿಕಾರಿಯಂತೆ ನಡೆದುಕೊಳ್ಳುತ್ತಿರುವ ಜಯವಿಭವನನ್ನು ಒದ್ದೋಡಿಸಲು ನೌಕರರು, ಭಕ್ತರು ಸಂಬಂಧಿಸಿದವರಿಗೆ ಸಲ್ಲಿಸಿದ ಅಹವಾಲುಗಳೆಲ್ಲ ವ್ಯರ್ಥವಾಗಿದೆ. ಇನ್ನೊಂದು ತಿಂಗಳಲ್ಲಿ ಇ.ಓ.ವಿಜಯಾ ನಿವೃತ್ತಿ ಹೊಂದಲಿದ್ದಾಳೆ. ಆ ಬಳಿಕ ಜಯವಿಭವನ ಠೇಂಕಾರ ಮತ್ತಷ್ಟು ಹೆಚ್ಚುವುದು ನಿಶ್ಚಿತ. ಅದಕ್ಕೆ ಈಗಲೇ ವೇದಿಕೆ ಸಿದ್ಧಪಡಿಸುವ ಸಲುವಾಗಿ ಆತ ಮುಜರಾಯಿ ಇಲಾಖೆ ಕಮೀಷನರ್ ನಂದಕುಮಾರ್‌ಗೂ ಪ್ರಸಾದ ತಿನ್ನಿಸಿದ್ದಾನೆಂಬ ಗುಮಾನಿಗಳಿವೆ.


ಪರಿಮಳಾ ನಾಗಪ್ಪ

ಪಕ್ಕಾ ಜಾತಿರಾಜಕೀಯದ ಮೂಲಕ ದೇವಸ್ಥಾನದ ಆಡಳಿತವನ್ನು ಎಕ್ಕುಟ್ಟಿಸುತ್ತಿರುವ ಜಯವಿಭವ ಬೆಟ್ಟದ ಸುತ್ತ ಅಕ್ರಮ ಮದ್ಯ ಮಾರಾಟ ಜಾಲವನ್ನು ಸೊಂಪಾಗಿ ಬೆಳೆಯಲು ಬಿಟ್ಟಿದ್ದಾನೆ.

ಇಂಥವನನ್ನು ಇನ್ನಷ್ಟು ದಿನ ಬಿಟ್ಟುಕೊಂಡರೆ ಬೆಟ್ಟದ ಸಂಪತ್ತು, ಘನತೆಯೆಲ್ಲಾ ಮಣ್ಣುಪಾಲಾಗುವುದು ಖಚಿತ. ಸದ್ಯ ನೌಕರರು ಹಾಗೂ ಭಕ್ತರು ಈತನಿಂದ ಬಿಡುಗಡೆ ಬಯಸುತ್ತಿರುವುದು ಸತ್ಯ.

• ಕೊಳ್ಳೇಗಾಲ ಚಿಕ್ಕಮಾಳಿಗೆ

ಜಮಖಂಡಿ ನಗರಸಭೆ

ಓಂ ಶಾಂತಿ.... ಆಯುಕ್ತ ಉಣ್ಣಾಕತ್ಯಾನ!


ಸಿದ್ದಪ್ಪ ಜಯಧರ

ಓಂ ಶಾಂತಿ.... ಎದೆಗೆ ಹೀಗೊಂದು ಬ್ಯಾಡ್ಜ್ ತಗುಲಿಸಿಕೊಂಡ ಆಸಾಮಿಯ ಆಗಮನವಾಗುತ್ತಲೇ ಜಮಖಂಡಿ ನಗರಸಭೆಯೊಳಗೆ ಅದೆಂಥಾದ್ದೋ ಪುಳಕ ಆವರಿಸಿತ್ತು. ಅಂಥಾ ಸ್ಥಿತಿಯಲ್ಲಿ ನಗರಸಭೆಗೆ ಆಯುಕ್ತನಾಗಿ ಬಂದವನು ಸಿದ್ದಪ್ಪ ಜಯಧರ. ಹಡಬೆ ಹಣದ ಹೊರತಾಗಿ ಮತ್ತೆಲ್ಲದರ ಬಗೆಗೂ ಅಖಂಡ ವೈರಾಗ್ಯ ತಳೆದಿರುವ ಸಿದ್ದಪ್ಪನ ತಣ್ಣಗಿನ ಲೂಟಿ ಇದೀಗ ಎಲ್ಲರಲ್ಲೂ ನಡುಕ ಹುಟ್ಟಿಸಿದೆ.

ವಿಧಾನಸೌಧದಲ್ಲಿ ಅಧಿಕಾರಿಯಾಗಿದ್ದುಕೊಂಡು ತಣ್ಣಗೆ ಕಮಾಯಿಸುವ ಕಲೆಯನ್ನು ಕರಗತವಾಗಿಸಿಕೊಂಡಿದ್ದ ಸಿದ್ದಪ್ಪ ಕೆಲ ತಿಂಗಳ ಹಿಂದೆ ಸೀದಾ ಜಮಖಂಡಿ ನಗರಸಭೆಗೆ ವಕ್ಕರಿಸಿದ್ದ. ಯಾರೊಂದಿಗೂ ಮಾತಿಲ್ಲ, ಕತೆಯಿಲ್ಲ. ಸಮಸ್ಯೆ ಹೇಳಿಕೊಂಡು ಬಂದ ಸಾಮಾನ್ಯ ನಾಗರಿಕರಿಗೂ ಈತನದ್ದು ಅದೇ ಪ್ರತಿಕ್ರಿಯೆ. ತೀರಾ ನಗರಸಭೆ ಸದಸ್ಯರೊಂದಿಗೆ ಚರ್ಚೆ ನಡೆಸುವುದಿರಲಿ, ಮಾತಾಡಿದ ಉದಾಹರಣೆಗಳೂ ಇಲ್ಲ. ಈತನ ಎದೆ ಮೇಲೆ ನೇತಾಡುತ್ತಿದ್ದ 'ಶಾಂತಿ' ಸಂದೇಶದ ಬೋರ್ಡು, ಹಳ್ಳೆಣ್ಣೆ ಕುಡಿದಂಥ ಮುಖದ ಮೇಲಿನ ಕಾಷ್ಠ ಮೌನ ನೋಡಿದ ಅಮಾಯಕರನೇಕರು 'ಇಂವ ದೊಡ್ಡ ಮನುಷ್ಯಾದಾನ' ಅಂದುಕೊಂಡಿದ್ದರು. ಆದರೆ ದಿನಗಳೆದಂತೆ ಸದರಿ 'ಶಾಂತಮೂರ್ತಿ'ಯ ಅಗಾಧ ಹಸಿವು ಬಹಿರಂಗಗೊಳ್ಳತೊಡಗುತ್ತಲೇ ಎಲ್ಲರೂ ಬೆಚ್ಚಿಬೀಳುವಂತಾಗಿತ್ತು.

ನಗರಸಭೆಯಿಂದ ಖರ್ಚಾಗುವ ಪ್ರತಿ ರೂಪಾಯಿಯಲ್ಲೂ ಸಿದ್ದಪ್ಪ ಪರ್ಸೆಂಟೇಜ್ ಹಿಂಡಿಕೊಳ್ಳುತ್ತಾನೆ. ಯಾವುದೇ ಖರೀದಿ ವ್ಯವಹಾರಗಳನ್ನು ಟೆಂಡರ್ ಕರೆಯದೆ, ಸದಸ್ಯರಿಗೊಂದು ಮಾಹಿತಿಯನ್ನು ನೀಡದೆ ನಡೆಸುವುದು ಸಿದ್ದಪ್ಪನ ವರಸೆ. ಈ ಖರೀದಿ ಪಟ್ಟಿಯನ್ನು ಪರಾಮರ್ಶಿಸಿದರೆ ಪ್ರತಿಯೊಂದಕ್ಕೂ ದುಪ್ಪಟ್ಟು ಬೆಲೆ ತೆತ್ತಿರುವ ವಿಚಾರ ಮನದಟ್ಟಾಗುತ್ತದೆ. ಪಂಪ್‌ಸೆಟ್ ಖರೀದಿ, ವಾಹನ ಖರೀದಿಗಳಲ್ಲಂತೂ ಸಿದ್ದಪ್ಪ ಸುಗ್ಗಿ ನಡೆಸಿದ್ದಾನೆ.

ಎಸ್ಸಿಎಸ್ಟಿಗೆ ಮೀಸಲಾದ ಶೇ. 18 ರ ಅನುದಾನವಂತೂ ಸಿದ್ದಪ್ಪನ ಪಾಲಿಗೆ ಚಿನ್ನದ ಗಣಿಯಂತಾಗಿದೆ. ಈತ ಅದೊಂದು ಸುಮುಹೂರ್ತದಲ್ಲಿ 'ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ತರಬೇತಿ ನೀಡುತ್ತೇನೆ' ಅನ್ನುವ ಮೂಲಕ ಮೌನ ಮುರಿದಿದ್ದ. ನಂತರ ವಿದ್ಯಾರ್ಥಿಗಳ ಅರ್ಜಿಗಳನ್ನೇ ಮುಂದೊಡ್ಡಿ ಬೇಕಾದಂತೆ ಹಣ ಎಣಿಸಿ ತೆಪ್ಪಗಾದ. ಇನ್ನು ಹೊಲಿಗೆ ಯಂತ್ರ ಹಂಚಿಕೆ, ವ್ಯಾಯಾಮ ಪರಿಕರ ಹಂಚಿಕೆ, ಎಸ್ಸಿಎಸ್ಟಿ ಶಾಲೆಗಳಿಗೆ ಪಾತ್ರೆ ಸರಬರಾಜು, ಬಡತನ ರೇಖೆಗಿಂತ ಕೆಳಗಿರುವವರಿಗೆ ಶೌಚಾಲಯ ನಿರ್ಮಾಣ-ಹೀಗೆ ಪ್ರತಿಯೊಂದರಲ್ಲೂ ಸಿದ್ದಪ್ಪ ಜನರನ್ನು ಹೀನಾಯವಾಗಿ ಯಾಮಾರಿಸುತ್ತಿದ್ದಾನೆ. ಇಷ್ಟಕ್ಕೇ ತಣಿಯದ ಸಿದ್ದಪ್ಪನ ಹಸಿವು ತೀರಾ ಕಸದಬುಟ್ಟಿಗೂ ಬಾಯಿಡಲು ಪ್ರೇರೇಪಿಸಿದೆ. ಘನತ್ಯಾಜ್ಯ ವಿಲೇವಾರಿ ಹೆಸರಲ್ಲಿ ಕಸದಬುಟ್ಟಿ ಖರೀದಿಸುವ ನೆಪದಲ್ಲೇ ಸಾವಿರಾರು ರೂಪಾಯಿ ಗುಂಜಿಕೊಂಡಿದ್ದಾನೆ. ಇದೀಗ ನಗರಾದ್ಯಂತ ಕಸ ಮಾತ್ರ ಕಾಣಿಸುತ್ತಿದೆ. ಕಸದಬುಟ್ಟಿಗಳು ನಾಪತ್ತೆ!

ಇಷ್ಟೆಲ್ಲಾ ಕಮಾಯಿಸಿದರೂ ತೃಪ್ತನಾಗದ ಸಿದ್ದಪ್ಪ ಬಡಬಗ್ಗರನ್ನು ಅಟ್ಟಾಡಿಸಿ ರಣ ಹಸಿವು ತಣಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ನೀರಿನ ಬಿಲ್ ಕಟ್ಟದ ಸ್ಲಂಗಳಿಗೆ ತಾನೇ ದಾಂಗಾಡಿಯಿಟ್ಟು ಅನ್ಯಾಯವಾಗಿ ಸಂಪರ್ಕ ಕಡಿತಗೊಳಿಸುವ ಸಿದ್ದಪ್ಪ ಹಣ ಕೈಸೇರಿದರೆ ಇನ್ನಷ್ಟು ಅಕ್ರಮ ಕನೆಕ್ಷನ್ ಕಲ್ಪಿಸಿ ಮೌನಕ್ಕೆ ಜಾರುತ್ತಾನೆ.

ಇನ್ನು ಗುತ್ತಿಗೆ ಆಧಾರದಲ್ಲಿ ದುಡಿಯುವ ಬಡ ನೌಕರರ ಪಾಡಂತೂ ಶೋಚನೀಯ ಸ್ಥಿತಿ ತಲುಪಿದೆ. ಇವರ ಕೆಲಸದ ಅವಧಿ 8 ತಾಸು. ಆದರೆ ಸಿದ್ದಪ್ಪ 12 ತಾಸು ಕೆಲಸ ಮಾಡಿಸುತ್ತಿದ್ದಾನೆ. ಈ ಹೆಚ್ಚುವರಿ ದುಡಿತದ ಬಾಬತ್ತಿಗೊಂದು ಬಿಲ್ಲು ಸೃಷ್ಟಿಸಿ ಜೇಬಿಗಿಳಿಸುತ್ತಿದ್ದಾನೆ. ಕಂಪ್ಯೂಟರ್ ಸೆಕ್ಷನ್, ನೀರು ಸರಬರಾಜು, ಪಂಪ್ ಹೌಸು ಹಾಗೂ ನೀರು ಶುದ್ಧೀಕರಣ ಘಟಕದ ಗುತ್ತಿಗೆ ನೌಕರರಿಗಂತೂ ಸರಿಯಾಗಿ ಸಂಬಳ ಕೊಡದೆ ಪೀಡಿಸುತ್ತಿದ್ದಾನೆ.

ಇದೀಗ ನಗರಸಭೆ ಅಧ್ಯಕ್ಷ ರಾಮು ಬಳ್ಳಿ ಮತ್ತು ಸದಸ್ಯರು ಸಿದ್ದನ ನುಂಗಾಟವನ್ನು ಕೈಲಾಗದವರಂತೆ ನೋಡುವ ಅನಿವಾರ್ಯ ಸ್ಥಿತಿ ಎದುರಾಗಿದೆ. ಈತನನ್ನು ತಕ್ಷಣ ಒದ್ದೋಡಿಸದಿದ್ದರೆ ಜಮಖಂಡಿ ನಗರಸಭೆ ಬರ್ಬಾದಾಗುವುದು ಖಚಿತ.

• ಮುತಾಲಿಂಗಪ್ಪ ಆಲಬಾಳ

ಮಂಡ್ಯ: ಫ್ಲೆಕ್ಸ್ ಎಮ್ಮೆಲ್ಲೆ ಕ್ಯಾಂಡಿಡೇಟ್‌ಗಳ ಹಾವಳಿ

ಮಂಡ್ಯದಲ್ಲೊಂದು ವಿಕೃತ ಟ್ರೆಂಡ್ ಶುರುವಾಗಿದೆ. ಅದು ಅಪಾಯಕಾರಿ ಫ್ಲೆಕ್ಸ್ ಟ್ರೆಂಡ್. ಇದು ಬಹುಶಃ ಎಲ್ಲಾ ಕಡೆ ಇರುವಂತಹದ್ದೇ. ಆದರೆ ಮಂಡ್ಯದಲ್ಲಿ ಇದು ಸ್ವಲ್ಪ ವಿಭಿನ್ನ. ಆ ವಿಭಿನ್ನತೆ ಏನಪ್ಪಾ ಅಂದರೆ ಇಲ್ಲಿ ಒಂದೇ ದಿನದಲ್ಲಿ ಹಲವಾರು ಫ್ಲೆಕ್ಸ್ ನಾಯಕರು ಹುಟ್ಟುತ್ತಿದ್ದಾರೆ. ಇಂಥವರಲ್ಲಿ ಬಹುತೇಕರು ಯಾರು ಅಂತ ಯಾರಿಗೂ ಗೊತ್ತೇ ಇರುವುದಿಲ್ಲ, ಆದರೂ ಫ್ಲೆಕ್ಸ್‌ಗಳಲ್ಲಿ ಮುಸುಡಿ ತೋರಿಸಿದ ಮಾರನೇ ದಿನವೇ ಆತ ಮುಂದಿನ ಎಮ್ಮೆಲ್ಲೆ ಕ್ಯಾಂಡಿಡೇಟ್ ಎಂಬ ಭಯಂಕರ ರೂಮರ್‌ಗಳು ಶುರುವಾಗುತ್ತವೆ. ಈ ಎಮ್ಮೆಲ್ಲೆ ಕ್ಯಾಂಡಿಡೇಟ್‌ಗಳು ನಡೆಸುತ್ತಿರುವ ಹಾವಳಿಗಳು ಮಂಡ್ಯದ ಸಾಮಾನ್ಯ ಜನರಿಗೂ ವಾಕರಿಕೆ ತರಿಸುವ ಮಟ್ಟಿಗೆ ವಿಪರೀತಕ್ಕಿಟ್ಟು ಕೊಂಡಿದೆ.



ಅತ್ತ ಭ್ರಷ್ಟ ಯಡ್ಡಿಯನ್ನು ಕೆಳಗಿಳಿಸಿದ್ದರಿಂದ ಇನ್ನೂ ಎರಡು ವರ್ಷ ಬಿಜೆಪಿ ಸರ್ಕಾರ ಸುಭದ್ರ ಎಂದು ಹೇಳುತ್ತಲೇ ಆಕಸ್ಮಿಕ ಚುನಾವಣೆಯನ್ನು ಮುಂದೂಡಿದ್ದರೆ, ಇತ್ತ ಮಂಡ್ಯದ ಕೆಲ ಪುಂಡ ಪುಢಾರಿಗಳು, ರಿಯಲ್ ಎಸ್ಟೇಟ್ ದಂಧೆಕೋರರು, ಅನುಮಾನಾಸ್ಪದ ಹಣ ಮೂಲದ ಕೆಲ ವ್ಯಕಿಗಳ ಆಟಾಟೋಪಗಳು ಹೇಳ ತೀರದಾಗಿವೆ. ಅಂಥವರಲ್ಲಿ ಜೆಡಿಎಸ್‌ನ ಪ್ರೋಗ್ರಾಂ ವೀರ ಪಂಕ್ಚರ್ ಚಿಕ್ಕಣ್ಣ, ಭೂಗಳ್ಳ ರವಿಕುಮಾರ್, ನಿತ್ಯ ಪಕ್ಷಾಂತರಿ ಎಂ.ಸಂತೋಷ್, ಎಳಸು ಹೈದ ಅಶೋಕ ಜಯರಾಂ, ಕಡುಭ್ರಷ್ಟ ಎನ್‌ಜಿಒ ಕೆ.ನಾಗಣ್ಣಗೌಡ, ಕೇಡಿ ಶೇಣಿಯ ಟಿಶ್ಯೂ ಪೇಪರ್‌ನಂತಿರುವ ಸಚ್ಚಿದಾನಂದ, 'ಆದರ್ಶ' ಮುಖ್ಯವೀರ ಡಾ.ಮೂರ್ತಿ, ಮುಖೇಡಿ ಎಚ್.ಪಿ. ಮಹೇಶ್ ಮುಂತಾದವರೇ ಪ್ರಮುಖರು.

ಇದರಲ್ಲಿ ಪಟ್ಟಪಿಸಿಗೆ ತಮ್ಮ ಭವಿಷ್ಯದ ಚುನಾವಣಾ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳು ಬರುತ್ತವೆ ಎಂಬುದೂ ಗೊತ್ತಿದ್ದಂತಿಲ್ಲ. ಆದರೆ ಇವರು ಕೊಡುತ್ತಿರುವ ಬಿಲ್ಡಪ್‌ಗಳು, ಮಾಡುತ್ತಿರುವ ಅನಾಚಾರಗಳು ಮಾತ್ರ ಅಷ್ಟಿಷ್ಟಲ್ಲ! ಕನಿಷ್ಠ ಗ್ರಾಮ ಪಂಚಾಯ್ತಿಯಲ್ಲಿ ಗೆಲ್ಲುವ ಕೆಪಾಸಿಟಿ ಇಲ್ಲದಿದ್ದರೂ ಮುಂದಿನ ಚುನಾವಣೆಗೆ ತಾನೇ ಎಮ್ಮೆಲ್ಲೆ ಕ್ಯಾಂಡಿಡೇಟ್ ಅಂತೆಲ್ಲ ಭೋಂಗು ಬಿಡುತ್ತಿರುವವರ ಸಂಖ್ಯೆಯೂ ಕಡಿಮೆಯಿಲ್ಲ.


ಈ ಫ್ಲೆಕ್ಸ್ ನಾಯಕ ಮಣಿಗಳು ವಿವಿಧ ನಾಟಕಗಳನ್ನೂ ಶುರುವಿಟ್ಟಿದ್ದಾರೆ. ಆರೋಗ್ಯ ಶಿಬಿರ, ಬಟ್ಟೆ ವಿತರಣೆ, ಹುಟ್ಟಿದ ಹಬ್ಬದಂದು ಬಡರೋಗಿಗಳಿಗೆ ಹಣ್ಣುಹಂಪಲು ವಿತರಣೆ ಮಾಡುವುದೆಲ್ಲಾ ಹಳೆ ಸ್ಟೈಲ್. ಈಗ ತೆಂಗಿನಗಿಡ ಕೊಡುವುದು, ಮೊಬೈಲ್ ಕೊಡುವುದು, ಬೈಕ್ ಕೊಡಿಸುವುದು ಲೇಟೆಸ್ಟ್ ಟ್ರೆಂಡ್. ಇಷ್ಟೆ ಅಲ್ಲದೆ ಹುಟ್ಟುಹಬ್ಬ ಮಾಡಿಕೊಳ್ಳುತ್ತಿರುವವನು ತಲೆಹಿಡುಕನೋ, ಕೊಲೆಗಡುಕನೋ, ರೌಡಿಯೋ, ಸಮಾಜ ಕಂಟಕನೋ ಏನೇ ಆಗಿರಲಿ ಅಂಥವನಿಗೂ 'ಸಮಾಜ ಸೇವಕ' ಎಂಬ ಬಿರುದು ದಯಪಾಲಿಸಿ ಅದಕ್ಕೂ ವಿಶೇಷ ಸಂಚಿಕೆ ತಂದು ಹಣ ಮಾಡಿಕೊಳ್ಳುವ ಪತ್ರಕರ್ತರಿಗೂ ಇಲ್ಲಿ ಬರವಿಲ್ಲ.

ಮಂಡ್ಯದಲ್ಲಿ ಇಂತಹ ಟ್ರೆಂಡ್ ಹಿಂದೆಂದೂ ಇರಲಿಲ್ಲ. ಚುನಾವಣೆಯ ಸಂದರ್ಭಗಳು ಬಿಟ್ಟರೆ ಯುವಜನರನ್ನು ಈ ಮಟ್ಟದಲ್ಲಿ ಹಳ್ಳ ಹಿಡಿಸಿದ ಉದಾಹರಣೆಗಳಿಲ್ಲ. ಇಂತಹ ವಿಕೃತ ಟ್ರೆಂಡ್ ಹುಟ್ಟುಹಾಕಿದ್ದು ಇದೇ ಹಡಬೆ ಹಣದೊಡೆಯ ಜಫ್ರುಲ್ಲಾ ಮತ್ತು ಸೈಟು ದಂಧೆಯ ಅಬ್ಬಾಸ್ ಅಲಿ ಬ್ಲೋಕ್ರ ಎಂಬ ಆಸಾಮಿಗಳು. ಇವರು ಉದ್ಧಾರ ಮಾಡಿದ್ದು ಬಡವರನ್ನಲ್ಲ. ಬದಲಿಗೆ ರೌಡಿ ಎಲಿಮೆಂಟುಗಳನ್ನು, ಪುಡಿ ಪುಂಡರನ್ನು! ಫ್ಲೆಕ್ಸ್ ಟ್ರೆಂಡ್ ಅವ್ಯಾಹತವಾಗಿ ಬೆಳೆಯುತ್ತಲೇ ಅದರಿಂದಲೇ ಒಂದಷ್ಟು ಮಂದಿ ಖತರ್‌ನಾಕ್‌ಗಳು ವಂಚನೆಗಿಳಿದಿದ್ದಾರೆ. ಇತ್ತ ಅಬ್ಬಾಸ್ ಅಲಿಯ ಮೂಲಕ ಬಡವರಿಗೆ ಗೋ ವಿತರಣೆ ಎಂದು ಪತ್ರಕರ್ತರ ಮುಂದೆ ಪೋಸುಕೊಟ್ಟು, ನಂತರ ಅದೇ ಹಸುವನ್ನ ವಾಪಸ್ ಪಡೆದು ಕಸಾಯಿಖಾನೆಗೆ ಸಾಗಿಸಿ ಕಾಸು ಮಾಡಿದವರಿದ್ದಾರೆ. 'ಗೊಡ್ಡು ಹಸುಗಳನ್ನು ತರಿಸಿ ಬಡವರಿಗೆ ವಿತರಿಸಿ, ನಂತರ ವಾಪಸ್ ಗೋಶಾಲೆಗೆ ತಂದು ಬಿಟ್ಟ ಖದೀಮರೂ ಇದ್ದಾರೆ!

ಈ ಫ್ಲೆಕ್ಸ್ ಕಾಯಿಲೆ ಪೀಡಿತರಲ್ಲಿ ಹಾಲಿ ನಗರಸಭಾ ಸದಸ್ಯ ಚಿಕ್ಕಣ್ಣ ಅಲಿಯಾಸ್ ಪಂಕ್ಚರ್ ಚಿಕ್ಕಣ್ಣ ಮೊದಲಿಗ. ಈತ 15 ವರ್ಷಗಳ ಹಿಂದೆ ಹೊಟ್ಟೆ ಹೊರೆಯಲು ಮಂಡ್ಯದ ನೂರಡಿ ರಸ್ತೆಯಲ್ಲಿ ಸೈಕಲ್‌ಶಾಪ್ ಇಟ್ಟುಕೊಂಡಿದ್ದವ. ಈಗ ಮುಂದಿನ ಚುನಾವಣೆಯಲ್ಲಿ ಹಾಲಿ ಶಾಸಕ ಎಂ.ಶ್ರೀನಿವಾಸ್‌ಗೆ ಟಿಕೆಟ್ ತಪ್ಪಿಸಿ ತಾನೇ ಜೆಡಿಎಸ್‌ನಿಂದ ನಿಲ್ಲುತ್ತೇನೆ ಎಂದು ಭೋಂಗು ಬಿಡುತ್ತಿದ್ದಾನೆ. ಈ ವಂಚಕನಿಗೆ ಆಕಸ್ಮಿಕವಾಗಿ ಟಿಕೆಟ್ ಸಿಕ್ಕರೂ ತನ್ನ ವಾರ್ಡ್‌ನಲ್ಲೇ ಓಟು ಬೀಳುವುದು ಕಷ್ಟಕರ. ಆದರೂ ಈತ ಮಾಡುತ್ತಿರುವ ಮಂಗಾಟಗಳಿಗೆ ಲೆಕ್ಕವಿಲ್ಲ. ಇತ್ತೀಚೆಗೆ ನಾಗಮಂಗಲದ ಚಲುವರಾಯಸ್ವಾಮಿಗೆ 50 ವರ್ಷ ತುಂಬಿದಾಗ ಬೃಹತ್ ಕಾರ್ಯಕ್ರಮ ಮಾಡಿ, ಅದಕ್ಕೆಂದು ಲಕ್ಷಾಂತರ ರೂ.ಗಳನ್ನು ಅಧಿಕಾರಿಗಳಿಂದ ಎತ್ತುವಳಿ ಮಾಡಿ ತನ್ನ ರಿಯಲ್ ಎಸ್ಟೇಟ್ ದಂಧೆಯನ್ನು ವಿಸ್ತರಿಸಿಕೊಂಡು ತನ್ನನ್ನು ಪ್ರೊಜೆಕ್ಟ್ ಮಾಡಿಕೊಂಡಿದ್ದೇ ಈತನ ಸಾಧನೆ.


ಇನ್ನು ಗಣಿಗ ರವಿಕುಮಾರ್. ಈತ ಎರಡು ತಿಂಗಳ ಹಿಂದೆ ಸೃಷ್ಟಿಯಾದ ಫ್ಲೆಕ್ಸ್ ನಾಯಕ! ಹುಟ್ಟಾ ಪುಂಡನಾದ ಈತ 10 ವರ್ಷಗಳ ಹಿಂದೆ ಸರಿಯಾಗಿ ಇಕ್ಕಿಸಿಕೊಂಡು ಊರುಬಿಟ್ಟವ. ಕೆಟ್ಟು ಬೆಂಗಳೂರು ಸೇರಿದಮೇಲೆ ಸೈಟು ದಂಧೆ ನಡೆಸಿ ಈಗ 3-4 ಕಾರುಗಳಲ್ಲಿ ಸದಾ ಪುಂಡರನ್ನು ಕಟ್ಟಿಕೊಂಡು ತಿರುಗಾಡುವ ರವಿಕುಮಾರ್ ಜೆಡಿಎಸ್‌ನಿಂದ ಎಮ್ಮೆಲ್ಲೆಯಾಗುವ ಕನಸಿನಲ್ಲಿದ್ದಾನೆ.

ನಿತ್ಯ ಪಕ್ಷಾಂತರಿ ಎಂ.ಸಂತೋಷ್ ಮೂಲತಃ ವಕೀಲ. ಹಾಗಂತ ಆತನೇ ಹೇಳಿಕೊಳ್ಳುತ್ತಾನೆ. ಈತ ಅಡ್ಡಾಡದಿರುವ ಪಾರ್ಟಿಗಳೇ ಉಳಿದಿಲ್ಲ. ಬಹುಶಃ ಮುಂದಿನ ಚುನಾವಣೆಯಲ್ಲಿ ಯಾವುದಾದರೂ ಹೊಸ ಪಕ್ಷ ಹುಟ್ಟಿದರೆ ಅದಕ್ಕೆ ಹೋಗುವುದರಲ್ಲಿ ಅನುಮಾನವೇ ಬೇಡ. ಆದರೀತ ಸದ್ಯಕ್ಕೆ ಬಿಜೆಪಿಯಲ್ಲಿ ಮಕ್ಕರಿಸಿಕೊಂಡಿದ್ದಾನೆ. ಈತ ಶ್ರೀರಂಗಪಟ್ಟಣದಲ್ಲಿ ತನ್ನ ಹೆಂಡತಿಯನ್ನೂ, ಇನ್ನೊಂದು ಕ್ಷೇತ್ರದಿಂದ ತಾನೂ ಚುನಾವಣೆಗೆ ನಿಂತು ಇಬ್ಬರೂ ಎಮ್ಮೆಲ್ಲೆಗಳಾಗುವ ಕನಸು ಕಾಣುತ್ತಿದ್ದಾನೆ. ಇದಕ್ಕಾಗಿಯೇ ಮಂಡ್ಯದಲ್ಲಿ ತಿಂಗಳಿಗೆ ಕನಿಷ್ಠ ಒಂದು ಬಗೆಯ ಫ್ಲೆಕ್ಸ್ ಹಾಕಿಸುತ್ತಿದ್ದಾನೆ. ಈ ಫ್ಲೆಕ್ಸ್‌ಗಳ ಹಣದ ಮೂಲವನ್ನು ಕೆದಕಿದರೆ ಮಾರ್ವಾಡಿ ಮಾತೆಯೊಬ್ಬಳತ್ತ ಬೊಟ್ಟು ಮಾಡುತ್ತದೆ.




ಚಿಕ್ಕಣ್ಣ

ಬಿಜೆಪಿಯಿಂದ ಎಮ್ಮೆಲ್ಲೆಯಾಗಲು ಹವಣಿಸುತ್ತಿರುವ ಮತ್ತೊಬ್ಬನ ಹೆಸರು ಹೆಚ್.ಪಿ.ಮಹೇಶ್. ಈತ ಜಡೇಜಾರವಿ ಕೊಲೆಗೆ ಪ್ರತೀಕಾರವಾಗಿ ಕೊಲೆಯಾದ ಸಾರಾಯಿ ನಾಗೇಂದ್ರನ ಸಹೋದರ. ಮೂಡಾದ ಕಡುಭ್ರಷ್ಟ ಅಧ್ಯಕ್ಷೆ ವಿದ್ಯಾ ನಾಗೇಂದ್ರರ ಮೈದುನ. ತನ್ನ ಅತ್ತಿಗೆಯನ್ನು ಹಿಂದಿಕ್ಕಿ ತಾನೇ ಬಿಜೆಪಿಯಿಂದ ಮಂಡ್ಯ ಕ್ಷೇತ್ರಕ್ಕೆ ಎಮ್ಮೆಲ್ಲೆಯಾಗಲು ಹೊರಟಿದ್ದಾನೆ. ಆದರೆ ಈತನ ಜೊತೆಗೆ ಕೆಲ ಟ್ರಾನ್ಸ್‌ಫರ್ ದಂಧೆಯ ಏಜೆಂಟರು ಬಿಟ್ಟರೆ ಬೇರ್‍ಯಾರೂ ಇಲ್ಲ. ಇಷ್ಟಾಗಿಯೂ ಅಂತಿಮವಾಗಿ ಫ್ಲೆಕ್ಸ್‌ನ್ನೇ ನಂಬಿಕೊಂಡಿದ್ದಾನೆ.



ಅಶೋಕ್

ಇನ್ನೋರ್ವ ಫ್ಲೆಕ್ಸ್ ಪೀಡಿತನ ಹೆಸರು ಅಶೋಕ. ಈತ ಮಾಜಿ ಸಚಿವ ಎಸ್.ಡಿ.ಜಯರಾಂ ಮತ್ತು ಮಾಜಿ ಶಾಸಕಿ ಪ್ರಭಾವತಿಯವರ ಸುಪುತ್ರ. ಈತನಿಗೆ ಜನರನ್ನು, ಕಾರ್ಯಕರ್ತರನ್ನು ಹೇಗೆ ಮಾತನಾಡಿಸಬೇಕೆಂಬ ಸಾಮಾನ್ಯ ತಿಳಿವಳಿಕೆಯೂ ಇಲ್ಲ. ಪಕ್ಷಕ್ಕೆ ಈತನ ಕೊಡುಗೆಯೂ ಇಲ್ಲ. ಆದರೂ ಮುಂದಿನ ಬಾರಿ ಮಂಡ್ಯದ ಎಮ್ಮೆಲ್ಲೆಯಾಗುವ ಹುಂಬತನವಂತೂ ಇದೆ.



ಸಚ್ಚಿದಾನಂದ

ಮತ್ತೊಬ್ಬ ಅತೀ ಭಯಂಕರ ಕ್ಯಾಂಡಿಡೇಟ್ ಎನ್‌ಜಿಒ ಕೆ.ನಾಗಣ್ಣಗೌಡ. ಈತ 'ಧ್ವನಿ' ಎಂಬ ಎನ್‌ಜಿಒ ಮಾಡಿಕೊಂಡೇ ಕೋಟಿಕುಳವಾಗಿದ್ದಾನೆ. ಈತನ ಹಿ... ಎಂತಹವರನ್ನೂ ಗಾಬರಿಗೊಳಿಸು... 10-15 ವರ್ಷಗಳ ಹಿಂದೆ ಮಂ... ಡಿ.ಸಿ. ಆಫೀಸಿನ ಸುತ್ತ ಗಿರಕಿ ಹಾಕು... ಟೀ ಕಾಫಿಗೂ ಅವರಿವರ ... ಗೋಗರೆಯುತ್ತಿದ್ದವ ಈಗ ಆದು ... ಕೋಟಿಕುಳವಾದ, ಎಮ್ಮೆಲ್ಲೆ ಟಿಕೆ... ಕೇಳುವಷ್ಟು ತಾಕತ್ತಾದರೂ ಈತ... ಹೇಗೆ ಬಂತು ಎಂದು ಯಾರ... ಕೇಳಿದರೂ ಅವರು ನೀಡುವ ಉ... ಎನ್‌ಜಿಒ ಎಂಬ ಸುಳ್ಳರ ... ಮಾಫಿಯಾ. ಇಂಥವನು ಮಂಡ್ಯ ... ಯಿಂದ ಎಲ್ಲಿಯಾದರೂ ಸರಿ... ಎಮ್ಮೆಲ್ಲೆಯಾಗುವ ಭ್ರಮೆಗೆ ಬಿ... ಮಾಡಬಾರದ ಕೆಲಸಗಳನ್ನು ಮಾಡುತ್ತಿದ್ದಾನೆ.

ಫ್ಲೆಕ್ಸ್ ವೀರ ಸಚ್ಚಿದಾನಂದ ಏಕಕಾಲಕ್ಕೆ ಅಂಬಿ ಮ... ಭೂಗಳ್ಳ ಅಶೋಕ್ ಖೇಣಿಯ ಚೇಲಾ. ಈತನೂ ಮು... ಎಮ್ಮೆಲ್ಲೆಯಾಗುವ ಹುಚ್ಚು ಕನ... ಬಿದ್ದಿದ್ದಾನೆ. ಈತ ಕೆಲವು ಪುಡಿ ... ನಟನಟಿಯರನ್ನು ಕರೆತಂದು, ಅವರ... ಅರೆಬೆತ್ತಲೆ ನೃತ್ಯ ಮಾಡಿಸಿ ಜನ... ಟೋಪಿ ಹಾಕುವ ತಂತ್ರಗಳ... ಮಾಡುತ್ತಾ ತಿಂಗಳು ಪೂರ್ತಿ ಕಟೌ... ಮತ್ತು ಫ್ಲೆಕ್ಸ್‌ಗಳಲ್ಲಿ ಕಾಣಿಸಿಕೊಳ್ಳುತ್ತ...

ಫ್ಲೆಕ್ಸ್ ಎಮ್ಮೆಲ್ಲೆ ರೇಸ್‌ನಲ್ಲಿರ... ಮತ್ತೊಬ್ಬ ಮೂರ್ಖ 'ಆದರ್ಶ' ... ಮೂರ್ತಿ. ಈತ ಮದ್ದೂರು ತಾಲೂ... ಯಡಗನಹಳ್ಳಿಯವ. 'ಆದ... ವಿದ್ಯಾಸಂಸ್ಥೆ' ಎಂಬ ಹೆಸರಿನಲ್ಲಿ ಮಕ್ಕ... ಶಿಕ್ಷಣ ನೀಡುತ್ತಿದ್ದಾನೆ. ವೃತ್ತಿಯಲ್ಲಿ ವೆ... ಆದರ ಜೊತೆಜೊತೆಗೆ ರಾಜಕೀಯ ಗೀಳಿಗೆ ಬಿದ್ದು ... ಮಳವಳ್ಳಿಯ ಮೀಸಲು ಕ್ಷೇತ್ರದಿಂದ ಮುಂ... ಎಮ್ಮೆಲ್ಲೆಯಾಗಲು ತುದಿಗಾಲಲ್ಲಿ ನಿಂತಿದ್ದಾನೆ. ಈತ ಎ... ಆಸಾಮಿ ಎಂದರೆ [illegible] ಸರ್ಕಾರದ ಆರೋ... ಯೋಜನೆಯನ್ನೇ ತನ್ನಪ್ಪನ 'ಮನೆ'... ಹಣದಂತೆ ಬಳಸಿಕೊಂಡಿದ್ದಾನೆ. ಸರ... ಬೊಕ್ಕಸದ ಹಣವನ್ನು ಮಳವಳ್ಳಿ ಕ್ಷೇ... ತುಂಬೆಲ್ಲಾ ಕಟೌಟ್ ಮತ್ತು ಫ್ಲೆಕ್ಸ್... ಲೂಟಿಮಾಡಿದ್ದಾನೆ.

ಇದು ಮಂಡ್ಯ ಜಿಲ್ಲೆಯಲ್ಲಿ ... ಕಾಯಿಲೆ ಉಲ್ಬಣಿಸಿರುವ ವೃತ್ತಾ... ತಮಾಷೆಯೆಂದರೆ ಕಂಬದಹಳ್ಳಿ ... ಸ್ವಾಮಿ, ಕೆಬ್ಬಹಳ್ಳಿ ರಾಜು ... ಗ್ರಾಮಪಂಚಾಯತಿ ಪ್ರವೇಶಿಸ... ಯೋಗ್ಯತೆಯಿಲ್ಲದವರೆಲ್ಲ ಈ ರೇಸಿ... ದ್ದಾರೆ. ಸಮಾಧಾನದ ಸಂಗತಿಯೆಂ... ಮಂಡ್ಯದ ಮಂದಿ ಇದನ್ನ... ತಮಾಷೆಯಂತೆ ನೋಡುತ್ತಾ ಮಜಾ ತೆಗೆದುಕೊಳ್ಳುತ್ತಿದ...

• ಲ.ಕಿ

ಮೂಡಿಗೆರೆ: ಪ್ರವಾಹ ಭೀತಿಯಲ್ಲಿ ಉಗ್ಗೆಹಳ್ಳಿ ಕಾಲೋನಿಯ ದಲಿತ ಸಮುದಾಯ




ಹೇಮಾವತಿ ನದಿಯ ಪ್ರವಾಹ ಕಾಲೋನಿಯೊಳಗೆ ನುಗ್ಗದಂತೆ ಕಟ್ಟಿರುವ ಗದ್ದೆಯಂಚಿನಲ್ಲಿ ತಡೆಗೋಡೆ

ದನದ ಕೊಟ್ಟಿಗೆಗಿಂತ ಕಡೆಯಾಗಿರುವ ಮನೆಗಳಲ್ಲಿ ವಾಸಿಸುತ್ತಿರುವ ಜನರು. ತೂತು ಸೂರಿಂದ ಸೋರುವ ಮಳೆ ನೀರಿನಿಂದ ತೋಯ್ದ ನೆಲದ ಮೇಲೆ ಮಲಗಿರುವ ಮಕ್ಕಳು. ನಡುಮನೆಯಲ್ಲೇ ಒಸರುವ ಜಲ. ಇದರ ನಡುವೆಯೇ ಇಡೀ ಗ್ರಾಮ ಮುಳುಗಡೆಯಾಗುವ ಭೀತಿ. ಸ್ಥಳಾಂತರಕ್ಕಾಗಿ ಮೀಸಲಿಟ್ಟ ಜಮೀನು ಕಬಳಿಸಿದ ಪ್ರಭಾವಿಗಳ ದರ್ಬಾರು... ಇದು ಮೂಡಿಗೆರೆ ಉಗ್ಗೇಹಳ್ಳಿ ಕಾಲೋನಿಯ ದಲಿತರ ಬದುಕಿನ ಹೀನಾಯಸ್ಥಿತಿ. ಇವತ್ತಿಗೂ ನಮ್ಮ ಸಮಾಜ ದಲಿತ ಸಮುದಾಯವನ್ನು ಊರಿನಿಂದಾಚೆ ಇಟ್ಟಿರುವ ಪರಿಯೇ ಅಸಹ್ಯ ಮೂಡಿಸುತ್ತದೆ. ಹೀಗಿರುವಾಗ ದುರ್ಬಲರ ಏಳಿಗೆಗಾಗಿ ಪ್ರಯತ್ನಿಸಬೇಕಾದ ಸರಕಾರವೂ ನಿರ್ಲಕ್ಷ್ಯ ವಹಿಸಿದರೆ ಏನೆನ್ನಬೇಕು?

ಇದು ದಲಿತ ಶಾಸಕ ಎಂ.ಪಿ ಕುಮಾರಸ್ವಾಮಿಯ ಕ್ಷೇತ್ರದಲ್ಲಿ ಕಾಣುತ್ತಿರುವ ನಗ್ನ ಸತ್ಯ. ಈತನಿಗೆ ಹಿಂಬಾಲಕರನ್ನು ಬಿಟ್ಟರೆ ಬೇರೆಯವರು ಕಾಣಿಸುವುದಿಲ್ಲ. ಕಳೆದ ಆರೇಳು ವರ್ಷಗಳ ಹಿಂದೆ ಕುಮಾರಸ್ವಾಮಿ ಹೀಗಿರಲಿಲ್ಲ. ಯಾವಾಗ ಶಾಸಕನಾದನೋ ಕುಮಾರಸ್ವಾಮಿಯ ಖದರು ಸಹ ಬದಲಾಗಿ ಹೋಯಿತು. ಆದರೆ ಕ್ಷೇತ್ರದ ಜನಸಮುದಾಯ ಮತ್ತು ಕೆಳವರ್ಗದ ಜನರ ಬದುಕು ಅತ್ಯಂತ ಹೀನಾಯವಾಗಿ ಹೋಯಿತು. ದಲಿತರ, ಕೂಲಿ ಕಾರ್ಮಿಕರ, ಬಡವರ ಬದುಕು ಅತ್ಯಂತ ದುಸ್ತರಗೊಂಡಿದ್ದರೂ ಕುಮಾರ ಸ್ವಾಮಿ ಗೂಟದ ಕಾರಿಂದ ಕದಲುತ್ತಿಲ್ಲ.

ಮೂಡಿಗೆರೆ ತಾಲ್ಲೂಕಿನ ಹಂತೂರು ಗ್ರಾ.ಪಂ. ವ್ಯಾಪ್ತಿಯಲ್ಲಿರುವ ಉಗ್ಗೆಹಳ್ಳಿ ಹೇಮಾವತಿ ನದಿಯ ದಂಡೆಯ ಮೇಲಿದೆ. ಸರಕಾರಿ ಸೌಲಭ್ಯಗಳ ಪರಿಚಯವಿಲ್ಲದ ಹಳ್ಳಿಯಿದು. ಈ ಹಳ್ಳಿಯ ಜನರು ತಲೆತಲಾಂತರದಿಂದಲೂ ವಾಸಿಸುತ್ತಿದ್ದಾರೆ. ಒಟ್ಟು ಎಪ್ಪತ್ತು ಮನೆಗಳಲ್ಲಿ ಯಾವುದೂ ನೆಟ್ಟಗಿಲ್ಲ. ಬಹುತೇಕ ಮನೆಗಳ ಸೂರು ಮುರಿಯುವ ಸ್ಥಿತಿಯಲ್ಲಿವೆ. ಭತ್ತದ ಹುಲ್ಲಿನಿಂದ ಮಳೆ ನೀರು ಸೋರದಂತೆ ತಡೆದು ದಲಿತರು ಬದುಕುತ್ತಿದ್ದಾರೆ. ತನ್ನ ಕ್ಷೇತ್ರವನ್ನು ಗುಡಿಸಲುಮುಕ್ತ ಕ್ಷೇತ್ರವಾಗಿ ಬದಲಿಸುತ್ತೇನೆ ಅನ್ನುತ್ತಿದ್ದ ಎಂ.ಪಿ.ಕುಮಾರಸ್ವಾಮಿಗೆ ಈ ಬಗ್ಗೆ ತಲೆಕೆಡಿಕೊಂಡಿಲ್ಲ.



ಕುಮಾರಸ್ವಾಮಿ

ಇಲ್ಲಿನವರಿಗೆ ಕೃಷಿ ಜಮೀನುಗಳಿಲ್ಲ. ನೆರೆ, ಹೊರೆಯ ಜಮೀನ್ದಾರರ ಕಾಫಿ ತೋಟಗಳಲ್ಲಿ ಕೂಲಿ ಕಾರ್ಮಿಕರಾಗಿ ಜೀವಿಸುತ್ತಿದ್ದಾರೆ. ಹೊತ್ತು ಮೂಡಿದರೆ ಕೆಲಸ ಅರಸುವ ಈ ಜನರಿಗೆ ಸವಲತ್ತುಗಳನ್ನು ಪಡೆದ ಅನುಭವವಿಲ್ಲ. ಕೆಲವರಿಗೆ ಮನೆ ಕಟ್ಟುವ ಭಾಗ್ಯವಿನ್ನೂ ಕೂಡಿಬಂದಿಲ್ಲ. ಅಂತಹ ಕುಟುಂಬಗಳ ಪರಿಸ್ಥಿತಿ ನರಕಸದೃಶವಾಗಿವೆ. ಬಲಾಢ್ಯರ ನೆರಳಿನಡಿ ಜನಪ್ರತಿನಿಧಿಗಳ ಪೊಳ್ಳು ಭರವಸೆ, ಆಶ್ವಾಸನೆ, ಪಟ್ಟಾಂಗಗಳನ್ನು ಕೇಳಿ, ಕೇಳಿ ಸೋತುಹೋಗಿದ್ದಾರೆ ಜನ.

ನಿಜಕ್ಕೂ ಉಗ್ಗೆಹಳ್ಳಿ ಹೇಮಾವತಿ ನದಿಯ ಪ್ರವಾಹದ ಭೀತಿಯಲ್ಲಿದೆ. ಬಿಡುವಿಲ್ಲದೆ ಸುರಿಯುವ ಮಳೆಗೆ ಇ... ಜನರು ತತ್ತರಿಸುತ್ತಿದ್ದಾರೆ. ಮಳೆ ಬಂದರೆ ಸಾಕು ಕಾಲೋನಿ... ಜನರು ಉಸಿರು ಬಿಗಿಹಿಡಿದು ದಿನಗಳೆಯುತ್ತಾರೆ. 19... ಮತ್ತು 2006 ರಲ್ಲಿ ಎರಡು ... ಉಗ್ಗೆಹಳ್ಳಿಯ ದಲಿತರನ್ನು ಪ್ರವ... ಬೆಚ್ಚಿ ಬೀಳಿಸಿತ್ತು. ಎಸ್.ಎಂ.... ಸರಕಾರದಲ್ಲಿ ಸಚಿವೆಯಾಗಿದ್ದ ಮೋ... ಮ್ಮಗೆ ಉಗ್ಗೆಹಳ್ಳಿ ಜನರನ್ನು ಸ್ಥಳಾ... ರಿಸುವ ಇಂಗಿತವಿತ್ತು. 2002... ನಡೆದ ಈ ಪ್ರಕ್ರಿಯೆಯಲ್ಲಿ ನಿರಾಶ್ರಿ... ರಾಗಲಿರುವ ಉಗ್ಗೆಹಳ್ಳಿ ದಲಿತ... ಕಿರುಗುಂದ ಗ್ರಾ.ಪಂ. ವ್ಯಾಪ್ತಿ... ಬೆಟ್ಟದಮನೆಯಲ್ಲಿ ಪುನರ್ವಸತಿಗೆ ಜಮೀನು ನಿಗದಿಪಡಿಸಲಾಗಿತ್ತು. 2... ಎಕರೆ ಕಂದಾಯ ಭೂಮಿಯಲ್ಲಿ ಕೇ... ಸರಕಾರದ ಗುಂಪು ಮನೆ ಯೋ... ಯಡಿ ತಲಾ 20 ಸಾವಿರದ 38 ಮನೆಗಳನ್ನು ಕಟ್ಟಲಾ...

ಆ ಮನೆಗಳು ಜಾನುವಾರುಗಳ ಕೊಟ್ಟಿಗೆಯಂತಿ... ಇಂಜಿನಿಯರಿಂಗ್ ಪ್ಲಾನಿಂಗ್ ಇರಲಿಲ್ಲ. ಎರಡು ಕೊಠ... ಆ ಮನೆಗಳಲ್ಲಿ ಉಗ್ಗೆಹಳ್ಳಿ ದಲಿತರು ವಾಸವಿರಲು ಸುತ... ಒಪ್ಪಲಿಲ್ಲ. ಈ ಹಿನ್ನೆಲೆಯಲ್ಲಿ ಆ ಮನೆಗಳು ಪಾಳು ಬಿ...

ಅಕಾಡೆಮಿಕ್ ಶಿಸ್ತಿನ ಚೌಕಟ್ಟು ಮುರಿವ ಕೃತಿ

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

ನಮ್ಮ ದೇಶಭಾಷೆಗಳಲ್ಲಿ ಮುಖ್ಯವಾಗಿ ಕಥೆ, ಕಾದಂಬರಿ, ಕಾವ್ಯ, ಆತ್ಮಚರಿತ್ರೆ, ತ್ಯ ವಿಮರ್ಶೆ ಮುಂತಾದ ಪ್ರಕಾರಗಳಲ್ಲಿ ಅಪಾರ ಪ್ರಮಾಣದಲ್ಲಿ ಸೃಜನಶೀಲವಾದ ಜ್ಞಾನಶಿಸ್ತುಗಳ ಗಡಿರೇಖೆಗಳನ್ನು ಮೀರಿದ ಬರಹಗಳು ನಿರ್ಮಾಣವಾಗುತ್ತಿವೆ. ಸಮಾಜಶಾಸ್ತ್ರಕ್ಕೆ ಸಂಬಂಧಿಸಿದಂತೆ, ಅಂದರೆ ಸಮಾಜ ಮತ್ತು ಸಂಸ್ಕೃತಿಗೆ ಬಂಧಿಸಿದಂತೆ, ಆಧುನಿಕ ಲೇಖಕರಿಂದ ಹೆಚ್ಚಿನ ಬರಹಗಳನ್ನು ನಿರೀಕ್ಷಿಸುವಂತಿಲ್ಲ. ಜಶಾಸ್ತ್ರದಲ್ಲಿ ಎಂಫಿಲ್, ಪಿಎಚ್‌ಡಿ ಪದವಿಗಳಿಗಾಗಿ ಸಂಶೋಧನೆ ನಡೆಸುವ ರ್ಥಿಗಳನ್ನು ಬಿಟ್ಟರೆ ಸಮಾಜಶಾಸ್ತ್ರದ ಪಠ್ಯಗಳನ್ನು ಸಾಹಿತ್ಯದಂತೆ ಎಲ್ಲರೂ ಓದಲು ಸಾಧ್ಯವಾಗುತ್ತಿಲ್ಲ? ಎಂಬ ಗಂಭೀರ ಪ್ರಶ್ನೆಯೊಂದನ್ನು ಲೇಖಕಿ ಎ.ಆರ್.ವಾಸವಿ ಮುಂದಿಡುತ್ತಾರೆ. ಇಂಗ್ಲಿಷ್‌ನಲ್ಲಿ ಪ್ರಕಟಗೊಳ್ಳುವ **Economic & Political** ekly, Seminar, Little Mag ತರಹದ ಪತ್ರಿಕೆಗಳಿಗೆ ದೇಶಾದ್ಯಂತ ದೊಡ್ಡ ಗ ವಲಯವಿದೆ. ಆದರಲ್ಲೂ **Economic & Political Weekly** ಪತ್ರಿಕೆಯಲ್ಲಿ ನ ಯಾವ ವಿಶ್ವವಿದ್ಯಾಲಯದ ಸಂಶೋಧನೆಯಿಂದಲೂ ಸಿಗದ ಉತ್ತರಗಳು, ತ್ವದ ಮಾಹಿತಿಗಳು ಓದುಗರಿಗೆ ಸುಲಭವಾಗಿ ದಕ್ಕಿಬಿಡುತ್ತವೆ.

ಕನ್ನಡದ ಸಮಾಜಶಾಸ್ತ್ರೀಯ ಬರಹಗಳನ್ನು ಇಂಗ್ಲಿಷ್‌ನಲ್ಲಿ ಸಂಪಾದಿಸುವುದರ ಜೊತೆಗೆ ದಲ್ಲೂ 'ಒಳಗನ್ನಡಿ'ಯ ರೂಪದಲ್ಲಿ ಲಭ್ಯವಾಗುವಂತೆ ಸಂಶೋಧಕರಾದ ಸ್.ವಾಸವಿಯವರು ಮಾಡಿದ್ದಾರೆ. ಈ ಕೃತಿಯನ್ನು ಒಟ್ಟು ಆರು ಭಾಗಗಳಾಗಿ ಡಿಸಲಾಗಿದೆ. ಭಾಗ ಒಂದರಲ್ಲಿ ಕನ್ನಡ ರಾಷ್ಟ್ರೀಯತೆಯ ಸ್ವರೂಪ ಮತ್ತ ಆತಂಕಗಳ ು ಡಿ.ಆರ್.ನಾಗರಾಜ್ ಮತ್ತು ಕೆ.ವಿ.ನಾರಾಯಣ ಅವರ ಲೇಖನಗಳಿದ್ದರೆ, 1997ರಲ್ಲಿ ತ್ತೂರಿನಲ್ಲಿ ಘಟಿಸಿದ ಕೋಮು ಗಲಭೆಯನ್ನಿಟ್ಟುಕೊಂಡು ಒಂದು ಸೆಕ್ಯೂಲರ್ ಪಣೆಯನ್ನು ಜಿ.ರಾಜಶೇಖರರು ಮಾಡಿದ್ದಾರೆ. ಇದಲ್ಲದೆ ದೈನಂದಿನ ಬದುಕಿನಲ್ಲಿ ರ್ಕತೆ ಕುರಿತು ಚಂದ್ರಶೇಖರ ಕಂಬಾರ, ಯು.ಆರ್.ಅನಂತಮೂರ್ತಿ, ರಹಮತ್ ರೆಯವರ ಲೇಖನಗಳಿವೆ. ಜಾತಿಯನ್ನು ಮರುವ್ಯಾಖ್ಯಾನಿಸುವ, ಜಾತಿ ಗುರುತುಗಳನ್ನು, ಸಂಘಟನೆಗಳ ಕುರಿತ ಹೊಸನೋಟಗಳನ್ನು ಬರಗೂರು ರಾಮಚಂದ್ರಪ್ಪ ಮತ್ತು ಳ್ಳಿ ಗಣೇಶರು ಕಟ್ಟಿಕೊಟ್ಟಿದ್ದಾರೆ. ಡರ್ಬಾನ್ ಸಮಾವೇಶದ ಸಂದರ್ಭದಲ್ಲಿ ಬರೆದ ರ್ಥೀಡ್: ಅಸ್ಪೃಶ್ಯತೆಯ ಮುತ್ತಜ್ಜ' ಎಂಬ ದೇವನೂರ ಮಹಾದೇವ ಅವರ ಅಪರೂಪದ ಲೇಖನವೊಂದು ಈ ಕೃತಿಯಲ್ಲಿದೆ.

"ನಮಗೆಲ್ಲರಿಗೂ ತಿಳಿದಿರುವಂತೆ ಕಳೆದ ಏಳೆಂಟು ವರ್ಷಗಳಲ್ಲಿ ದೆಹಲಿಯ ಶ್ರೀಮತಿ ಸುಷ್ಮಾ ಸ್ವರಾಜ್ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಬಳ್ಳಾರಿಗೆ ಭೇಟಿ ಕೊಡುತ್ತಿದ್ದಾರೆ. ಅವರು ಭೇಟಿಕೊಡುವುದು ಮಹಿಳೆಯರ ಬಗ್ಗೆ ಯಾವುದೇ ಕಾಳಜಿಯಿಂದಲ್ಲ. ಆದರಲ್ಲೂ ಅವರು ಯಾವತ್ತು ದುಡಿಯುವ ಮಹಿಳೆಯರ ಬಗ್ಗೆ ಮಾತನಾಡಿದವರಲ್ಲ, ಅವರ ಕೇರಿಗಳಿಗೆ ಪ್ರವೇಶಿಸಿದವರಲ್ಲ, ಅವರಿಗೆ ದುಡಿಯುವ ಮಹಿಳೆಯರು ಹರಿಸುವ ಬೆವರಿನ, ಕಣ್ಣೀರಿನ ಮತ್ತು ರಕ್ತದ ಘಾಟು ಕುಡಿದ ಅನುಭವವಿಲ್ಲ. ಅವರು ಬಳ್ಳಾರಿಗೆ ಪ್ರತಿ ವರ್ಷ ಬರುವುದು 'ವರಮಹಾಲಕ್ಷ್ಮಿ' ಪೂಜೆಗಾಗಿ. ಅಂದಮೇಲೆ ಅವರು ಪ್ರತಿನಿಧಿಸುವುದು ಸಮಾಜದ ಯಾವ ವರ್ಗದ ಮಹಿಳೆಯರ ಹಿತಾಸಕ್ತಿಗಳೆಂಬುದು ಇದರಿಂದ ತಿಳಿಯುತ್ತದೆ..." ಎಂಬ ಟಿ.ಆರ್.ಚಂದ್ರಶೇಖರರ ಮಾತುಗಳು ಮಾಧ್ಯಮದ ಮಂದಿಗೆ ತಿಳಿದ ಸತ್ಯವೊಂದು ಅಕಾಡೆಮಿಕ್ ಕೃತಿಯಲ್ಲೂ ಹರಡಿಕೊಂಡಿದೆ. ಹೀಗೆ ಅಕಾಡೆಮಿಕ್ ಶಿಸ್ತಿನ ಚೌಕಟ್ಟನ್ನು ಇಲ್ಲಿನ ಅನೇಕ ಲೇಖನಗಳು ಮುರಿದಿವೆ. ನಮ್ಮ ಸುತ್ತಣ ಭಾಷೆ, ಸಮಾಜ, ಸಂಸ್ಕೃತಿಯೆಡೆಗೆ ಸಣ್ಣದೊಂದು ಕುತೂಹಲ ಮತ್ತು ಜೀವನ ಪ್ರೀತಿ ಹೊಂದಿರುವ ಎಲ್ಲರೂ ಓದಲೇಬೇಕಾದ ಕೃತಿ 'ಒಳಗನ್ನಡಿ'.



ಒಳಗನ್ನಡಿ
ಸಂಪಾದನೆ: ಎ.ಆರ್.ವಾಸವಿ
ಪ್ರಕಾಶಕರು: ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ-583276
ಪುಟಗಳು: 243,
ಬೆಲೆ: ರೂ.120, ಪ್ರಕಟಣೆ: 2011


ಬಯಲಾದ ಡಾಲರ್ ಪ್ರೇಮ

ಕೆಲವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾದ ಡರ್ಬಾನಿನಲ್ಲಿ ಗಿದ ವಿಶ್ವ ವರ್ಣಭೇದ ವಿರೋಧಿ ಸಮಾವೇಶದಲ್ಲಿ ಮಹಿಸಿ ಅಲ್ಲಿನ ಹಸಿಹಸಿ ಅನುಭವಗಳನ್ನು ಡಾ.ಸಿ.ಎಸ್. ಕಾನಾಥರು 'ಗಾಂಧಿ ಮೆಟ್ಟಿದ ನಾಡಿನಲ್ಲಿ' ಕೃತಿಯಲ್ಲಿ ಕೊಟ್ಟಿದ್ದರು. ಇಂಡಿಯಾದಲ್ಲಿನ್ನೂ ಅಸ್ಪೃಶ್ಯತೆ ಜೀವಂತ ದೆ, ಜಾತಿಭೇದ ಮತ್ತು ಜನಾಂಗಭೇದ ಎರಡೂ ವೇ ಎಂದು ಹೇಳಲು ಹೊರಟ ೀಯ ಮಾನವ ಹಕ್ಕುಗಳ ಸಮಿತಿ ದ್ವಾರಕಾನಾಥರಿದ್ದರು. ತಮಾಷೆ ದರೆ ದಕ್ಷಿಣ ಆಫ್ರಿಕಾದ ಡರ್ಬಾನ್ ಜನಾಂಗೀಯವಾದ, ವರ್ಣಭೇದ ತ್ತಿ ಅಸಹಿಷ್ಣುತೆಗೆ ಸಂಬಂಧಿಸಿದ ಗಳು ಶುರುವಾದಾಗ, ಭಾರತದ ವ ಸರ್ಕಾರವು "ನಮ್ಮ ದೇಶದಲ್ಲಿ ಭೇದ, ಜಾತಿಭೇದ ಈ ಯಾವುವೂ ದಂತೆ ಸಂಪೂರ್ಣ ನಾಶಮಾಡಿದ್ದೇವೆ. ಜನ ಎಷ್ಟು ಸಹಿಷ್ಣುಗಳೆಂದರೆ ದೇಶದಲ್ಲಿ ಅನೇಕ ಧರ್ಮ, ಜಾತಿ ದ್ದಾಗ್ಯೂ ಯಾರೂ ಧರ್ಮ ಮತ್ತು ಗಳ ಕಾರಣಗಳಿಗಾಗಿ ಬೀದಿಗಿಳಿದು ರ್ಷಣೆಗಿಳಿಯುವುದಿಲ್ಲ" ಎಂಬುದಾಗಿ ಯಾ ದೇಶದ ಪ್ರತಿನಿಧಿಯಾಗಿದ್ದ ಒಮರ್ ಅಬ್ದುಲ್ಲಾರ ಲಕ ಹೇಳಲು ಪ್ರಯತ್ನಿಸಿತ್ತು. ಆ ಕುರಿತು ಹೆಚ್ಚಿನ ವಿವರಗಳು 'ಗಾಂಧಿ ಮೆಟ್ಟಿದ ನಾಡಿನಲ್ಲಿ' ಕೃತಿಯಲ್ಲಿ ಸಿಗುತ್ತವೆ.



ದಕ್ಷಿಣಾ ಆಫ್ರಿಕಾದ ನಂತರ ತಾವು ಕಂಡ ಅಮೆರಿಕಾದ ನಿಜವಾದ ಮುಖವನ್ನು ತೆರೆದಿಡುವ ಪ್ರವಾಸ ಕಥನವೊಂದನ್ನು ಡಾ.ಸಿ.ಎಸ್.ದ್ವಾರಕಾನಾಥ್ 'ಅಮೆರಿಕಾ ಆ ಮುಖ'ದಲ್ಲಿ ಮಾಡಿದ್ದಾರೆ. ಡರ್ಬಾನ್‌ನಲ್ಲಿ ಇಂಡಿಯಾದ ನಿಜವಾದ ಮುಖ ತೋರಿಸಲು ಹೊರಟ ಲೇಖಕರಿಗೆ ಅದು ಪ್ರವಾಸಕಥನ ಬರೆಯಲಿಕ್ಕೆಂದು ಹೊರಟ ಗಳಿಗೆಯಾಗಿರಲಿಲ್ಲ, ಆದರೆ 'ಅಮೆರಿಕಾದ ಆ ಮುಖ'ವನ್ನು ತೋರಿಸುವಾಗ ಮಾತ್ರ ಅವರಿಗೆ ಇಂಡಿಯಾದ 'ಚಿಡ್ಡಿ'ಯೊಬ್ಬ ಎದುರಾಗುತ್ತಾನೆ: "ಶಿವರಾಮಕೃಷ್ಣ ಎಂಬ ಸಸ್ಯಾಹಾರಿ ಚಿಡ್ಡಿ ತನ್ನ ಕುಟುಂಬ ಸಮೇತ ಟಾಕೋಬೆಲ್‌ಗೆ ಹೋಗಿ ಸ್ಪಾನಿಶ್ ರೈಸ್‌ಗೆ ಆರ್ಡರ್ ಮಾಡಿದ. ಆದರಲ್ಲಿ ಸಹಜವಾಗಿ ಬೀಫ್ ಹಾಕಿರುತ್ತಾರೆ. ಸ್ಪಾನಿಶ್ ರೈಸ್‌ಅನ್ನು ಗಡದ್ದಾಗಿ ಹೊಡೆದು ಜೀರ್ಣಿಸಿಕೊಂಡ ನಂತರ ಶಿವರಾಮಕೃಷ್ಣ ತನಗೂ ಟಾಕೋಬೆಲ್‌ನವರು ಗೋಭಕ್ಷಣೆ ಮಾಡಿಸಿದ್ದಾರೆಂದು ತಗಾದೆ ತೆಗೆದ. ಇದರ ಪರಿಹಾರಕ್ಕಾಗಿ ತನ್ನ ಕುಟುಂಬ ಸಮೇತ ಭಾರತದಲ್ಲಿರುವ ಕಾಶಿಗೆ ಹೋಗಿ ಗಂಗಾಸ್ನಾನ ಮಾಡುವ ಖರ್ಚು, ಒಬ್ಬೊಬ್ಬರಿಗೆ 2100 ಡಾಲರ್‌ನಂತೆ ಕೊಡಬೇಕೆಂದು ಆತ ಕೋರ್ಟ್‌ಗೆ ಹೋದ. ಜಡ್ಜ್ ಜೇನ್ ಲೊವೆಲ್ ಎಂಬಾಕೆ ಶಿವರಾಮಕೃಷ್ಣನನ್ನು ವಿಚಾರಣೆಗೊಳಪಡಿಸಿ ಇವರಿಗಿರುವುದು ಗೋಪ್ರೇಮವಲ್ಲ ಡಾಲರ್ ಪ್ರೇಮವೆಂದು ಮನಗಂಡು **'The plaintiff's claim failed because it did not show the rice was unwholesome or unfit for human consumption'** ಎಂದು ತೀರ್ಪು ನೀಡಿ ಕೇಸು ವಜಾಗೊಳಿಸಿದರು." ಈ ಪ್ರವಾಸಕಥನಕ್ಕೆ ಮುನ್ನುಡಿ-ಬೆನ್ನುಡಿಯ ರೂಪದಲ್ಲಿ ಎನ್.ಎಸ್.ಶಂಕರ್ ಮತ್ತು ಡಾ.ವಸು.ಎಮ್.ವಿ. ಅವರ ಸೊಗಸಾದ ಮಾತುಗಳಿವೆ.

ಅಮೆರಿಕಾ ಆ ಮುಖ
ಲೇಖಕರು: ಡಾ.ಸಿ.ಎಸ್.ದ್ವಾರಕಾನಾಥ್
ಪ್ರಕಾಶಕರು: ಲಡಾಯಿ ಪ್ರಕಾಶನ, ನಂ.21, ಪ್ರಸಾದ್ ಹಾಸ್ಟೆಲ್, ಗದಗ-582 101
ಪುಟಗಳು: 152, ಬೆಲೆ: ರೂ.80, ಪ್ರಕಟಣೆ: 2011



ಗಳನ್ನು ಕಟ್ಟಲು ಬಳಸಿದ್ದ ಇಟ್ಟಿಗೆಗಳು, ಸಿಮೆಂಟಿನ ಗಳು, ಕಿಟಕಿ, ಬಾಗಿಲುಗಳು ಕಂಡವರ ಪಾಲಾದವು. ತ್ತಿ ಅಲ್ಲಿಗೆ ಹೋಗಿ ನೋಡಿದರೆ ಕೇವಲ ಎರಡು ಗಳು ಮಾತ್ರ ನೆಟ್ಟಗೆ ನಿಂತಿವೆ. ಉಳಿದ 36 ಮನೆಗಳ ಪು ಕೂಡ ಕಾಣಿಸುವುದಿಲ್ಲ, ಅವತ್ತು ತಾ.ಪಂ. ಇಓ ರಾಜ್ ಎಂಬಾತನಿದ್ದ, ಆತ ಕೂಡ ದಲಿತ. ಎಲ್ಲಾ ಶಾಸಕರು, ದಲಿತ ಅಧಿಕಾರಿಗಳು ಸೇರಿ ದಲಿತರ ಕನ್ನು ಬರ್ಬರಗೊಳಿಸಿದರು ಅಂದರೆ ತಪ್ಪಾಗಲಿಕ್ಕಿಲ್ಲ, ತದನಂತರ 2006ರಲ್ಲಿ ಅಂದಿನ ಜಿಲ್ಲಾ ಉಸ್ತುವಾರಿ ತ್ರಿ, ಕೆ.ಎಸ್.ಈಶ್ವರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಡಿ.ವಿ. ಸದಗೌಡ, ಶಾಸಕ ಎಂ.ಪಿ.ಕುಮಾರಸ್ವಾಮಿ ಉಗ್ಗೆಹಳ್ಳಿ ಯರಿಗೆ ಪರಿಹಾರದ ಭರವಸೆ ನೀಡಿದ್ದರು. ಆದರೆ ರೆಗೂ ಸಮಸ್ಯೆ ಬಗೆಹರಿದಿಲ್ಲ, ಪ್ರವಾಹವನ್ನು ತಪ್ಪಿಸಲು ಳ್ಳ ದಿಬ್ಬದಲ್ಲಿ ಕಾಲೋನಿಯ ಸುತ್ತ ಕಲ್ಲು, ಸಿಮೆಂಟು ತಡೆಗೋಡೆ ನಿರ್ಮಿಸಲಾಗಿದೆ. ಇದರಿಂದ ಅಪಾಯಕಾರಿ ಪ್ರವಾಹವನ್ನು ತಡೆಗಟ್ಟಲು ಸಾಧ್ಯವಾಗಲಾರದು. ಅದು ಕಳಪೆ ಗುಣಮಟ್ಟದಿಂದ ಕೂಡಿದೆ ಎನ್ನುವುದು ಊರವರ ಅಭಿಪ್ರಾಯ.

ಉಗ್ಗೆಹಳ್ಳಿ ದಲಿತರು ಬೆಟ್ಟದಮನೆಗೆ ಸ್ಥಳಾಂತರವಾಗಲು ಒಪ್ಪದಿರುವುದಕ್ಕೆ ಮತ್ತೊಂದು ರಾಜಕೀಯ ಕಾರಣವಿದೆ. ಹಂತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಉಗ್ಗೆಹಳ್ಳಿ ದಲಿತ ಕಾಲೋನಿಯ ಜನಸಂಖ್ಯೆ ಸುಮಾರು 700ರಷ್ಟಿದೆ. ಇದರಲ್ಲಿ 300ಕ್ಕೂ ಅಧಿಕ ಮತದಾರರಿದ್ದಾರೆ. ಈ ಎಲ್ಲಾ ಮತಗಳು ನೆರೆಯ ಕಿರುಗುಂದ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸ್ಥಳಾಂತರವಾಗುವುದನ್ನು ಸ್ಥಳೀಯ ರಾಜಕಾರಣಿಗಳು ನಿರೀಕ್ಷಿಸಲಾರರು. ಅವರಿಗೆ ಬೇಕಿರುವ ಮತಗಳನ್ನು ಕಳೆದುಕೊಳ್ಳಲು ರಾಜಕಾರಣಿಗಳು ಸುತರಾಂ ಒಪ್ಪಿಕೊಳ್ಳುವುದಿಲ್ಲ, ಈ ನಡುವೆ ಕೂಲಿ ಕಾರ್ಮಿಕರಾಗಿರುವ ದಲಿತ ಸಮುದಾಯದ ಸ್ಥಳಾಂತರದಿಂದ ಕಾರ್ಮಿಕರ ಕೊರತೆ ಎದುರಿಸುವ ಅಪಾಯವಿದೆ. ಇದನ್ನು ತಡೆಯುವ ಕುತಂತ್ರಕ್ಕೆ ದಲಿತರು ಬಲಿಯಾಗಿದ್ದಾರೆ.

ಆದರೀಗ ಉಗ್ಗೆಹಳ್ಳಿ ದಲಿತರು ಹಂತೂರು ಗ್ರಾ.ಪಂ.ನಿಂದಲೂ ನಿರ್ಲಕ್ಷ್ಯಕ್ಕೊಳಗಾಗಿದ್ದಾರೆ. ಜನರಿಗೆ ಸಮರ್ಪಕ ರೀತಿಯ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ, ಕಾಲೋನಿಯಲ್ಲಿ ಸ್ವಚ್ಛತೆ ಎಂಬುದಿಲ್ಲ, ಯಾವ ಮನೆಯಲ್ಲೂ ಶೌಚಾಲಯದ ವ್ಯವಸ್ಥೆಯಿಲ್ಲ, ಬಾಕ್ಸ್ ಚರಂಡಿಗಳಿದ್ದರೂ ಪ್ರಯೋಜನವಾಗುತ್ತಿಲ್ಲ. ಮನೆಯೊಳಗೆ ಮಣ್ಣಿನ ನೆಲದಲ್ಲಿ ಚಾಪೆ ಹಾಸಿ ಮಲಗುವ ಮಕ್ಕಳನ್ನು ಕಂಡವರು ಅವಾಕ್ಕಾಗಬೇಕು. ಏಕೆಂದರೆ ಪ್ರತಿ ಮನೆಯೊಳಗೆ ಜಲ ಉಕ್ಕಿ ಬರುತ್ತದೆ. ನೀರಿನಿಂದ ತೋಯ್ದ ಮನೆಗಳಲ್ಲಿ ವಾಸಿಸುವುದು ಹೇಗೆಂದು ಕಾಲೋನಿಯಲ್ಲಿ ವಾಸಿಸುತ್ತಿರುವ ದಲಿತರ ಮಾತುಗಳಲ್ಲಿಯೇ ಕೇಳಬೇಕು. ಹಾಗಿದೆ ಈ ಪ್ರಪಂಚ!


ಮೋಟಮ್ಮ

ಭಾಷಣಗಳಲ್ಲಿ ಗ್ರಾಮಗಳನ್ನು ಗುಡಿಸಲುಮುಕ್ತವಾಗಿ ಪರಿವರ್ತಿಸುವ ಪೊಳ್ಳು ಆಶ್ವಾಸನೆ ಕೊಡುವ ಜನಪ್ರತಿನಿಧಿಗಳು ಉಗ್ಗೆಹಳ್ಳಿಯ ದಲಿತ ಕಾಲೋನಿಯನ್ನು ಸಂಪೂರ್ಣವಾಗಿ ಮರೆತಿದ್ದಾರೆ. ತಾಲ್ಲೂಕಿನ ಆರೋಗ್ಯ ಇಲಾಖೆ, ಮಕ್ಕಳ ಕಲ್ಯಾಣ ಇಲಾಖೆಗಳ ಜೊತೆಗೆ ಎಲ್ಲಾ ಇಲಾಖೆಗಳ ಅಧಿಕಾರಿಗಳ ನಿಷ್ಕ್ರಿಯತೆ ಇಲ್ಲಿ ಘನಘೋರ ಸಮಸ್ಯೆಗೆ ದಲಿತರನ್ನು ತಳ್ಳಿದೆ. ಆಧುನಿಕ ಜಗತ್ತಿನಲ್ಲಿ ಮುರುಕಲು ಗುಡಿಸಲುಗಳಲ್ಲಿ ಬದುಕಿನ ಬಂಡಿ ಓಡಿಸುವ ದುಸ್ತರ ಪರಿಸ್ಥಿತಿ ಇಲ್ಲಿನ ದಲಿತರಿಗೆ ಎದುರಾಗಿರುವುದು ವಿಪರ್ಯಾಸವೇ ಸರಿ.

• ಅಜೀಜ್ ಕಿರುಗುಂದ

ಲಂಕೇಶ್ ಪ್ರಕಾಶನ

ನಂ.9, ಇ.ಎ.ಟಿ.ರಸ್ತೆ, ಬಸವನಗುಡಿ, ಬೆಂಗಳೂರು-4
ಫೋನ್: 26676427

ಶೀರ್ಷಿಕೆ	ಬೆಲೆ
ನೀಲು ಕಾವ್ಯ -ಸಂಗ್ರಹ 1	150.00
ನೀಲು ಕಾವ್ಯ -ಸಂಗ್ರಹ 2	150.00
ನೀಲು ಕಾವ್ಯ -ಸಂಗ್ರಹ 3	200.00
ಚಿತ್ರ ಸಮೂಹ	90.00
ಅಕ್ಷರ ಹೊಸ ಕಾವ್ಯ	250.00
ಮರೆಯುವಮುನ್ನ-ಸಂಗ್ರಹ 1	150.00
ಮರೆಯುವಮುನ್ನ-ಸಂಗ್ರಹ 2	150.00
ಮರೆಯುವಮುನ್ನ-ಸಂಗ್ರಹ 3	150.00
ಮನಕೆ ಕಾರಂಜಿಯ ಸ್ಪರ್ಶ	150.00
ಈ ನರಕ ಈ ಪುಲಕ	125.00
ಆಟ-ಜೂಜು-ಮೋಜು!	150.00
ಟೀಕೆ-ಟಿಪ್ಪಣಿ 1	200.00
ಟೀಕೆ-ಟಿಪ್ಪಣಿ 2	200.00
ಟೀಕೆ-ಟಿಪ್ಪಣಿ 3	200.00
ಸಾಹಿತಿ-ಸಾಹಿತ್ಯ	300.00
ರೂಪಕ ಲೇಖಕರು	70.00
ಕಂಡದ್ದು ಕಂಡಹಾಗೆ	125.00
ಪ್ರಸ್ತುತ	80.00
ಹುಳಿಮಾವಿನ ಮರ	250.00
ಮುಸ್ಸಂಜೆಯ ಕಥಾ ಪ್ರಸಂಗ	250.00
ಬಿರುಕು	60.00
ಅಕ್ಕ	80.00
ಮಂಜು ಕವಿದ ಸಂಜೆ	85.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
ಕಲ್ಲು ಕರಗುವ ಸಮಯ	125.00
ನಾನಲ್ಲ	60.00
ಕೆರೆಯ ನೀರನು ಕೆರೆಗೆ ಚೆಲ್ಲಿ	50.00
ಉಲ್ಲಂಘನೆ	80.00
ಪಾಪದ ಹೂಗಳು	60.00
ಬಿರುಕು	40.00
ಸಂಕ್ರಾಂತಿ	45.00
ತೆರೆಗಳು	50.00
ಈಡಿಪಸ್ ಮತ್ತು ಅಂತಿಗೊನೆ	60.00
ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00
ಗುಣಮುಖ	30.00
ಕ್ರಾಂತಿ ಬಂತು ಕ್ರಾಂತಿ	40.00
ಕಪ್ಪು ಮಲ್ಲಿಗೆ	75.00
ಕಂಡಹಾಗೆ ಭಾಗ-1	125.00
ಕಂಡಹಾಗೆ ಭಾಗ-2	150.00
ದರವೇಶಿ ಕತೆಗಳು	90.00
ಬಸವರಾಜಮಾರ್ಗ	40.00
ಬೆನಜೀರ್	25.00
ಆವರಣ ಎಂಬ ವಿ-ಕೃತಿ	100.00
ಜೈಲೆಂಬ ಲೋಕದಲ್ಲಿ	75.00
ವೇದಾಂತ ರೆಜಿಮೆಂಟ್	60.00
ಕಳೆದುಕೊಂಡವಳು	45.00
ನೂರುಸ್ವರ	60.00
ಟ್ರೇನ್ ಟು ಪಾಕಿಸ್ತಾನ್	125.00
ಮಿಡತೆಗಳ ಬರವಿಗೆ....	100.00
ಡಿಸೆಂಬರ್ 13	150.00
ಮನುಸ್ಮೃತಿ	20.00
ಆರೋಗ್ಯ ಮತ್ತು ಜೀವನ	125.00
ತೇಜಸ್ವಿ ನೆನಪು	100.00
ಜಬೀವುಲ್ಲಾ ಕೊಟ್ಟ ಕೋಳಿ	100.00
ಮುತ್ತುರಾಜನ ಮುತ್ತು	175.00
ವಿಷ್ಣು ನೂರೊಂದು ನೆನಪು	150.00
ಓ ಈಳಂ	250.00
ಖೈರ್ಲಾಂಜಿ	200.00
ಕಮಲಾ ದಾಸ್ ಕಥೆಗಳು	60.00
ಮಾಂಟೊ ಕಥೆಗಳು	80.00
ಕೋಮುವಾದ	60.00
ಜಾತಿ ಪದ್ಧತಿ	125.00
ರಾಮಾಯಣ ವಿಷವೃಕ್ಷ	75.00
ಅರೇಬಿಯನ್ ನೈಟ್ಸ್	150.00
ಜಿಮ್‌ಕಾರ್ಬೆಟ್-ಶಿಕಾರಿ ಕತೆಗಳು	80.00
ಚೆಕ್‌ಪೋಸ್ಟ್	100.00
Some-ಪದ	80.00
ಬಿಡಿಚಿತ್ರಗಳು	60.00
ಗೋವು ಪವಿತ್ರ ಎಂಬ ಮಿಥ್ಯೆ	80.00
ಕರ್ಕರೆಯನ್ನು ಕೊಂದವರ್ಯಾರು?	100.00
ಅಸ್ಪೃಶ್ಯ ವಸಂತ	200.00
ಬಾಲಗೋಪಾಲ್ ಬರಹಗಳು	150.00
ಬದುಕು-ಬಯಲು	200.00
ಚಾರ್ವಾಕ	250.00
ಜಂಗಲ್‌ನಾಮಾ	175.00

ಬೆಟಗೇರಿ ಶಿದ್ದಪ್ಪಾರ ಅವ್ವನ ಸಂಸ್ಕಾರ

• ಬಿ. ಚಂದ್ರೇಗೌಡ

ಬೆಟಗೇರಿ ಶಿದ್ದಪ್ಪ ಫೋನು ಮಾಡಿ "ಲೇ ಗೌಡ, ನಮ್ಮವ್ವ ತೀರಿಕೊಂಡ್ಳು. ಶಿವಮೊಗ್ಗದಿಂದ ಬರೋ ನಮ್ಮ ಸಂಮಂದಿಕರ ಕೂದಿ ನೀನು ಬಾರಲ್ಲ, ತಪಿಸಿಕೊಂಡಿಯು ಮಗನ" ಎಂದು ಫೋನ್ ಸ್ವಿಚಾಫ್ ಮಾಡಿದ. ಶಿದ್ದಪ್ಪನ ತಾಯಿ ಇನ್ನಷ್ಟು ದಿನ ಬದುಕಿದ್ದರೆ ನೂರುವರ್ಷ ಮುಟ್ಟೇ ಬಿಡುತ್ತಿದ್ದಳು. ಬೇಕಾದಷ್ಟು ಮಕ್ಕಳೆತ್ತು, ಬದುಕಿ, ಬಾಳಿ ಈಗ ಸಹಜವಾಗಿ ತೀರಿಕೊಂಡ ಆ ತಾಯಿಯ ಶವಸಂಸ್ಕಾರಕ್ಕೆ ಲಕ್ಷ್ಮೇಶ್ವರದ ಹತ್ತಿರವಿರುವ ರಾಮಗೇರಿಗೆ ಬಾ ಎಂದು ಎಷ್ಟು ಸಹಜವಾಗಿ ಹೇಳಿದನಲ್ಲಾ ಈ ಬೆಟಗೇರಿ. ಇವನಿಗೇನನ್ನ ಬೇಕು, ಇವನಿಗಿನ್ನೂ ಬುದ್ಧಿ ಬರಲಿಲ್ಲವಲ್ಲ ಎಂದು ಯೋಚಿಸುವಷ್ಟರಲ್ಲಿ ಆತನ ಸಂಬಂಧಿಗಳಾದ ಹಾವಣ್ಣ ಮತ್ತು ಆಚನೂರು ಫೋನ್ ಮಾಡಿ "ನಾಳೆ ಮುಂಜಾನೆ ಆರು ಗಂಟೆಕ್ಕೆ ರೆಡಿ ಇರ್ರಿ. ನಾವು ಕರಕಂಡೋಕ್ಕೆವು" ಎಂದರು.

"ಆಯ್ತು" ಎಂದೆ.

ನನಗೆ ವಯಸ್ಸಾದವರು ತೀರಿಕೊಂಡರೆ ಅಳು ಬರುವುದಿಲ್ಲ, ಆಕಸ್ಮಾತ್ ಬಂದರೆ ಸಂಬಂಧಿಕರ ರೋದನದ ಕಾರಣಕ್ಕಷ್ಟೇ. ನಮ್ಮವ್ವ ತೀರಿಕೊಂಡಾಗಲೂ ಅಳು ಬರಲಿಲ್ಲ. ಅವಳು ತೀರಿಕೊಂಡಳೆಂದು ಫೋನು ಬಂದಾಗ ಆ ವಾರದ 'ಕಟ್ಟೆ ಪುರಾಣ' ಬರೆಯಲು ತಯಾರಾಗುತ್ತಿದ್ದೆ. ಆಹಾ, ತಾಯಿಯ ನಿಧನದ ಸುದ್ದಿ ಕೇಳಿದ ನಂತರವೂ 'ಕಟ್ಟೆ ಪುರಾಣ' ಬರೆದೆ. ಅಂದರೆ ನನ್ನ ಕರ್ತವ್ಯ ಪ್ರಜ್ಞೆ ಜವಾಬ್ದಾರಿಯನ್ನು ಕೊಂಡಾಡುವಂತಿಲ್ಲ, ಏಕೆಂದರೆ ಕಾಲು ಮುರಿದುಕೊಂಡು ಹೆಣಗುತ್ತಿದ್ದ ಅವ್ವನಿಗೆ ಒಂದು ಬಿಡುಗಡೆ ಬೇಕಿತ್ತು, ನನ್ನ ಹೆಂಡತಿ ಮಾಡಿದ್ದ ಸಾರಿನಲ್ಲಿ ಉಣ್ಣದೆ, ತಾನೇ ಬೇರೆ ಸಾರು ಮಾಡಿಕೊಳ್ಳಲು ಹೋಗಿ ಅಡಿಗೆ ಮನೆಯಲ್ಲಿ ಜಾರಿಬಿದ್ದು ಕೀಲು ಮುರಿದುಕೊಂಡು, ನನಗೆ ತುಂಬಾ ತೊಂದರೆ ಕೊಟ್ಟಿದ್ದಳು. ಅದಕ್ಕೆ ಅವಳು ತೀರಿಕೊಂಡ ಸುದ್ದಿ ಬಂದಾಗ 'ಒಳ್ಳೆದಾಯ್ತು ಬುಡಿ' ಎಂದು 'ಕಟ್ಟೆ ಪುರಾಣ' ಕೆರೆದು, ಊರಿಗೆ ಹೋಗುವ ಮಾರ್ಗ ಮಧ್ಯದಲ್ಲಿ, ಅಂದರೆ ಚನ್ನರಾಯಪಟ್ಟಣದಲ್ಲಿ, ಬಸ್ಸಿಗೆ ಕೊಟ್ಟು ಆಫೀಸಿನ ಗಿರಿಗೆ ಹೇಳಿದೆ. ಮೂರು ದಿನ ಬಿಟ್ಟು ಲಂಕೇಶ್‌ಗೆ ಹೇಳಿದಾಗ "ಈಗೇಳ್ತಿಯಲ್ಲಯ್ಯ" ಎಂದರು. ಅದಕ್ಕೆ ನಾನೇನೂ ಹೇಳಲಿಲ್ಲ.

ಅವ್ವನ ಸಾವನ್ನು ಆಗ ಹಗುರವಾಗಿ ತೆಗೆದುಕೊಂಡ ನನಗೆ ಕ್ರಮೇಣ ಬೆನ್ನತ್ತಿರುವ ನೋವುಗಳು ಈಗಲೂ ಕಾಡಿಸುತ್ತವೆ. ಅವಳು ಮೂರ್ಖತನದಿಂದ ಕಾಲು ಮುರಿದುಕೊಂಡು ಮಲಗಿದಾಗ ನಾನು ಆಕೆಯನ್ನು ಸರಿಯಾಗಿ ಮಾತನಾಡಿಸಲಿಲ್ಲ, ಅವಳ ತಪ್ಪಿನ ಅರಿವಾಗಿ ನನ್ನನ್ನು ಕ್ಷಮಾದೃಷ್ಟಿಯಲ್ಲಿ ನೋಡಿದ ಯಾತನೆಯ ಕಣ್ಣು ಈಗಲೂ ಬೆನ್ನತ್ತಿವೆ. ಅವಳ ಕಾಲು ಸರಿ ಮಾಡಲು ಶಿವಮೊಗ್ಗದ ಡಾ. ಯು.ಆರ್. ಅನಿಲ್ ಮತ್ತು ಎಚ್.ಬಿ. ಶಿವರಾಂಗೆ ತೋರಿಸಿದ ಕಾಳಜಿಯ ನಂತರ ಅವ್ವನನ್ನು ನಿಗವಾಗಿ ನೋಡಿಕೊಳ್ಳಲು ಯತ್ನಿಸಿ, ಆಮೇಲೆ ಎಲ್ಲ ಜವಾಬ್ದಾರಿಯನ್ನು ಹೆಂಡತಿಗೆ ವಹಿಸಿ, ಹುಸಿ ಕಾಳಜಿ ತೋರಿದ್ದು ಇವೆಲ್ಲಾ ಒಬ್ಬನೇ ಇದ್ದಾಗ ಜೀವ ತಿನ್ನುತ್ತವೆ. ಹೋಗಿ ಅವ್ವನ ಕ್ಷಮೆ ಕೇಳಿ ಅವಳ ಮಮತೆಯೊಳಗೆ ತಲೆ ಹುದುಗಿಸೋಣವೆಂದರೆ ಈಗ ಅವಳೇ ಇಲ್ಲ.

ಬೆಟಗೇರಿ ಶಿದ್ದಪ್ಪನ ತಾಯಿ ನಮ್ಮವ್ವನಂತೆಯೇ ಇದ್ದಳು. ಬಹಳ ಹಿಂದೆ ರಾಮಗೇರಿಗೆ ಕರೆದುಕೊಂಡು ಹೋದಾಗ ಅವರವ್ವನನ್ನು ತೋರಿಸಿ "ಈಕೆ ನಮ್ಮವ್ವ. ತಲಿಮ್ಯಾಲೆ ಬುಟ್ಟಿ ಹೊತ್ತು ರೊಟ್ಟಿ ತಿನಕೋತ ಹೊಲಕೊಂಟಲಪ್ಪ ಅಂದ್ರ ಯಾವ ಬಿಸಿಲು, ಗಾಳಿ, ಮಳಿ ಏನೂ ಮಾಡಕ್ಕಾಗೂದಿಲ್ಲ, ಸೊಸಿ ಬಂದಾರ ಇನ್ನಾದ್ರು ಆರಾಮಿರು ಅಂದ್ರ ಕೇಳೂದಿಲ್ಲೀಕೆ" ಎಂದ.

"ಸೊಸಿ ಬಂದಾರಂತೇಳಿ ಮನಿ ಹಿಡದು ಕುಂದ್ರಕ್ಕಾಕ್ಯತೇನಪ್ಪ?" ಎಂದು ಪ್ರಶ್ನಿಸಿದ್ದಳು ಆ ತಾಯಿ. ನಂತರ ಬೆಟಗೇರಿ ಅಪ್ಪ ಬಂದ.

"ಲೇ ಗೌಡ, ನಮ್ಮಪ್ಪದಾನ್ಲೆ ಇವ" ಎಂದ. ನಾನು ನಮಸ್ಕಾರ ಮಾಡಿದೆ. ಅವರೂ 'ನಮಸ್ಕಾರ್ರಿ ಸರ" ಎಂದರು.

"ಹ್ಯಾಂಗದಾನ್ಲೆ ಗೌಡ ಅಜ್ಜ? ಈಗ ಕನ್ನಿ ನೋಡಿ ಲಗ್ನಾಗಪ್ಪ ಅಂದ್ರ ಆಗಾಕ ತಯಾರಿದಾನಿವ" ಎಂದು ಬೆಟಗೇರಿ ನಕ್ಕ

"ನೀ ಸಾಕವುನಿದ್ರ ನಾ ಆಗುವಲ್ಯನಾಕಪ" ಎಂದ ಅಪ್ಪ,

"ನನಗೆ ಈ ತಂದೆಮಕ್ಕಳ ಸಂವಾದ ಬಹಳ ಹಿಡಿಸಿತು. ಎಲ್ಲ ತಂದೆ ಮಕ್ಕಳು ಹೀಗೆ ಸ್ನೇಹಿತರಂತಿದ್ದರೆ ಎಷ್ಟು ಚೆಂದ ಅಂದುಕೊಳ್ಳುವಾಗ "ನಮ್ಮ ಸೊಸಿ ಸಲುವಾಗಿ ಇವುನ್ನ ಸಯಿಸಕೊಂಡದಿವಿ ಸರ" ಎಂದ ಅಪ್ಪ,

ಇದಕ್ಕಿಂತ ಮೊದಲಿಗೇ ನನಗೆ ಬೆಟಗೇರಿ ವೃತ್ತಾಂತ ಪೂರಾ ಗೊತ್ತಿತ್ತು,

ಆತ ಗ್ರಂಥಾಲಯ ಇಲಾಖೆಯ ಟ್ರೈನಿಂಗ್ ಮಾಡುವಾಗ ಸೌಮ್ಯ ಸ್ವಭಾವದ ಹೆಣ್ಣುಮಗಳೊಬ್ಬಳನ್ನು ನೋಡುತ್ತಿದ್ದ ಎದೆಗೆ ಪುಸ್ತಕ ಅವುಚಿಕೊಂಡು ತಾನಾಯಿತು, ತನ್ನ ಓದಾಯಿತು ಎನ್ನುವಂತಿದ್ದ ಆ ಹೆಣ್ಣುಮಗಳನ್ನು ಭೇಟಿಯಾದ ಬೆಟಗೇರಿ "ಮೇಡಂ, ನೀವು ನನ್ನ ಮನಸ್ಸಿಗೆ ಭಾಳ ಹಿಡಿಸೀರಿ. ಲಗ್ನಾಕ್ಕರೇನ?" ಎಂದ. ಹೀಗೆ ನೇರಾ ನೇರ ಬಂದು ಕೇಳಿದ ವ್ಯಕ್ತಿಯ ಯಾವ ಹಿಂದೂಮುಂದೂ ಗೊತ್ತಿಲ್ಲದ ಆಕೆ "ನಮ್ಮ ತಂದೆ ಕೇಳಿ" ಎಂದು ಮುಂದೆ ಹೋದಳು. ನಿರಾಶನಾಗದ ಬೆಟಗೇರಿ ಆಕೆಯ ತಂದೆಯನ್ನು ಪತ್ತೆಹಚ್ಚಿ ಅವರ ಹತ್ತಿರ ಹೋಗಿ ಪರಿಚಯಿಸಿಕೊಂಡು,

"ನಿಮ್ಮ ಮಗಳು ನನಗಾ ಬಾಳ ಹಿಡಿಸ್ಯಾಳ್ರಿ. ನಾನು ಆಕಿನ ಲಗ್ನಾಗಬೇಕು ಅಂತ ಮಾಡೀನಿ. ಒಪ್ಪಿಗೆ ಕೊಡ್ರಿ ಸರ" ಅಂದ.

ಈ ಸೀದಾಸಾದಾ ಶಿದ್ದಪ್ಪನ ನಡವಳಿಕೆ ಮೆಚ್ಚಿದ ಹುಡುಗಿ ತಂದೆ ಕುಲಗೋತ್ರ ವಿಚಾರಿಸಿದಾಗ ಅಚ್ಚರಿ ಕಾದಿತ್ತು! ಅವರು ಮೇಲುಜಾತಿ. ಬೆಟಗೇರಿ ಕೆಳಜಾತಿ. ಗೊಂದಲಕ್ಕೆ ಬಿದ್ದ ಅಪ್ಪ "ನಿಮ್ಮ ತಂದೆ, ತಾಯಿ ಕೇಳಿಕೊಂಡು ಒಪ್ಪಿಗೆ ತಗೊಂಡು ಬಾರಪ್ಪ" ಎಂದು ಕಳಿಸಿದರು. ಊರಿಗೆ ಹೋದ ಬೆಟಗೇರಿ ಅಪ್ಪನನ್ನು ಭೇಟಿಯಾಗಿ "ನಾ ಲಗ್ನಾಕ್ನೊ ಯಪ್ಪ" ಎಂದ.

"ಆಗಪ್ಪ ನಿನ್ನ ಸಲುವಾಗಿ ನಿನ್ನ ಅಕ್ಕನ ಮಗಳು ಮನಿಯಾಗೆ ಅದಾಳಲ್ಲ" ಎಂದ.

"ನಾ ಬ್ಯಾರೆ ಕನ್ನಿ ನೋಡಿನಿ."

"ಬ್ಯಾರೆ ಕನ್ನಿ ನೋಡಿದವ ನನ್ನನ್ನ ಯದಕ ಸಮಂತ್ರ ಕೇಳಾಕ ಬಂದಿಯೋ ಯಪ್ಪ" ಎಂದು ಮುಖ ತಿರುವಿದ.

ನಂತರ ಬೆಟಗೇರಿ ಅವ್ವನ ಬಳಿಗೋಗಿ "ನಾ ಲಗ್ನಾಕ್ನೇ ಯವ್ವಾ" ಎಂದ.

"ಆಗಪ್ಪ ನಿನ್ನಕ್ಕನ ಮಗಳ ತಂದು ಮನಿಯಾಗೇ ಸಾಕಿದ್ದಿವಲ್ಲ, ಆಗೊ ನನ್ನ ಮಗನ" ಎಂದಳು.

"ನಾ ಬ್ಯಾರೆ ಕನ್ನಿ ನೋಡಿಕೊಂಡು ಬಂದೀನಿ" ಎಂದ ಬೆಟಗೇರಿ.

ಅವ್ವ ಮರು ಮಾತನಾಡದೆ ಎದ್ದು ಹೋದಳು. ಇದಕ್ಕೇನೂ ಕೇರ್ ಮಾಡದ ಬೆಟಗೇರಿ ನೇರ ತನ್ನ ಹುಡುಗಿಯ ಅಪ್ಪನ ಬಳಿ ಬಂದು,

"ಸಾರ್ ನಮ್ಮನಿಗೆ ನಾನೇ ಹಿರೇತ್ನವ. ನಾ ಹೇಳಿದ್ರ ಮುಗಿತು. ನಮ್ಮ ತಂದಿತಾಯಿ ಬಗ್ಗೆ ತಲಿ ಕೆಡಿಸಿಗಳಾಕ ಹೋಗಬ್ಯಾಡ್ರಿ. ನಾ ನೌಕರಿ ಮ್ಯಾಗದೀನಿ. ನಿಮ್ಮ ಮಗಳ ಲಗ್ನಾಗಿ ಬ್ಯಾರಿ ಮನಿ ಮಾಡಿ ನನ್ನ ಕೂಡಿ ಕರಕಂಡೋಗವ. ನಿಮ್ಮ ಮಗಳ ಕೊಡ್ರಿ" ಅಂದ.

ಹೆಣ್ಣಿನ ತಂದೆಗೆ ಹುಡುಗ ಸ್ವಚ್ಛ ಮನಸ್ಸಿನ ಧೀರನಂತೆ ಕಂಡಿದ್ದರಿಂದ "ಆಯ್ತು ಲಗ್ನ ಮಾಡಿಕೊಳಕ್ಕೆ ತಯಾರಾಗಿ" ಎಂದು ಒಪ್ಪಿಗೆ ಕೊಟ್ಟು ಕಳಿಸಿದರು.

ಬೆಟಗೇರಿ ಮತ್ತೆ ಅಪ್ಪನ ಬಳಿಗೋಗಿ "ಲೇ ಯಪ್ಪ ಯಲ್ಲ ತೀರಮಾನಾತು. ನಾ ಲಗ್ನಾಕ್ನಿ ರೊಕ್ಕ ಕೊಡು" ಎಂದ.

"ಮನಿಗೆ ನೀನೇ ಹಿರೇಮಗದಿ. ಮತ್ತ ಹೊಳ್ಳಿ ರೊಕ್ಕ ಕೇಳಾಕ ಬಂದಿಯೇನ. ಲಗ್ನ ಮಾಡಿಕೊಂಡು ಬಾ ನೋಡುನು. ನೀ ಬಂದ್ಯಪ್ಪ ಅಂದ್ರ ನಮ್ಮ ಸೊಸಿ ತುಂಬಿಸಿಗಳೂದು ನಮ್ಮ ಜವಾಬ್ದಾರೈತಿ" ಎಂದು ಮುಖ್ಯ ಜವಾಬ್ದಾರಿಯಿಂದ ಅಪ್ಪ ತಪ್ಪಿಸಿಕೊಳ್ಳುವಂತೆ ಕಂಡ. ಆಗ ಬೆಟಗೇರಿ "ಹಾಂಗಾದ್ರ ನೀ ಲಗ್ನಕ್ಕ ಬರೂದಿಲನ್ನ?" ಎಂದ.

"ಇಲ್ಲಪ ನಾ ಬರೂದಿಲ್ಲ, ಆದ್ರ ಮನಿಗೆ ಬಂದ ಸೊಸಿನ ಕರಕೊಂತಿವಿ" ಎಂದ. ಅಂತೂ ಬೆಟಗೇರಿ ಮದುವೆಯಾಯ್ತು, ಹೆಂಡತಿ ಕರೆದುಕೊಂಡು ಊರಿಗೆ ಹೋದ. ಅಪ್ಪನ ಸಂತೋಷ ಹೇಳತೀರದು. ಸಂಕ್ರಾಂತಿಯ ಉಜ್ಜನಂತೆ, ಸಂಭ್ರಮ ಪಡತೊಡಗಿದ. ಇದನ್ನು ಗಮನಿಸಿದ ಬೆಟಗೇರಿ,

"ಅಲ್ಲೊ ಯಪ್ಪಾ, ಹಿಂಗಾಡವ ಲಗ್ನಕ್ಕೆ ನೀ ಯದಕಬರಲಿಲ್ಲ?" ಎಂದ.

"ಅಲ್ಲೀ ಪೊಲೀಸರು ಬರತರ ಅಂತ ಹೇಳಿದ್ರು, ಅದಕ ನಾ ಬರಲಿಲ್ಲ ನೋಡು."

"ಆಕಸ್ಮಾತ್ ಪೊಲೀಸರು ಹಿಡಕಂಡೋಗಿದ್ರ ಏನು ಮಾಡತಿದ್ದಿ ನೀ?"

"ನಾವನತರ ಒಂದೀಟು ತಪ್ಪು ಮಾಡಿಲ್ರಪ. ನಮ್ಮ ಮಗ ಮಾಡಿದ್ರ ಹಿಡಕೊಂಡೋಗ್ರಲಾ ಅಂತಿದ್ನಿ" ಎಂದ. ಇದನ್ನು ಕೇಳಿ ಬಿದ್ದುಬಿದ್ದು ನಕ್ಕ ಬೆಟಗೇರಿ,



"ಏನ ಬೆರಿಕದಿಯೋ ಯಪ್ಪ, ಮಗ ಜೈಲಿಗೆ ಹೋಗುವಲ್ಲನ್ಯಾಕೆ ಒಟ್ಟ ನೀ ಪೊಲೀಸರಿಂದ ತಪಿಸಿಗೋಬೇಕಂತೀಯೇನ" ಎಂದು ಅಪ್ಪನ ಮುಗ್ಧತೆ ಮತ್ತು ನರಿಬುದ್ಧಿಯನ್ನು ಅಣಕಿಸಿ ನಕ್ಕಿದ್ದ.

ಹಿಂದೊಮ್ಮೆ ರಾಮಗೇರಿಗೆ ಹೋಗಿದ್ದಾಗ, ಈ ಬೆಟಗೇರಿ ಕಾಂಗ್ರೆಸ್ "ಕಾರ್ಯಕರ್ತನಾದ ನನ್ನ ತಮ್ಮನ ಸಂದರ್ಶನ ಮಾಡಿ ಲಂಕೇಶ್ ಪತ್ರಿಕೆಲಿ ಹಾಕೊ ಗೌಡ. ಅದಕಾ ನಿನ್ನ ಕರಕೊಂಡು ಬಂದಿದ್ದು" ಎಂದಿದ್ದ!! ಅವನ ಮುಗ್ಧತೆಗೆ ನೋವು ಮಾಡದೆ ಮೆಣಸಿನಕಾಯಿ ತುಂಬಿದ್ದ ಮನೆಯಲ್ಲೇ ಕೂರಿಸಿಕೊಂಡು ಅವನ ತಮ್ಮನನ್ನು ಮಾತನಾಡಿಸಿ ಬಂದಿದ್ದೆ. ಮೆಣಸಿನಕಾಯಿ ಘಾಟಿನಿಂದ ನನ್ನ ಮುಸುಡಿ ಹಣ್ಣುಗೋತಿಯ ಮುಸುಡಿಯಂತಾದರೆ ವರ್ಷದ ಕೂಸುಗಳೆಲ್ಲಾ ಆರಾಮವಾಗಿ ಮಲಗಿದ್ದವು.

ರಾಮಗೇರಿಗೆ ಹೋಗುತ್ತಾ ಈ ಎಲ್ಲ ನೆನಪು ಬಿಚ್ಚಿಕೊಂಡವು. ಹಾವೇರಿ ಸೀಮೆಯನ್ನು ನಾನು ಬೇಸಿಗೆಯಲ್ಲಿ ನೋಡಿ ದಂಗು ಬಡಿದಿದ್ದೆ. ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಎರೆಮಣ್ಣಿನ ಮರುಭೂಮಿಯಂತೆ ಕಂಡಿತ್ತು, ಆದರೆ ಈಗ ತರಹಾವರಿಯ ಹಸಿರು ಹೊಲಗಳು. ಹತ್ತಿ, ಜೋಳ, ಹೆಸರು, ಶೇಂಗಾ, ತೊಗರಿ... ಒಟ್ಟಿನಲ್ಲಿ ಗಾಳಿಗೆ ಅಲೆ ಸೃಷ್ಟಿ ಮಾಡಿಕೊಂಡು ಕಣ್ಣಿಗೆ ತಂಪು ನೀಡುವ ಹಸಿರು ಹೊಲಗಳು. ನಮ್ಮಲ್ಲಿ ಎರಡು ಮೂರು ಕಿಲೋಮೀಟರ್‌ಗೊಂದರಂತೆ ಊರು ಸಿಕ್ಕರೆ ಇಲ್ಲಿ ಊರಿನ ಸುಳಿವೇ ಇಲ್ಲ, ತಮ್ಮ ಹೊಲದಲ್ಲಿ ಕಳೆ ಹುಡುಕುತ್ತಾ ತಿರುಗಾಡುವ ರೈತರು ಮಿಕ ಹುಡುಕುವ ಮಾಸಲು ರೆಕ್ಕೆಯ ಕೊಕ್ಕರೆಯಂತೆ ಗೋಚರಿಸುತ್ತಿದ್ದರು. ಈ ರೂಪದಲ್ಲಿ ಬೆಳೆ ಬೆಳೆಯುವ ರೈತ ಇನ್ನೂ ಏಕೆ ಉದ್ಧಾರವಾಗಿಲ್ಲಾ, ಅವನ ಕುಟುಂಬದ ವೇಷಭೂಷಣ, ಅವನ ಮನೆ, ಹಟ್ಟಿ ನೋಡಿದರೆ ನೂರಾರು ಎಕರೆ ಭೂಮಿಯೊಡೆಯನೀತ ಎಂಬುದನ್ನು ನಂಬಲು ಸಾಧ್ಯವೇ ಇಲ್ಲ, ಬೀಡ ಅಂಗಡಿ ಇಟ್ಟವನು ಬೈಕಿನಲ್ಲಿ ಓಡಾಡುತ್ತಾನೆ. ಆದರೆ ಈ ರೈತನ ಗಾಡಿ ನೋಡಿದರೆ ಶವ ಸಾಗಿಸಲೂ ಯೋಗ್ಯವಿಲ್ಲದಂತೆ ಕಾಣುತ್ತದೆ.

ಹೈವೇ ಪಕ್ಕದ ಎರಡೂ ಬದಿಯಲ್ಲಿ ಸಮುದ್ರದಂತೆ ಕಾಣುತ್ತಿದ್ದ ಹಸಿರು ಅಲೆಗಳ ನಡುವೆ ರಾಮಗೇರಿ ಬಂದಿದ್ದೇ ಗೊತ್ತಾಗಲಿಲ್ಲ, ಸಾವಿನ ಮನೆ ಎದುರಿನ ಮರದ ಕೆಳಗೆ ಬೆಂಕಿ ಹಾಕಿ ತಮಟೆ, ಅಸಾದಿ, ಹಲಗೆ ಬಡಿಯುತ್ತಿದ್ದರು. ಮನೆಯೊಳಗಡೆ ಬೆಟಗೇರಿ ಶಿದ್ದಪ್ಪನ ತಾಯಿಯನ್ನು ಕೂರಿಸಿ ಕುತ್ತಿಗೆಗೆ ದಾರ ಕಟ್ಟಿ ಅದನ್ನು ಜಂತಿಗೆ ಬಗಿದಿದ್ದರು. ತಲೆಯ ಮೇಲೊಂದು ಪುಟ್ಟ ಕಳಸ, ಅಗಲವಾದ ಮೂಗುತಿ, ಬಾಯಿ, ಕಣ್ಣು ಸಹಜವಾಗಿ ಮುಚ್ಚಿದಂತೆ ಕಂಡಿದ್ದ... ಶವದಂತೆ ಕಾಣದೆ ತಪಸ್ಸಿಗೆ ಕುಳಿತ ರೈತ ಮಹಿಳೆಯಂತೆ ಕಂಡ ಆ ತಾಯಿ... ಸುತ್ತ ನೂರಾರು ಹಾರಗಳ ರಾಶಿಯೇ ಇತ್ತು, ಆಕೆಯ ಎದುರು ಕ... ಮಹಿಳೆಯರೆಲ್ಲಾ ಇಳಕಲ್ ಸೀರೆಯುಟ್ಟು ಒಂದೇ ತರ ಕಾಣಿಸಿದ್ದ... ತೀರಿಕೊಂಡವಳ ಅಸಂಖ್ಯಾತ ಪುತ್ರಿಯರಂತೆ ಕಂಡರು. ಒಬ್ಬಳು ಮಾತ್ರ ಆಕೆ... ಗುಣಗಾನ ಮಾಡುತ್ತ, ಆಕೆಯ ಗಲ್ಲ ಸವರುತ್ತ ರೋದಿಸುತ್ತಿದ್ದಳು.

ನಾನು ಇದೇ ಮೊದಲು ಈ ಪ್ರಾಂತ್ಯದ ಸಾವಿನ ಸಂಸ್ಕಾರಕ್ಕೆ ಬಂದವನಾದ್ದ... ಎಲ್ಲವನ್ನು ಕುತೂಹಲದಿಂದ ನೋಡತೊಡಗಿದೆ. ಏಕೆಂದರೆ ನಮ್ಮ ಕಡೆ... ಶವಸಂಸ್ಕಾರ ಬಹಳ ಭಯಹುಟ್ಟಿಸುತ್ತದೆ. ಸತ್ತವರನ್ನು ಕಾಲುಮಡಚಿ ಮಲ... ಆತನ ಬಾಯಿ, ಮೂಗಿಗೆಲ್ಲಾ ಹತ್ತಿ ಗಿಡಿದು, ಇಲ್ಲ ಎಲೆಯಡಿಕೆ ತು... ಹೊಟ್ಟೆಯ ಮೇಲೆರಡು ಚೌಕಾರ್ಸಿ ಹಾರವನ್ನು ಮಡಗಿ, ಈ ಲೋಕದಿ... ಚುಕ್ತವಾದವರ ಸನಿಹಕ್ಕಿಂತ ದೂರವಾಗಿ ಕುಳಿತು ಸಾವಿನ ಭೀಕರತೆಯ... ಮನದಟ್ಟು ಮಾಡಿಸಲು ಹಟತೊಟ್ಟವರಂತೆ ಕಾಣುತ್ತಾರೆ. ಆ ಹಸಿಬಿದಿ... ಚಟ್ಟ, ಅದರ ಮೇಲೆ ಶವ ಮಲಗಿಸುವ ವೈಖರಿ, ಹೊತ್ತುಕೊಂಡು ಹೋಗು... ಇವರ ನಡವಳಿಕೆ ಮತ್ತು ಬದುಕನ್ನು ಸುತರಾಂ ಒಪ್ಪದೆ ತಲೆಯಲ್ಲಾಡಿಸ... ಶವ, ಅಂತೂ ನಮ್ಮವರ ಎಲ್ಲಾ ಚಟುವಟಿಕೆಗಳು ಸಾಯಲು ಹೆದರಿಸು...

ಆದರೆ ಇಲ್ಲಿ ಅಂತಹ ಯಾವ ದೃಶ್ಯಗಳೂ ಇರಲಿಲ್ಲ, ಸಂಸ್ಕಾರ... ಶೃಂಗಾರಗೊಂಡ ಪಲ್ಲಕ್ಕಿ ನೋಡಿದರೆ ನಮ್ಮ ಸಿರಿಗೆರೆ, ಬಾಳೆಹೊನ್ನೂ... ಸ್ವಾಮಿಗಳ ಪಲ್ಲಕ್ಕಿಗಳು ನಾಚಬೇಕು. ಅಷ್ಟು ಕಲಾತ್ಮಕವಾಗಿ ಹೂವಿನ... ಶೃಂಗರಿಸಿದ್ದ ಪಲ್ಲಕ್ಕಿಯನ್ನು ನೋಡಿ ಅದರ ಒಳಗೆ ಹೋಗಿ ಕೂರಬೇಕೆನಿಸಿ...

ನಮ್ಮಲ್ಲಿ ನಾಲ್ಕೇ ಜನರು ಹೊತ್ತು ಸಾಗಿದರೆ ಇಲ್ಲಿ ಅಂತಹ ಲೆಕ್ಕಾಚಾರವಿರಲ... ಯಾರು ಬೇಕಾದರೂ ಹೋಗಿ ಹೆಗಲು ಕೊಡುತ್ತಿದ್ದರು. ಶವಯಾತ್ರೆ ಹೊರಟ... ನೋಡಿದರೆ, ಇಡೀ ಊರೇ ಗುಳೆ ಹೊರಟಿದೆಯೇನೊ ಎನ್ನುವಂತೆ ಹ... ಹೊಲಗಳ ನಡುವೆ ಎರಡು ಫರ್ಲಾಂಗ್ ದೂರದವರೆಗೂ ಜನ ಸಾಲಿಕ್ಕಿದ್ದ... ಈ ವೃದ್ಧ ಮಹಿಳೆಯ ಅಂತಿಮ ಯಾತ್ರೆಗೆ ಇಷ್ಟೊಂದು ಜನಗಳೆ ಎ... ಅಚ್ಚರಿಯಿಂದ ಕೇಳಿದಾಗ "ನಮ್ಮ ಕಡಿ ಹಾಂಗೇರಿ. ದರವ್ರೊಬ್ಬರು ಮತ್ತದರವ್ರೊ... ಜಾತಿಮಂದಿನೂ ಬರತಾರ್ರಿ" ಎಂದರು. ಸತ್ತವರು ವೈರಿಯಾಗಿದ್ದರೂ ಕ... ಶವಸಂಸ್ಕಾರಕ್ಕೆ ಬರುತ್ತಾರಂತೆ. ಲಂಕೇಶ್ ತೀರಿಕೊಂಡಾಗ ಅವರ ವೈರಿ ಚ... ಬಂದರು. ಆದರೆ ತೇಜಸ್ವಿ ಬರಲಿಲ್ಲ.

ನಮ್ಮಲ್ಲಂತೂ ಕಾಂಗ್ರೆಸನವನು ಸತ್ತರೆ ಜನತಾದಳದವನು ಅತ್ತ ಸುಳಿಯುವು... ನನ್ನ ಗೆಳೆಯ ರುದ್ರೇಗೌಡ ತೀರಿಕೊಂಡಾಗ (ಈತನ ಬಗ್ಗೆ ಹಿಂದೆ ಪತ್ರಿಕೆಯ... ಬರೆದಿದ್ದೇನೆ) ಆತನ ತೋಟದಲ್ಲಿ ನಡೆಯ... ಶವಸಂಸ್ಕಾರದ ವೇಳೆ ಅದೇ ದಾರಿಯಲ್ಲಿ ವಾಸವಾ... ಅಂದಿನ ಶಾಸಕ ಚಲುವರಾಯಸ್ವಾಮಿ ಬಂದ. ಯ... ತೀರಿಕೊಂಡರು ಎಂಬ ಸುದ್ದಿ ಕೇಳಿ ಹಾಗೆ... ಹೋದ. ಇದರಿಂದ ಕ್ರೋದಗೊಂಡ ಜನ ... ನನ್ನ ಮಗೇನು ಇಲ್ಲಿದ್ದನೆ. ಅವನ ದುರಾಂ... ನೋಡು. ಬರ್ಲಿ ಈ ಸತಿ ಓಟು ಕೇಳಕ್ಕೆ" ಎ... ಶಪಥಗ್ಯದರು. ಊರು ಉಪಕಾರಿ ಬಲ್ಲದೆ, ... ಶೃಂಗಾರ ಬಲ್ಲದೆ ಎಂಬ ಗಾದೆ ನಮ್ಮಲ್ಲಿ ಜನಪ್ರಿ... ವಾಗಿದೆ. "ಅವುನೇನು ಎದ್ದು ಮಾತಾಡಿಸ್ತನೆ. ಹೋ... ಬುಡತ್ತಗೆ" ಎಂದು ತಮ್ಮ ಕ್ಷುದ್ರ ಕೆಲಸಗ... ತೊಡಗುವ ಜನರೇ ಜಾಸ್ತಿ ನಮ್ಮಲ್ಲಿ.

ಸಾವಿಗೆ ಹಿಡಿಯಷ್ಟು ಮಂದಿ ಬಂದರೆ ತಿ... ಹೊರೆಯಷ್ಟು ಮಂದಿ ಬರುತ್ತಾರೆ. ನಮ್ಮ... ಶವಸಂಸ್ಕಾರಕ್ಕೆ ಬಂದವರನ್ನು ಎಣಿಸಿದರೆ ಐವ... ಮಂದಿ ಇದ್ದರೇನೊ. ಅದೇ ತಿಥಿಗೆ ಬರೋ... ಎಂಟುನೂರು ಮಂದಿ. ಇನ್ನು ಮುಂದೆ ನ... ಕುಟುಂಬದಲ್ಲಿ ಯಾರೇ ಸತ್ತರೂ ಶವಸಂಸ್ಕಾ... ಬಂದವರ ಹೆಸರು ಬರೆದುಕೊಂಡು, ಸಾಧ್ಯವಾ... ವಿಡಿಯೋ ಮಾಡಿಸಿ, ಅಷ್ಟೇ ಜನರಿಗೆ ತಿಥಿಯ... ಹಾಕಬೇಕೆಂಬ ಜ್ಞಾನೋದಯ ನನಗೆ ದೂ... ರಾಮಗೇರಿಯ ಹೊಲಮಾಳದಲ್ಲಿ ಹೊಳೆಯಿತು. ಏಕೆಂದರೆ ಸತ್ತವರ ... ಮಾಡಿಯೇ ಹಾಳಾದ ಮನೆಗಳನ್ನು ನೋಡಿದ್ದೇನೆ. ತಿಥಿ ಮಾಡಿ ಅಳ... ಉಣ್ಣುವುದನ್ನು ನೆನೆಸಿಕೊಂಡರೆ ಈ ತಿಥಿಗಳನ್ನು ಮೊದಲು ನಿಲ್ಲಿಸಬೇಕೆನ್ನಿಸು... ಅದರ ಮೊದಲ ಹಂತವೆ ಶವಸಂಸ್ಕಾರಕ್ಕೆ ಬಂದವರಿಗೆ ಮಾತ್ರ ಊಟ ಹಾಕುವ... ಇದನ್ನ ಕೂಡ ಗುಟ್ಟಾಗಿ ಮಾಡಬೇಕಷ್ಟೇ!


ಹಸಿರು ಹೊಲಗಳ ನಡುವೆ ಶವಕ್ಕೆ ಬೆಂಕಿ ಕೊಟ್ಟ ನಂತರ ಅದಕ್ಕೆ ... ತಿರುಗಿಸಿ, ಬೆಳೆದ ಹೊಲದಲ್ಲಿ ಸುತ್ತಾ ಕುಳಿತು ಕಾರ್ಯ ಮಾಡಿದ ಮುಖಂ... ಸಂಬಂಧಪಟ್ಟವರಿಗೆ ಬಟವಾಡೆ ಮಾಡಲು ಶುರು ಮಾಡಿದರು. ಅ... ರಾತ್ರಿಯೆಲ್ಲಾ ತಮಟೆ ಹಲಗೆ ಬಡಿದವರು, ಸೌದೆ ಜೋಡಿಸಿದವರು, ... ಬೆಂಕಿ ಉರಿಸುತ್ತಿರುವವರಿಗೆಲ್ಲಾ ಒಂದೊಂದು ಚಿಕ್ಕ ತಂಬಿಗೆ ಜೊತೆ ... ಕೊಡತೊಡಗಿದರು. ಆಗ ಒಬ್ಬ ಕಟ್ಟುಮಸ್ತಾದ ಆಳು "ನಾ ಮನಿ ಮಾದಿಗ... ನನಿಗೆ ಜಾಸ್ತಿ ರೊಕ್ಕ ಕೊಡ್ರಪ್ಪ" ಎಂದ. ನನಗೆ ಅಚ್ಚರಿಯಾಗಿ "ಮನೆ ಮಾ... ಅಂದ್ರೇನು?" ಎಂದೆ. ಒಬ್ಬ ಹಿರಿಯರು "ಮನಿ ಮಾದಿಗ ಅಂದ್ರ ಮನಿಯ... ಎತ್ತು, ಕರ, ಕತ್ತಿ ಸತ್ತಾಗ ಬಂದು ತುಗಂಡು ಹೋಗಾಂವ. ಇನ್ನು ಸ... ತಗಿಯವ ಬ್ಯಾರಿ ಇರತನು. ಅವ ಹೊಲೆಯರ ಪೈಕಿ" ಎಂದರು. ಈ ಪ... ಈಗಲೂ ಇದಿಯಾ ಅಂದೆ. "ಕಡಿಮ್ಯಾಗೇತಿ" ಅಂದ್ರು. ಕನಕದಾಸರು ಕ... ತಮ್ಮನ್ನು ಮನೆಯ ಮಾದಿಗ ದಾಸ ಎಂದು ಕರೆದುಕೊಳ್ಳುತ್ತಾರೆ. ಅಂದರೆ ಶ್ರೇಣೀಕೃತ ಸಮಾಜದ ಕಟ್ಟಕಡೆಯವನೇ ಮಾದಿಗ.

ಕುವೆಂಪು ಯೂನಿವರ್ಸಿಟಿಯಲ್ಲಿನ ಕೆಲವು ಮೇಧಾವಿ ಗೆಳೆಯರು ಬೆಲ್ಜಿ... ಬಾಲಗಂಗಾಧರನೊಟ್ಟಿಗೆ ಸೇರಿಕೊಂಡು, ನಮ್ಮಲ್ಲಿ ಜಾತಿ ಒ... ವ್ಯವಸ್ಥೆಯಾಗಿರಲಿಲ್ಲ, ಶ್ರೇಣೀಕರಣವೂ ಇರಲಿಲ್ಲ, ಎಲ್ಲರೂ ತಮ್ಮ ತ... ಜಾಗದಲ್ಲಿ ತಮ್ಮ ಕೈಲಾದ ಕೆಲಸ ಮಾಡಿಕೊಂಡು ಸುಖವಾಗೇ ಇದ್ದರು... ಹಾಳು ಕ್ರಿಶ್ಚಿಯನ್ ಮಿಷನರಿಗಳು ಬಂದು ಎಲ್ಲವನ್ನು ಹಾಳುಮಾಡಿ... ಎಂದು ಈ ದೇಶದ ಪುರೋಹಿತಶಾಹಿಗಳನ್ನು ಅವರು ನಡೆಸಿದ ಕೃತ್ಯಗಳ... ಪಾರುಮಾಡಲು ಹೆಣಗುತ್ತಿದ್ದಾರೆ. ಅಂತವರೆಲ್ಲಾ ಸ್ವಲ್ಪ ಇಂತಹ ಹಳ್ಳಿ ಕ... ಬಂದರೆ ಒಳ್ಳೆಯದು ಎಂಬ ಸಲಹೆ ಕೊಡುವ ಆಲೋಚನೆಯಿಂದ ಹೊರಡು... ಸ್ಥಳದಲ್ಲೇ ತಿಥಿ ಕಾರ್ಡು ಕೊಟ್ಟರು. "ತಿಥಿಗೆ ಬರಲ್ಲ, ನನ್ನ ತಿಥಿಗೂ ಕ... ಯಾರಿಗೂ ಬರಲು ಹೇಳಲ್ಲ" ಎಂದು ಬೆಟಗೇರಿ ಶಿದ್ದಪ್ಪನಿಗೆ ಹೇಳಿ ಬ...

...ಡೂರಪ್ಪನ್ನ ನೈನಿಸಿಗಂಡೇಟಿಗೆ ನಗು ಬತ್ತದೆ ಕಣಕ್ಕ!

...ದೇಶದಲ್ಲಿ ಏನೇನೋ ನಡೆಯುತ್ತಿದೆ, ಅದೇನು ...ಂದೇ ಖಚಿತವಾಗಿ ತಿಳಿಯುತ್ತಿಲ್ಲವಲ್ಲಾ ಎಂಬ ...ದಲಕ್ಕೆ ಬಿದ್ದ ಕಾಳಮಾವ ಸೀರನನ್ನು ಕುರಿತು,

"ಅದೇನ್ಲ ಗಾಂಧಿಕಾಲದ ಗಲಾಟಿ ...ಯಿದ್ದತಂತಲ್ಲಾ" ಎಂದ.



...ಾಳ್ಲಿ ಸಂತೋಸ್ಟಗಡೆ ಇದ್ದಲ್ಲಣ್ಣಾ, ಅವುನು ಎಡೂರಪ್ಪ ...ದ್ಯಲ್ಲ ತೋರಿಸಿ ಮನಿಗೋಗಂಗೆ ಮಾಡಿದನಲ್ಲಾ, ...ಕ್ಯಲಸವ ಡೆಲ್ಲಿಯವರೂ ಸುರುಮಾಡಿದ್ದರಂತೆ.ಅಲ್ಲೂ ... ಇವುನಂಥೋನು ಅಣ್ಣಾ ಹಜಾರೆ ಅಂತ ಇದ್ದನಂತೆ. ...ತ್ಯಲ್ಲ ಸೇರಿಕೊಂಡು ಪ್ರಧಾನಿ ಇಳಸಕ್ಕೆ ವಂಟಿದ್ದರಂತೆ. ... ಗಲಾಟಿ" ಎಂದ ಸೀರ ಅಗ್ರಜನಿಗೆ ನಿಖರವಾದ ... ಕೊಟ್ಟಂತೆ ಬೀಡಿ ಹಚ್ಚಿದ.

"...ಅಂಗರೆ ಪ್ರಧಾನಿನೂ ಎಡೂರಪ್ಪನಂಗೆ ತಿಂದಿದ್ದನೇ?"

"...ಅವುನ ಜ್ವತೆ ಇದ್ದೊರು ತಿಂದಿದ್ದರಂತೆ. ಅದ ...ತಿಕಂಡು ಈ ಮನಮೋಹನಸಿಂಗ ಕೊತ್ತಿಯಂಗೆ ...ಮುಚಗಂಡು ಕುಂತಿದ್ನಂತೆ. ಅದೇ ತೆಪ್ಪಾಗಿ ಪಾಪ ...ಸೂ ಇಳಿಯಂಗಾಗ್ಯದೆ."

"...ವಳ್ಳೆ ಸವಾಸ ಮಾಡಬೇಕು ಅನ್ನದು ಇದಕೆ ನೋಡು" ... ಕಾಳಮಾವ ಪ್ರಧಾನಿಗೇ ಬುದ್ಧಿ ಹೇಳುವ ಸಮಯಕ್ಕೆ ...ಮ್ಮ ಮತ್ತು ಉಗ್ರಿ ಬಂದರು. ಸೀರನ ಬುದ್ಧಿವಂತಿಕೆ ...ದ್ದ ಕಾಳಮಾವ,

"...ಏನ್ಲ ಅದು ಗಲಾಟಿ ನೈದೀತಾಯಿದ್ದತಂತಲ್ಲಾ ಉಗ್ರಿ?"

"...ಈ ಕಾಂಗ್ರೆಸಿನೋರು ಹಾಳಾಗೋದ್ರು ಕಣಮಾವ. ...ಯಾ ಗಾಂಧಿ ನೋಡಿಯಾ, ಅಮೆರಿಕದ ಆಸುಪತ್ರೆಲಿ ...ಂಡವುಳೆ. ಇಲ್ಲಿ ಮನೆ ಯಜಮಾನ ಮುದುಕ. ... ಮಾತ ಯಾರು ಕೇಳ್ತಯಿಲ್ಲ, ರಾವುಲಗಾಂಧಿ ...ಡುಗ. ಇಂತ ಟೇಮಲ್ಲಿ ಅಣ್ಣಾ ಹಜಾರೆ ಗಾಂಧಿಯಾನ ...ಂಡು ಡೆಲ್ಲಿಗೋಗಿ ಭ್ರಷ್ಟಾಚಾರದ ವಿರುದ್ಧ ಉಪಾಸ ...ಬುಟ್ಟ. ಅವುನ್ನ ಅರೆಸ್ಟು ಮಾಡಿ ಜೈಲಿಗಾಕಿದ್ದೆ ... ನೋಡು ಇಡೀ ದೇಸವೆ ಹತ್ತಿಗಂಡದೆ."

"...ಸೋನಿಗಾಂಧಿ ಯಾಕ್ಲ ಅಮೆರಿಕದ ಆಸುಪತ್ರೆಲಿ ...ದ್ದಳು?" ಎಂದಳು ಜುಮ್ಮಿ.

"...ಅವುಳಿಗೆ ಆಪಲೇಷನ್ ಕಣೆ."

"...ಏನಾಪಲೇಶನ್ನು?"

"...ಇನ್ನೊಸಿದಿನೋದ್ರೆ ನೀನು ಮಾಡಿಸಿಗಬೇಕಾಯ್ತದೆ. ...ಕೋಸದ ಆಪಲೇಶನ್ನಂತೆ ಕಣೇ."

"...ಅದೇನೀಗ ಯಲ್ಲ ಹೆಂಗುಸ್ರೂ ಮಾಡಿಸಿಗತ್ತ ಅವುರೆ ..."

"ಊ ಮತ್ತೆ ಅದಿರದೇ ಮಕ್ಕಳ ಹೆರಕ್ಕೆ, ಮಕ್ಕಳೆರದು ...ೀಯ್ತು ಅಂದ್ರೆ ಅದರ ಕ್ಯಲಸೇನೂ ಇಲ್ಲ, ಅದ್ಕೆ ... ಹೆಂಗಸರ್ಗೂ ಯಲೆ ಅಡಕೆ ಚೀಲ ಯಸ್ತಂಗೆ ...ಕೋಸ ತಗದು ಯಸಿತ ಅವುರೆ."

"ಅದೇನೊ ನಿಜಬುಡು. ನಮ್ಮೂರಲ್ಲೇನು ಒಸಿ ಜನ ಮಾಡಿಸಗಂಡ್ರೆ."

"ಅಂತೂ ಅವುಳಿಲ್ಲದಕೆ ಮನೆ ನ್ಯಡಸೊ ಹಿರಿ ಸೊಸೆನೆ ಇಲ್ದಂಗಾಗ್ಯದೆ."

"ಊ ಕಣ ಮಾವ, ಅವುಳು ಬಂದು ಒಂದು ರವುಂಡ್ ಹ್ವಡದಳು ಅಂದ್ರೆ ಯಲ್ಲಾ ಗಲಾಟಿನೂ ತಣ್ಣಗಾಯ್ತದೆ. ಅಲ್ಲಿಗಂಟ ಬಿಜೆಪಿಗಳು ಅಣ್ಣಾ ಹಜಾರೆ ಮುಂದಿಟಗಂಡು ಮ್ಯರಿತರೆ."

"ಭ್ರಷ್ಟಾಚಾರಿಗಳ ವಿರುದ್ಧ ಮಾತಾಡಕ್ಕೆ ಬಿಜೆಪಿಗಳಿಗ್ಯಾವ ಹಕ್ಕಿದತೊ ಉಗ್ರಿ?" ಎಂದು ವಾಟಿಸ್ಸೆ ಬಂದ.

"ನೀನಾಂಗಂತ ಎಡೂರಪ್ಪನ ಮಾತಾಡ್ನು. 'ನನ್ನ ಇಡೀ ಜೀವನದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡಿದ್ದಿನಿ. ಮುಂದೂ ಕೂಡ ಹೋರಾಡ್ತಿನಿ' ಅಂತನೆ."

"ಅಂಗಂದಕಂಡೇ ಬೇಲ್ ತಗಳಕ್ಕೂ ಓಡಾಡ್ತನೆ. ಇದಕೇನೇಳ್ತೀ?"

"ಅಂಗರೆ ಜಾಮೀನು ಹುಡುಕ್ತ ಅವುನೆ ಅನ್ನು" ಎಂದ ಸೀರ.

"ರೆಡ್ಡಿಗಳೇನೊ ತಿರಗ ಮಂತ್ರಿಗಳಾಗಕ್ಕೆ ಮಸಲತ್ತು ಮಾಡ್ತಯಿದ್ದರಂತೆ?"

"ಅದು ತುಂಬ ಕಾಸ್ಟಲಿ ಮಸಲತ್ತು ಚಿಗಪ್ಪ, ವರಮಾಲಕ್ಷ್ಮಿ ಪೂಜೆಗೆ ಗಡಕರಿ ಕರಿಸಿ, ಐವತ್ತು ಲಕ್ಷ ರೂಪಾಯಿ, ಚಿನ್ನದ ಕಡ್ಗಕೊಟ್ಟು, ಒಂದೂವರೆ ಕೋಟಿ ರೂಪಾಯಿ ಬೆಲಿ ಕಾರು ಕೊಟ್ಟು, ಒಂದು ಸೂಟುಕೇಸು ತುಂಬ ಹಣ ಕೊಟ್ಟು ಕಳಿಸಿದ್ರು."

"ಅಯ್ಯೋ, ಅಯ್ಯೋ ನಿಜವೇನ್ಲಾ!"

"ಸುಳ್ಳಾದ್ರೆ ಅನಂತಕುಮಾರ್‌ಗೆ ಫೋನ್ ಮಾಡಿ ತಿಳಕಳಿ."

"ವರಮಾಲಕ್ಷ್ಮಿ ಪೂಜೆಗೆ ಅವುಳ್ಯಾರೊ ಕರಾವಿನ ಹಸಿನಂಗೆ ಬತ್ತಳೆ ಅಂತಿದ್ಯಲ್ಲ ಅವುಳು ಬರಲಿಲ್ವೆ?"

"ಇಲ್ಲ, ಅವುಳಿಗೆ ಅಭಾರ್ಸನ್ನಾಯ್ತಂತೆ ಅದ್ಕೆ ಬೆಡ್ ರೆಸ್ಟಲವುಳೆ."


"ವಯಸಾದ ಮ್ಯಾಲೆ ಬಸರಾಗಿದ್ಲಲ್ಲಾ ಅದ್ಕೆ ಗರ್ಭ ನಿಂತಿಲ್ಲ" ಎಂದಳು ಜುಮ್ಮಿ.

"ಇವುನ ಮಾತ ನಿಜ ಅನ್ನಕಂಡು ಕುಂತಿದ್ದಿಯಲ್ಲೆ ನೀನು. ಬಿಜೆಪಿಗಳು ಆ ಸೋನಿಯಾಗಾಂಧಿಗೆ ಉಸಾರಿ ಲ್ದೆಯಿರದ್ಕೆ ಏನೇನೊ ಅಂತರಂತೆ. ಅದ್ಕೆ ಇವುನು ಅಂಗನ್ನಕಂಡು ತಿರುಗ್ತನೆ."

"ಅದ್ಯಾಕ್ಲ ಅಂಗಾಡಿಕತ್ತಿ ನೀನು?"

"ನೋಡಕ್ಕ ಪ್ರತಿವರ್ಸ ಬಳ್ಳಾರಿಗೆ ಬಂದು ವರಮಾಲಕ್ಷ್ಮಿ ಪೂಜೆ ಮಾಡಿಕಂಡು ಸೂಟುಕೇಸು ತುಂಬ ಲಕ್ಷ್ಮಿ ತಗಂಡೋಯಿತ್ತಿದ್ಲಂತೆ. ಈ ಸುಸ್ಮಾ ಸ್ವರಾಜ್ ಸೂಟ್‌ಕೇಸ್ ತಗಂಡ ಕೂಡ್ಲೆ ಆ ಗಣಿಕಳ್ಳರ ಮಕ್ಕಳೇ ಅಂತಿದ್ಲು, ಅವು ಅಮ್ಮಾ ಅಂತಿದ್ದು. ಯಾವತ್ತು ಆ ಮುಂಡೆಮಕ್ಕಳು ಸಂತೋಷ್ ಹೆಗ್ಡೆಯವರ ಕೈಗೆ ಸಿಗಾಯ್ಕಂಡು ಖಾತೆ ಕಳಕೊಂಡ್ರೋ ಅವತ್ತು ಅವರ ಬಾಡಿಗೆ ಅವ್ವ 'ನನಗೂ ರೆಡ್ಡಿಗಳಿಗೂ ಯಾವ ಸಮಂಧನೂ ಇಲ್ಲ, ನಾನು ಬಳ್ಳಾರಿಲಿ ಚುನಾವಣೆಗೆ ನಿಂತಿದ್ದಾಗ ಅವರ ಮನೆಯಲ್ಲಿ ಬಹಿರ್ದೆಸೆ ಮಾಡಿ ಮೂತ್ರ ವಿಸರ್ಜನೆ ಮಾಡಿದ್ದು ಬುಟ್ರೆ ಇನ್ಯಾವ ಸಮಂಧನೂ ಇಲ್ಲ' ಅಂದುಬಿಟ್ಳು."

"ಅದ್ಯಾಕಂಗನ್ನಕ್ಕೋಗಿದ್ಲು?"



"ಊ ಚಿಗಪ್ಪ, ಅವುನ ಕತೆ ಬ್ಯಾಡ. ಎಲ್ಲೂ ಕೂರದಿಲ್ಲ, ಎಲ್ಲೂ ನಿಲ್ಲದಿಲ್ಲ, ಇನ್ನಾರು ತಿಂಗಳಿಗೆ ತಿರಗ ಬತ್ತಿನಿ ಅಂತನೆ. ಇನ್ನದಿನ್ನೈದು ವರ್ಸ ಬಿಜೆಪಿ ಬಡ್ಡೆಯ ಯಾರೂ ಅಲ್ಲಾಡಸಕ್ಕಾಗದಿಲ್ಲ ಅಂತನೆ. ತಿರಗ ಹಳ್ಳಿ ಮ್ಯಾಲೋಯ್ತಿನಿ ಅಂತನೆ. ನನಿಗೆ ಅವುನ್ನ ನೋಡಿಬುಟ್ರೆ ಯಂತಾ ನಗಬತ್ತದೆ ಅಂದ್ರೇ ಮನ್ನೆ ದಿನ ನಗಾಡಿ ನಗಾಡಿ ಸತ್ತೆ ಹೋಗಿದ್ದೆ."

"ಆಟೊಂತರ ಯಾಕೆ ನಕ್ಲ?" ಎಂದಳು ಜುಮ್ಮಿ.

"ಇನ್ನೇನಕ್ಕ ಮತ್ತೆ, ಇವುನ ದ್ಯಸಿಂದ ಆ ಕಟ್ಟಾ ಸುಬ್ಬ ಅವುನ ಮಗ ಜೈಲಿಗೋದ್ರು, ಕೆಲವುರು ಖಾತೆ ಕಳಕಂಡ್ರು, ರೆಡ್ಡಿ ರಾಮುಲುಗಳು ಅಧಿಕಾರ ಕಳಕಂಡ್ರು. ತಾನೂ ಕಳಕಂಡು ಹೆಲಿಕಾಪ್ಟರತ್ತಿ ಊರಿಗೊಂಟೋದ ಅತ್ತಗೆ. ಅದ್ರೆ ಅಲ್ಲೂ ಇರಕ್ಕಾಗದಿಲ್ಲ, ಎಲ್ಲಿ ಕಟ್ಟಾ ಜ್ವತೆ ಸೇರಿಕತ್ತಿನೊ ಅಂತ ಹೆದರಿ ಬೆಚ್ಚಿ ಯಂಗಾರ ಆಗ್ಲಿ ಬೇಕಾಯ್ತದೆ ಅಂತ ಬೇಲ್ ತಗತ್ತ ಕುಂತವುನೆ!"

"ಕೊಳ್ಳೆ ಹೊಡದಿರೊ ಡಕಾಯಿತ್ರ ಜೈಲ್‌ಗೋಗುವಾಗ ನನ್ನ ಸಮಂಧಿಕರು ಅಂತ ಹೇಳಕ್ಯಾಯ್ತದೇನಕ್ಕ."

"ಸರಿ. ದುಡ್ಡೀಸಗಳುವಾಗ ಗೊತ್ತಾಗಲಿಲವೆ?"

"ನಿನ್ನ ದಂಧೆ ಸಮಂಧ ನನಿಗೆಬ್ಯಾಡ, ನಿನ್ನ ದುಡ್ಡಷ್ಟೇ ಬೇಕು ಅನ್ನೊ ಗಿರಾಕಿ ಅವುಳು. ಮುಂದೆ ಪ್ರಧಾನಿ ಕ್ಯಾಂಡೇಟಾಗೊ ನಾನು ಈ ಗುಡ್ಡದ ಕಳ್ರು ಸಮಂದ ಇಟಗಂಡ್ರೆ ಬಿಜೆಪಿಗಳೇ ಬುಡದಿಲ್ಲ ಅಂತ ಗೊತ್ತಾಯ್ತು ಕಣಕ್ಕ ಅದ್ಕೆ ಅಭಾರ್ಸನ ಅಂತ ಸುಳ್ಳೇಳಿ ತಪ್ಪಿಸಿಕೊಂಡಳಂತೆ. ಅದ್ಕೆ ಅವುಳ ತಗಂಡೋಗದ ಗಡಕರಿ ತಗಂಡೋಯ್ತು."

"ಗಡಕರಿ ಅಂದ್ರೇನ್ಲ?" ಎಂದ ಕಾಳಮಾವ.

"ಅದು ಒಂದು ಪೆಠಾರಿ ದ್ವಡಪ್ಪ, ಎಷ್ಟು ಹಣಕಾಸು ಬೇಕಾದ್ರು ತುಂಬಬವುದು. ಅಂಥಾ ಟ್ರೆಜರಿ ಅದು" ಎಂದು ವಾಟಿಸ್ಸೆ ನಕ್ಕ.

"ಇವುನೇಳ್ತನೆ ಅಂತ ಕೇಳುಮಾವ. ನಿತಿನ್ ಗಡ್ಕರಿ ಅಂತ ಬಿಜೆಪಿ ಅಧ್ಯಕ್ಷ ಅವುನು. ಸಿನಿಮಾನಟ ಶ್ರೀನಾಥನ ಸಮಂಧಿ ತರ ಕಾಣ್ತನೆ. ಅವುನು ಮದ್ಲು ಎಡೂರಪ್ಪನತ್ರ ಕಾಸೀಸಗತಿದ್ನಂತೆ. ಈಗ ರೆಡ್ಡಿಗಳತ್ರ ಈಸಗಂಡು ನಿಮ್ಮ ಮಂತ್ರಿ ಮಾಡ್ತಿನಿ ಅಂತ ಹೋಗಿದ್ದನಂತೆ."

"ಈಗ್ಯಾವೊ ಒಂದ್ಯೆದಾರು ಮಂತ್ರಿಯಾದವಂತಲ್ಲ ಅವ್ಯಾವೂ?"

"ಅವು ನಾನ್ ಬಿಜೆಪಿಗಳು ದೊಡಪ್ಪ, ಆನಂದ, ಬಾಲಚಂದ್ರ, ನರಸಿಂಹ, ಚೆನ್ನಪಟ್ಟದ ಯೋಗೇಶ್ವರ, ವರ್ತೂರ್ ಪ್ರಕಾಶ್ ಅಂತ ಮಂತ್ರಿ ಮಾಡಿದ್ರು."

"ಅಂಗರವು ಬಿಜೆಪಿಗಳಲ್ಲವೆ?"

"ಹುಟ್ಟು ಬಿಜೆಪಿಗಳೆ ಆದ್ರೆ ಎಲ್ಲೂ ಹೋಗದಿಲ್ಲ, ಗೊಂತಲ್ಲೇ ಬದ್ದಿರತವೆ. ಅದೇ ಹ್ವರಗಿನಿಂದ ಬಂದವಾದ್ರೆ ಗೊಂತರಕಂಡು ಇನ್ಯಾವದಾರ ಪಾರ್ಟಿ ಹುಡಿಕ್ಯಂಡು ಹೋಗಿಬುಡತವೆ ಅಂತ ಪ್ಲಾನ್ ಮಾಡೀ, ಬಿಜೆಪಿಗೆ ಹೊರಗಿನಿಂದ ಬಂದೋರನೆ ಮಂತ್ರಿ ಮಾಡಿದ್ರು."

"ಅಂತೂ ಯೋಗೇಶ್ವರನಿಗೆ ವಳ್ಳೆ ಖಾತೆ ಸಿಕ್ತು" ಎಂದ ಉಗ್ರಿ.

"ಊ ಕಣೊ ಉಗ್ರಿ. ಇನ್ನು ಮ್ಯಾಲಾದ್ರು ಅವುನ ಕೊಟ್ಟ ಚಿಕ್ಕು ಬೌನ್ಸಾಗದಿಲ್ಲ, ಅನಾಹುತ ಏನಪ್ಪ ಅಂದ್ರೆ ಇಡೀ ಕರ್ನಾಟಕದಲ್ಲಿ ಟಿಂಬರ್ ಲಾಬಿ ಚುರು ಕಾಯ್ತದೆ. ಪರೆಗ್‌ಜಾಂಪಲ್ ನಮ್ಮ ಬಂಗಾರಪ್ಪ ಸಿಎಮ್ಮಾಗಿದ್ದಾಗ ಕೊಡಗಿನ ಕಾಡು ಜಾಸ್ತಿ ಲೂಟಿ ಯಾಯ್ತಂತೆ. ಅಂಗೆ ಯೋಗೇಶ್ವರನ ಚಿಕ್ಕು ಪಾಸಾಗದಕ್ಕೂ, ಕರ್ನಾಟಕದಲ್ಲಿ ಹಳೆಮರ ಉರುಳದಕ್ಕೂ, ಸಮಂದ ಏರ್ಪಡದೇ ಆದ್ರೆ ಭಾಳಕಷ್ಟ."

"ಅವುನು ಮರಗಿಡ ಬೆಳಸೊ ಅಂತೊನಂತೆ ಕಣೊ. ಅವುನೇನೋ ಬಚಾವಾದ. ವರತೂರು ಪ್ರಕಾಶನ ಕತೆ ಹೇಳು."

"ಅವುನು ಮಂತ್ರಿಗಿರಿ ಹೋದ್ರು ಜವಳಿ ಯಾಪಾರ ಮಾಡಬವುದಲ್ಲೊ ಉಗ್ರಿ. ಒಳ ಚರಂಡಿಗಿಂತ ಜವಳಿ ಬೆಟರ್ ಅಲವೆ. ಆದ್ರು ಅವುನಿಗೆ ಕುರಿ ಮತ್ತೆ ಉಣ್ಣೆ ಖಾತೆ ಕೊಡಬವುದಿತ್ತು, that is ಸೂಟಬಲ್ ಖಾತೆ!"

" !?"


...ಸ್ಕೀಮರ್ ಸ್ಟೆಫಿ!

...ಮೋನಿಕಾ ಸೆಲಸ್ ಗೆಲ್ಲುತ್ತಾಳೆಂದು ಇಡೀ ಜಗತ್ತು ನಿರೀಕ್ಷಿಸಿತ್ತು, ಇಪ್ಪತ್ತೆಂಟು ತಿಂಗಳು ಟೆನ್ನಿಸ್‌ಗೆ ...ವಿದ್ದ ಮೋನಿಕಾ ಮತ್ತೆ ಬಂದು ಕೆನಡಾದಲ್ಲಿ ಛಾಂಪಿಯನ್‌ಶಿಪ್ ಗೆದ್ದಿದ್ದಳು. ಬೆನ್ನಿನ ಇರಿತದ ನೆನಪು ... ಇಲ್ಲದಂತೆ ಆಡುತ್ತಿದ್ದಳು. ಸ್ಟೆಫಿಯಂತೆಯೇ ಜರ್ಮನಿಯಿಂದ ಬಂದ ಆಂಕೆ ಹ್ಯೂಬರ್ ಮತ್ತು ...ನ ನವ್ರೋಟ್ನಾ ಮೇಲೆ ಸೆಲೆಸ್ ಆಡಿದ್ದನ್ನು ನಾನು ನೋಡಿದ್ದೆ. ಆಂಕೆ ನನಗೆ ತುಂಬ ಇಷ್ಟದ ಹುಡುಗಿ. ...ಯಂತೆ ಸಪೂರವಾಗಿ ಎತ್ತರಕ್ಕಿಲ್ಲದ ಆಂಕೆ ಗುಂಡಗೆ ಮೋಹಕವಾಗಿದ್ದಾಳೆ; ಮುಖ್ಯ ಪಾಯಿಂಟ್‌ನಲ್ಲಿ ...ಚಿಸುವಂತಿರುತ್ತಾಳೆ; ಇಪ್ಪತ್ತು ವರ್ಷದವಳು. ಆಂಕೆ, ನವ್ರೋಟ್ನಾ ಎಲ್ಲಾ ಸೋತಿದ್ದರು. ಸೆಲೆಸ್ ...ಮಾರುತದಂತೆ ಕಾಣಿಸುತ್ತಿದ್ದಳು. ಸ್ಟೆಫಿಗೆ ಟ್ಯಾಕ್ಸ್ ಕಿರಿಕಿರಿ, ಅವಳಪ್ಪ ಜೈಲಲ್ಲಿದ್ದಾನೆ. ಗೆಲ್ಲುವುದು ... ಅನಿರೀಕ್ಷಿತವೆಂಬಂತೆ, ಇವಳ ಆಟ ನೋಡುತ್ತಿದ್ದರೆ ಆತಂಕದಿಂದ ಬೇಸರವಾಗುತ್ತದೆ. ಸ್ಟೆಫಿ ...ು ಸಾಧ್ಯವೆ? ಸೆಲೆಸ್ ಸೋಲಲು ಸಾಧ್ಯವೆ? ಹೀಗೆಂದು ಎಲ್ಲರೂ ಕುಸ್ತಿ ನೋಡಿದಂತೆ ...ಡಲು ತಯಾರಾಗುತ್ತಿದ್ದಾಗ ಸ್ಟೆಫಿ ಗೆಲ್ಲುವ ದಾರಿ ಹುಡುಕಿದ್ದಳು. ಅಂತರಾಷ್ಟ್ರೀಯ ಟೆನ್ನಿಸ್ ...ತ್ತಿರುವವರೆಲ್ಲರಲ್ಲಿ ವ್ಯತ್ಯಾಸ, ಅಸಮಾನತೆ ತೀರಾ ಕಮ್ಮಿ. ಸ್ವಲ್ಪ ಹೆಚ್ಚುಕಮ್ಮಿಯಾದರೆ ಫ್ರೆಂಚ್ ...ಗಿ ಮೇರಿ ಪಿಯರ್ಸ್ ಗೆದ್ದುಬಿಡುತ್ತಾಳೆ; ವಿಂಬಲ್ಡನ್‌ನಲ್ಲಿ ಲೋರಿ ಮ್ಯಾಕ್‌ನೀಲ್ ಸ್ಟೆಫಿಗೆ ...ಲನೇ ಸುತ್ತಿನಲ್ಲೇ ಹೊಡೆದಳು.... ಈಗ ಸೆಲೆಸ್ ಜೊತೆಗೆ ಹೇಗಾಡುವುದು? ಆಟದಲ್ಲಿ ... ಗೆಲ್ಲಬೇಕಾದರೆ ಆಟದ ವೇಗ, ಕುಶಲತೆ, ಶಕ್ತಿ ಯುಕ್ತಿ ಎಲ್ಲ ಬೇಕೆಂದು ಎಲ್ಲರಿಗೆ ಗೊತ್ತು. ... ಆಟದಲ್ಲಿ ನಾವು ಗೆದ್ದರೂ ಒಂದೆ, ಎದುರಾಳಿ ಸೋತರೂ ಒಂದೇ. ಆದ್ದರಿಂದ



ಎದುರಾಳಿಯನ್ನು ಎದುರಿಸಲು ಹಲವಾರು ಮಾರ್ಗಗಳಿವೆ. ಸೆಲೆಸ್ ತನ್ನ ಆಟವನ್ನು ಪ್ಲಾನ್ ಮಾಡಲಿಲ್ಲ, ಸ್ಟೆಫಿ ಎಲ್ಲವನ್ನೂ ಲೆಕ್ಕಕ್ಕೆ ಇಳಿಸಿದಳು. ಮೊದಲನೆ ಸೆಟ್ಟನ್ನು ಪ್ರಬಲ ಸರ್ವಿಸ್‌ನೊಂದಿಗೆ ಸಮರ್ಥವಾಗಿ ಆಡುವುದು, ಗೆಲ್ಲುವುದು. ಎರಡನೆ ಸೆಟ್ಟನ್ನು ಹಾಗೆಯೇ ಆಡಿದರೆ ಸೆಲೆಸ್ಸನ್ನು ಸೋಲಿಸುವುದು ಕಷ್ಟ, ಆದ್ದರಿಂದ ಎರಡನೆ ಸೆಟ್‌ನಲ್ಲಿ ಸೆಲೆಸ್ ಗೆಲ್ಲಲು ಬಿಟ್ಟು ವಿರಾಮ ತೆಗೆದುಕೊಳ್ಳುವುದು. ಸೆಲೆಸ್ ಗೆದ್ದೇಬಿಟ್ಟೆನೆಂದು ಹಾರಾಡುತ್ತಿದ್ದಾಗ ಮೂರನೇ ಸೆಟ್‌ನಲ್ಲಿ ಇಕ್ಕುವುದು. ಎರಡನೆ ಸೆಟ್‌ನಲ್ಲಿ ಒಂದು ಪಾಯಿಂಟ್ ಕೂಡ ಬರದೆ ಸ್ಟೆಫಿ ಸೋತಾಗ ಎಲ್ಲರೂ ಮ್ಯಾಚ್ ಮುಗಿಯಿತು ಎಂದುಕೊಂಡರು. ಅದು ನಿಜವಲ್ಲ, ಮ್ಯಾಚ್ ಮೂರನೆ ಸೆಟ್‌ನಲ್ಲಿ ತಾರಕಕ್ಕೆ ಹೋಯಿತು. ಸ್ಟೆಫಿ ಎರಡನೆ ಸೆಟ್‌ನ ವಿರಾಮದಿಂದ ಬಂದು ಇಕ್ಕತೊಡಗಿದಳು; ಸೆಲೆಸ್‌ಗೆ ಆಘಾತವಾಯಿತು. ಎರಡನೆ ಸೆಟ್‌ನಲ್ಲಿ ದಿವಾಳಿ ಎದ್ದಂತೆ ಸೋತ ಸ್ಟೆಫಿ ಮೂರನೆ ಸೆಟ್‌ನಲ್ಲಿ 6-3 ಗೇಮ್ಸ್‌ನಿಂದ ಗೆದ್ದಳು. ಪ್ರಚಾರ, ಖ್ಯಾತಿ, ಹುಂಬತನ ಎಲ್ಲವನ್ನೂ ಮೀರಿದ್ದು ಬುದ್ಧಿ, ಯೋಜನೆ. ಈ ತಂತ್ರದಿಂದ ಗೆದ್ದಿದ್ದಳು ಸ್ಟೆಫಿ.

ಟೆನ್ನಿಸ್‌ನ ಸಿಂಗಲ್ಸ್ ಆಡುವವರು ನಿಜಕ್ಕೂ ಒಬ್ಬಂಟಿ. ರಕ್ಷಕರೇ ಇಲ್ಲದ ತಬ್ಬಲಿ. ಈ ತಬ್ಬಲಿತನದ ಚಿಪ್ಪು ಒಡೆದು ಹೊರಬರಬೇಕಾದರೆ ಜಾಣತನ ಬೇಕು. ಭಾನುವಾರದ (ಆವತ್ತು ಅಮೆರಿಕಾದಲ್ಲಿ ಭಾನುವಾರ!) ಸ್ಟೆಫಿ ತಾನು schemer, ಕೈಚಳಕದ ಹುಡುಗಿ ಎಂದು ತೋರಿದಳು.



-ಸೆಪ್ಟೆಂಬರ್ 27, 1995


ಮೂಗುದಾರ ಕೊಟ್ಟರೆ ಮೂಗಿಗೇ ಸಂಚಕಾರ

ಮನುಷ್ಯನಿಗೆ ಒಳ್ಳೆಯ ಗುಣ, ಕೆಟ್ಟ ಗುಣ ಎರಡೂ ಇರುತ್ತದೆ. ತಿಳಿದವರು ಕೆಟ್ಟ ಗುಣವೇ ಒಂದಿಷ್ಟು ಹೆಚ್ಚು ಇರುತ್ತದೆ ಎನ್ನುತ್ತಾರೆ. ಇದರಿಂದಾಗಿ ತಮಗಾಗದಿರುವವರಿಗೆ ಕೇಡು ಬಂದರೆ ಕಂಡಾಪಟ್ಟೆ ಖುಷಿ ಪಡ್ತಾರಂತೆ. ತಮಗೋ, ತಮ್ಮನ್ನು ನಂಬಿದವರಿಗೋ ಹೀಗಾದರೆ ಅದರಿಂದ ಪಾರು ಮಾಡಲು ಶತಾಯಗತಾಯ ಹೋರಾಡುತ್ತಾರಂತೆ. ನಮ್ಮವರು ತಮ್ಮವರು ಅಂತ ಅಧಿಕಾರದಲ್ಲಿರೋರ ಸಹಾಯ ಪಡೆಯುವುದು ಸಾಮಾನ್ಯ ಸಂಗತಿ ಅಂತೆ.

ಕೆಲವು ಶಾಸಕರು ಅಂದಮೇಲೆ ವಜನ್ ಆದ ಆಸಾಮೀನೆ ಅಲ್ವ. ಅವರ ಕೆಲವು ಸಂಬಂಧಿಕರೂ ಅದೇ ವಜನ್ ಬಂದಂಗೆ ಆಡ್ತವೆ. ಹಿಂಗೆ ಆಡ್ತಾ ಆಡ್ತಾ ಕ್ರಿಮಿನಲ್ ಕೇಸಲಿ ಸಿಗಾಕ್ಕಂತವೆ. ಇಂತೋವ ಶಾಸಕರೇ ಫೋನಾಕಿ ಬುಡುಸ್ತಾರೆ ಅನ್ನಿ. ಒಂದೊಂದ್ಸಲ ಯಡವಟ್ಟಾಯ್ತದೆ. ಹಂಗೇ ಇಲ್ಲೊಂದಾಗಿತ್ತು. ಅವರ ನಂಬಿಕಸ್ತ ಹುಡುಗ ಅದ್ಯಾವುದೋ ಕ್ರಿಮಿನಲ್ ಕೇಸಲಿ ತಗಲಾಕ್ಕಂತಂತೆ. ಅವರ ಕೈಲೂ ಆಗದ ಕೇಸಂತೆ ಅದು. ಅಯೋ ಈ ಮನೆ ಹಾಳಾದ್ದು ಹಿಂಗ್ಮಾಡ್ಕಂಡದಲ್ಲ ಅಂತಾವ ಶಾಸಕರೇನು ಮಾಡಿದ್ರು ಹಿಂಗಿಂಗೆ ಆಗೋಗದೆ ಪೊಲೀಸ್ ಸ್ಟೇಷನ್ನಿಗೆ ಫೋನಾಕಿ ಅಂದ್ರು. ಯಾರಿಗೆ ಅಂತೀರಿ ಮುಖ್ಯಮಂತ್ರಿಗಲ್ಲ, ಇಂತಹವಕ್ಕೆಲ್ಲ ಅವರ್ಯಾಕೆ ಬೇಕು ಅಂತ್ಲೊ ಏನೊ. ಅವರ ಆಪ್ತ ಸಹಾಯಕನಿಗೆ ಹೇಳಿದ್ರು. ಅವ್ನ ಫೋನ್ ಹಚ್ಚಿದ. 'ಶಾಸಕ ಸಾಹೇಬ್ರ ಮನೆ ಹೈದ ಸಿಗಾಕ್ಕಂಡವೆ. ಅದ ಬುಟ್ಕಳಿಸಿ' ಅಂದ. ಆ ಫೋನ ತಗೊಂಡೋನು ಯಾವ್ನೊನೋ ತರ್ಲೆ ಬಡ್ಡಿ ಹೈದನೋ ಏನೋ. ಅವನೇನು ಮಾಡಬೇಕಿತ್ತು ಒಂದ 'ಅಗ್ಲಿ' ಅನ್ನಬೇಕಿತ್ತು, ಇಲ್ಲ 'ಇಲ್ಲ' ಅನ್ನಬೇಕಿತ್ತು. ಇದ್ಯಾವುದನ್ನೂ ಮಾಡದೆ ಅವ್ನ ಹುಂಹುಂ ಅಂತ ಹೇಳ್ತಾನೆ ಸ್ಟೇಷನ್ ಡೈರೀಲಿ ನಡೆದದ್ದೆಲ್ಲವನ್ನು ದಾಖಲಿಸಿಬಿಟ್ಟವ್ನೆ!

ಕೇಸು ಕೋರ್ಟಿಗೆ ಬಂತು. ಕ್ರಿಮಿನಲ್ ಕೇಸಿನಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿರುವುದನ್ನ ತಿಳಿದು ನ್ಯಾಯಾಧೀಶರು ಕೆಂಡಮಂಡಲ ಆದರು. ಸರ್ಕಾರಕ್ಕೆ 25,000 ರೂಪಾಯಿ ಜುಲ್ಮಾನೆ ಬಿಗಿದರು. ಇಲ್ಲೇ ಹೆಂಗೋ ಮುಗ್ಸಿ ಕೈತೊಳೆದುಕೊಂಡಿದ್ರೆ ಆಗ್ತಿತ್ತು. ಸರ್ಕಾರ ಅಂದರೆ ಸಾಮಾನ್ಯವಾ? ಅದ್ಕೆ ಈಗ ಮುಜುಗರ ಆಗೋಯ್ತು. ಸುಪ್ರೀಂಕೋರ್ಟಿಗೆ ಮೇಲ್ಮನವಿ ಸಲ್ಲಿಸಿತು. ಅದೇನು ಮಾಡ್ತು 25 ಲಕ್ಷ ರೂಪಾಯಿ ಫೈನ ಝೂಡಿಸಿತು!

ವೈಯಕ್ತಿಕವಾಗಿ ಇಂತಹ ಜುಲ್ಮಾನೆ ಹಾಕಿದ್ದರೆ ಅಯ್ಯೋ ಶಿವನೆ ಹಿಂಗಾಯ್ತಲ್ಲಪ್ಪ ಅಂತ ಗೋಳಾಡೊ ಹಾಗೆ ಆಗೋದು. ಆದರೆ ಇದು ಸರ್ಕಾರಕ್ಕೆ ಹಾಕಿದ್ದ ಫೈನಲ್ವ ಆರಾಮವಾಗಿ ಬಿಸಾಕಿ ತೆಪ್ಪನೆ ಇರಬಹುದಾಗಿತ್ತು. ಆದರೆ ಹಂಗಾಗಲಿಲ್ಲ. ನ್ಯಾಯಾಲಯಕ್ಕೆ ಮೂಗುದಾರ ಕೊಟ್ಟರೆ ಮೂಗು ಹರಿಯುವತನಕ ಬಿಡಾಕಿಲ್ಲ. ಅದು ಭ್ರಮಾಲೋಕದಲ್ಲಿ ಅದೆ. ಅಲ್ಲಿ ಕುಂತಿರೋರೆಲ್ಲ ವಾಸ್ತವಿಕ ಸಂಗತಿಗಳ ಅರಿವೇ ಇಲ್ಲೋರು. ಯಾವ ಮಾತಿಗೂ ಕೇರೇ ಮಾಡ್ದೋವು ಅಲ್ಲಿರ್ತವೆ. ಕ್ರಿಮಿನಲ್ ಕೇಸು ಅಂದ್ಮೇಲೆ ಪೊಲೀಸ್ ಸ್ಟೇಷನ್ನಿಗೆ ತಾನೆ ಮೊದಲು ಬರಬೇಕು. ಅಲ್ಲಿರೋವು ಹೇಳ್ದಂಗೆ ಕೇಳ್ತವೆ. ಇಂತಹ ಮುಜುಗರಗಳಿಗೆ ಸಿಗಲೇಬಾರ್ದು ಅಂತ ಒಂದು ಸುತ್ತೋಲೆ ಹೊರಡಿಸ್ತು. ಶಾಸಕರು ಅಂದಮೇಲೆ ಎಲ್ಲಾ ತರಹದ ಜನ ಬರ್ತಾರೆ.



ಕಳ್ಳರು ಕಾಕರು, ದರೋಡೆಕೋರರು, ಕೊಲೆಗಾರರು ಎಲ್ಲರೂ ಬರ್ತಾರೆ. ಪೊಲೀಸ್ನೋರ್ಗೆ ಒಂದು ಮಾತ ಹೇಳಿ ಅಂತಾರೆ. ಓಟು ಕೊಡ್ಡಿರೋರು ಅವು. ಅವರ ಮಾತ ಕೇಳಬೇಕಾಯ್ತದೆ. ಇಲ್ಲ ಅನ್ನಂಗಿಲ್ಲ, ಫೋನ್ ಹಚ್ತಾರೆ. ಇದನ್ನೆಲ್ಲ ಸ್ಟೇಷನ್ ಡೈರೀಲಿ ಬರೀತಾ ಕುಂತ್ಕೋ ಕೂಡದು ಅನ್ನೋದು ಸರ್ಕಾರಿ ಸುತ್ತೋಲೆಯ ಸಾರಾಂಶ.

ಮೇಲಿನಿಂದ ಬಂದಿರೋದು. ಪೊಲೀಸ್ನೋರೇನೋ ಅದ್ರಂಗೆ ಇದ್ರುಡಾನ ಅಂದ್ಕಂಡಿದ್ರು. ಅಂದ್ಕಳಾನ. ಆದರೇನಾಯ್ತು, ಯಾವುದೋ ಒಂದು ಚುರುಕು ಮೆಣಸಿನಕಾಯಿ. ರಿಪೋರ್ಟರ್ ಅಂತೆ. ಅದು ಇಂತಹ ಸುತ್ತೋಲೆ ಹೊರಡಿಸಿರೋದು ಅಪರಾಧ ಅಂತ ಕೋರ್ಟಿಗೆ ಅರ್ಜಿ ಗುಜರಾಯಿಸಿತು. ನ್ಯಾಯಾಲಯ 'ಸುತ್ತೋಲೆ ಹೊರಡಿಸಿದ್ದೀರಿ. ಅದನ್ನು ಹಿಂತೆಗೆದುಕೊಳ್ಳಿ ಎಂದು ಹೇಳುವುದಿಲ್ಲ, ಆದರೆ ಬಹಳ ವಿಚಿತ್ರ ಸುತ್ತೋಲೆ ಇದು. ಇದನ್ನೇ ಮುಂದುವರಿಸ್ತೀವಿ ಎಂದು ಸರ್ಕಾರ ಹೇಳಿದರೆ ಕೇಸಿನ ಮೆರಿಟ್ ಮೇಲೆ ನ್ಯಾಯಾಲಯ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಶಾಲು ಮುಚ್ಚಿ ಮಹಾರಾಷ್ಟ್ರ ಸರ್ಕಾರಕ್ಕೆ ಹೊಡೆಯಿತಂತೆ!

ನ್ಯಾಯಾಲಯ ಅನ್ನೋದು ಹಿಂಗೂ ಮಾಡಬಹುದಾ? ಜನಪ್ರತಿನಿಧಿಗಳ ಮಾತಿಗೆ ಬೆಲೇನೇ ಇಲ್ಲ ಅಂದ್ರೇನೇಳಾನ.....

* * * *

ಹಜಾರೆ ಎಫೆಕ್ಟ್

ಹಿಂದೆಲ್ಲ ಸಲೀಸಾಗಿತ್ತು.

ಕೆಲವು ಅಧಿಕಾರಸ್ಥರು, ಹಣವಂತರು ಆಗಲೂ ಅಕ್ರಮ ನಡೆಸುತ್ತಿದ್ದರು. ಗ್ರಹಚಾರ ಕೆಟ್ಟ ಕೆಲವರು ಜೈಲಿನ ಪಾಲೂ ಆಗುತ್ತಿದ್ದರು. ಇದ್ದಕ್ಕಿದ್ದಂತೆ ಅವರಿಗೆ ಯಾವುದೋ ಬೇನೆ ಕಾಣಿಸಿಕೊಳ್ಳುತ್ತಿತ್ತು. ಸುಸಜ್ಜಿತ ಖಾಸಗಿ ನರ್ಸಿಂಗ್ ಹೋಂಗೆ ದಾಖಲಾಗುತ್ತಿದ್ದರು. ಜಾಮೀನಿನ ಮೇಲೆ ಬಿಡುಗಡೆ ಹೊಂದುತ್ತಿದ್ದರು.

ಈಗ ಕಾಲ ಬದಲಾಗಿದೆ.


ಬರಬಾರದ ಬೇನೆ ಬಂದಿದೆ ಅಂದರೆ ನ್ಯಾಯಾಲಯ ಒಪ್ಪಲು ಸಿದ್ಧವಿಲ್ಲ. 'ಜೈಲಿನಲ್ಲೇ ವೈದ್ಯರಿದ್ದಾರೆ' ಅನ್ನುತ್ತೆ. ಜಾಮೀನಿನ ಮೇಲೆ ಬಿಡುಗಡೆ ಮಾಡಿ ಅಂತ ಅರ್ಜಿ ಮೇಲೆ ಅರ್ಜಿ, ಕೋರ್ಟಿನ ಮೇಲೆ ಕೋರ್ಟು ಹತ್ತಿದರೂ ಜಾಮೀನಿನ ಮೇಲೆ ಬಿಡುಗಡೆ ಆಗುತ್ತಿಲ್ಲ.

ಈ ಪರಿವರ್ತನೆಗೆ ಏನು ಕಾರಣ?

ನ್ಯಾಯಾಧೀಶರಿಗೂ ಭಯ ಅಂತೆ!

ಏನು ಭಯ ಅಂತೀರಾ?

ಪ್ರಭಾವಿ ರಾಜಕಾರಣಿಗಳನ್ನ ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ 'ದುಡ್ಡು ತಿಂದು ಬಿಟ್ಟವ್ನೆ' ಅಂತಾರೆ ಜನ ಅನ್ನೋ ಭಯ ಅಂತೆ!



ಎಚ್.ಎಲ್. ಕೇಶವಮೂರ್ತಿ

ಅಣಕ

ಇಲ್ಲದ್ದಕ್ಕೆ ಹಲ್ಲುಬೀರನೇ ಗಂಡ

'ಕೈಗೊಂಬೆ', 'ಏಜೆಂಟು', 'ಗುಲಾಮ' ಎಂದೆ... ಮೂದಲಿಸುವವರು ಇದ್ದಾರೆ. ಅಂತಹವರಿಗೆ ತಮ... ಹೆಸರಿನಲ್ಲಿ ಬೇರೆ ಯಾರೋ ಕೆಲಸ ಮಾಡುವುದರಲ್ಲಿ... ಸುಖ, ನೆಮ್ಮದಿಯ ಅನುಭವ ಇಲ್ಲ, ಸದಾ ನಗು... ಸದಾನಂದಗೌಡರ ವಿಷಯವನ್ನೇ ಪರಿಶೀಲಿಸಿ. ಮುಖ್ಯಮಂ... ಕುರ್ಚಿಯ ಆಸೆ ಎಲ್ಲರಿಗೂ ಇರುತ್ತದೆ. ಇವರಿಗೂ ಇದ್ದಿತ... ಶಾಸಕರನ್ನು ಕೂಡಿಹಾಕುವ, ಅವರ ಇಷ್ಟಾನಿಷ್ಟಗಳನ್ನ... ಪೂರೈಸುವ ತಂಟೆಗೇ ಹೋಗಲಿಲ್ಲ, ಗಂಭೀರವಾಗಿ 'ನಾನು... ಒಬ್ಬ ಆಕಾಂಕ್ಷಿ' ಅಂದರು ಅಷ್ಟೆ. ಯಾರಿಗೋ ತೆವಲಿತ್ತು... ಅವರು ಶಾಸಕರನ್ನು ಕೂಡಿ ಹಾಕಿ ಇವರನ್ನೇ ಮುಖ್ಯಮಂ... ಅಂದರು. ಇವರು ಹೋಗಿ ಕುರ್ಚಿ ಮೇಲೆ ಕುಂತರು... ಮಂತ್ರಿ ಮಂಡಲ ರಚನೆಯ ಕಷ್ಟ ಅದನ... ಅನುಭವಿಸಿದವರಿಗೇ ಗೊತ್ತು, ನೂರೆಂಟು ಕಡೆಯಿಂ... ಒತ್ತಡ ಬರುತ್ತದೆ. ತಲೆ ಎನ್ನುವುದು ಕೆಟ್ಟು ನಾರು... ಗೊಬ್ಬರದ ಗುಂಡಿಯಾಗುತ್ತದೆ. ಆದರೆ ಗೌಡರಿಗೆ ಮಂ... ಬಿಸಿಯಾಗುವ ಕಾರಣವೇ ಇರಲಿಲ್ಲ, ಇಂತಿಂತಹವರು... ಮಂತ್ರಿಗಳನ್ನ ಮಾಡಿದ್ದೀವಿ ಅಂತ ಯಾರೋ ಅಂದು... ಇವರು 'ಓಕೆ' ಅಂದರು. ಖಾತೆ ಹಂಚಿಕೆ ಶ್ರಮಾನ... ಕೊಡಲಿಲ್ಲ ಗೌಡರಿಗೆ. ಮಂತ್ರಿ ಮಾಡಿದವರೇ ಖಾತೇನ... ಹಂಚಿದರು. ಮಂತ್ರಿಗಿರಿ ಸಿಕ್ಕದವರು ಅವರು ಕಾರಣ... ಇವರು ಕಾರಣ ಎಂದು ಯಾರುಯಾರನ್ನೋ ದೂಷಿಸಿದರು... ಪರಂತು ಸದಾನಂದ ಗೌಡರನ್ನು ಯಾರೂ ಆಕ್ಷೇಪಿಸಲಿಲ್ಲ... ಗೌಡರ ಮುಖದ ಮೇಲಿನ ನಗು ಮಾಸಿಸುವಂತ... ಯಾವ ಅನಿಷ್ಟಗಳೂ ಎದುರಾಗಲೇ ಇಲ್ಲ. ಆಮೇ... ಆಡುತ್ತಾ ಆಡುತ್ತಾ ಇದ್ದ ಹಾಗೆ ಸ್ವಾತಂತ್ರ್ಯ ದಿನಾಚರ... ಬಂದಿತು. ಅವತ್ತು ಮಾಡುವ ಭಾಷಣದಲ್ಲಿ ರಾಜ್ಯ... ಜನತೆಗೆ ಸಂದೇಶ ನೀಡಬೇಕಲ್ಲ, ಆ ಕಷ್ಟಾನೂ ಇರಲಿಲ್ಲ... ಹಿಂದಿನ ಮುಖ್ಯಮಂತ್ರಿಗಳ ಯೋಜನೆಗಳನ್ನ... ಮುಂದುವರೆಸುತ್ತೇನೆ ಅಂದರು! 'ನಾನೇ ಮಂತ್ರಿಮಂಡ... ರಚಿಸ್ತೀನಿ', 'ನಾನೇ ಖಾತೆಗಳನ್ನ ಹಂಚ್ತೀನಿ'. 'ನಾನ... ಮುಖ್ಯಮಂತ್ರಿ. ಇವು ನನಗಿರುವ ವಿಶೇಷ ಹಕ್ಕುಗಳ... ಎಂದು ಪಟ್ಟು ಹಿಡಿದಿದ್ದರೆ; ಸ್ವಾತಂತ್ರ್ಯ ದಿನಾಚರಣೆಯಂದು... ಹಠ ಹಿಡಿದು ನಾನೇ ಮುಂದಿನ ಯೋಜನೆ ರೂಪಿಸುತ್ತೇ... ಎಂದು ರೂಪಿಸಿದ್ದರೆ ಈಗ ಇರುವ ನೆಮ್ಮದಿ ಸು... ಇರುತ್ತಿತ್ತಾ? ರಾಜ್ಯದ ಜನ ಏನನ್ನಬಹುದು ಅನ್ನೋದು... ಈಗ ಯಾಕೆ ಅಂತೀನಿ. ಏನನ್ನುತ್ತಾರೆ? ಅಮ್ಮಮ್ಮ ಅಂದ... ಇಲ್ಲದ್ದಕ್ಕೆ ಹಲ್ಲುಬೀರನೆ ನನ ಗಂಡ ಅನ್ನಬಹುದು... ಅಂದುಕೊಳ್ಳಲಿಬಿಡಿ. ಅವರು ಹಾಗನ್ನುತ್ತಾರೆ ಅಂತ ಗೌಡರ... ಎಲ್ಲಾನೂ ಹಚ್ಕೊಂಡು ಸಾಯೋಕೆ ಆಗುತ್ತಾ.....

ರಾಜಕೀಯ ಪುನರುಜ್ಜೀವನಕ್ಕೆ ಉರುಳು ಸೇವೆ



ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ವಿದೇಶದ ಆಸ್ಪತ್ರೆಯೊಂದರಲ್ಲಿ ದಾಖಲಾಗಿ ಪರಿಣತ ತಜ್ಞರಿಂದ ಚಿಕಿತ್ಸೆಯನ್ನು ಪಡೆಯುತ್ತಿರುವುದರ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಜೊತೆಗೆ ಸದ್ಭಾವನೆಯುಳ್ಳವರೆಲ್ಲರೂ ಅವರು ಶೀಘ್ರ ಗುಣಮುಖರಾಗಲಿ ಎಂಬ ಕಳಕಳಿಯನ್ನು ಹೊಂದಿರುವುದೂ ಪ್ರಕಟವಾಗಿದೆ.

ಆದರೆ ಸೋನಿಯಾ ಗಾಂಧಿಯವರಾಗಲಿ, ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರಾಗಲಿ ಯಾವುದೇ ದೇವಾಲಯಗಳಲ್ಲಿ, ಇಗರ್ಜಿ, ಮಸೀದಿಗಳಲ್ಲಿ ಯಾವುದೇ ತರದ ಹರಕೆಯನ್ನಾಗಲೀ ಪ್ರಾರ್ಥನೆಯನ್ನಾಗಲಿ ಮಾಡಿಕೊಂಡ ವರದಿ ಪ್ರಕಟವಾಗಲಿಲ್ಲ, ಬದಲಾಗಿ ವೈದ್ಯರು ವೈಜ್ಞಾನಿಕ ಚಿಕಿತ್ಸಾ ಕ್ರಮಗಳನ್ನು ಮಾತ್ರ ಅನುಸರಿಸಿ ಸೋನಿಯಾ ಗಾಂಧಿಯವರನ್ನು ಗುಣಪಡಿಸಲು ಪ್ರಯತ್ನಿಸುತ್ತಿದ್ದಾರೆ.

ಹೀಗಿರುವಾಗ ಸೋನಿಯಾ ಗಾಂಧಿಯವರು ಗುಣಮುಖರಾಗುವಂತೆ ನಮ್ಮಲ್ಲಿಯ ಕೆಲವು ದೇವಾಲಯಗಳಲ್ಲಿ ಉರುಳು ಸೇವೆ ನಡೆಸುವ ಹಾಸ್ಯಾಸ್ಪದ ಮತ್ತು ನಾಟಕೀಯ ಕ್ರಿಯೆಗಳು ನಡೆದಿವೆ. ಮುಖ್ಯವಾಗಿ ಮಾಜಿ ಸಂಸತ್ ಸದಸ್ಯ ಮತ್ತು ಚುನಾವಣೆಗಳಲ್ಲಿ ಸೋತು ಈಗ ಬಹುತೇಕ ಮೂಲೆಗುಂಪಾಗಿರುವ ಜನಾರ್ದನ ಪೂಜಾರಿಯವರು ಮಂಗಳೂರಿನ ಕುದ್ರೋಳಿ ಗೋಕರ್ಣನಾಥೇಶ್ವರ ಹಾಗೂ ಇತರ ದೈವದೇವರುಗಳಿಗೆ ಪ್ರಾರ್ಥಿಸಿ, ಉರುಳುಸೇವೆಯನ್ನು ಮಾಡಿದ್ದಾರೆ. ಇದರ ಹಿಂದೆ ಸೋನಿಯಾ ಗಾಂಧಿಯವರು ಗುಣಮುಖರಾಗಬೇಕೆಂಬ ಕಾಳಜಿಗಿಂತಲೂ ತಮ್ಮ ರಾಜಕೀಯ ಪುನರುಜ್ಜೀವನಕ್ಕೆ ಈ ಸಂದರ್ಭವನ್ನು ಬಳಸಿಕೊಳ್ಳುವ ಪ್ರಯತ್ನ ಕಾಣುತ್ತಿದೆ.

ಪೂಜಾರಿಯವರೊಂದಿಗೆ ಈ ಹಿಂದೆ ಜೆಡಿಎಸ್‌ನಲ್ಲಿದ್ದು ಅಲ್ಲಿ ಬೇಳೆ ಬೇಯಿಸಲಾಗದೆ ಕಾಂಗ್ರೆಸ್ ಪಕ್ಷ ಸೇರಿಕೊಂಡು ಅದರಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಹವಣಿಸುತ್ತಿರುವ ಐವನ್ ಡಿಸೋಜರೂ ಸಾಥ್ ನೀಡಿದ್ದಾರೆ. ಅಲ್ಲದೆ ಇತರ ಕೆಲವು ಚೇಲಗಳನ್ನೂ ಸೇರಿಸಿ ಉರುಳಿದ್ದಾರೆ. ಶಾಸಕ ಯುಟಿ ಖಾದರ್‌ರವರೂ ಇವರಿಬ್ಬರ ಜೊತೆಗಿದ್ದು ಇವರ ಕಾರ್ಯಗಳಿಗೆ ಮೆರಗು ನೀಡಿದ್ದಾರೆ.

ಮೂಢನಂಬಿಕೆಗಳನ್ನು ಅವಿದ್ಯಾವಂತ ಬಡ ಜನಸಮುದಾಯದವರು ಅನುಸರಿಸಿದರೆ ಅಂಥವರನ್ನು ಕ್ಷಮಿಸಬಹುದು. ಆದರೆ ವಿದ್ಯಾವಂತರೂ, ರಾಜಕೀಯ ನಾಯಕರೂ ತಮ್ಮ ಮಹತ್ವಾಕಾಂಕ್ಷೆಗಳನ್ನು ಇಂತಹ ಮೂಢ ಕಾರ್ಯಾಚರಣೆಗಳ ಮೂಲಕ ಸಾಧಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ನೋಡಿದರೆ ಅಸಹ್ಯವಾಗುತ್ತದೆ. ಜನಾರ್ದನ ಪೂಜಾರಿಯವರ ರಾಜಕೀಯವನ್ನು ಮೊದಲಿನಿಂದ ನೋಡಿರುವ ನಮ್ಮಂಥವರು ಅವರ ಈ ವರ್ತನೆಯನ್ನು ಖಂಡಿಸದಿದ್ದರೆ ನಾವು ಕೂಡ ಮೂಢನಂಬಿಕೆಗಳನ್ನು ಪ್ರೋತ್ಸಾಹ ಮಾಡಿದಂತಾಗುತ್ತದೆ.

ಇನ್ನಾದರೂ ಇಂಥಾ ಮೂಢ ಕಾರ್ಯಾಚರಣೆಗಳಲ್ಲಿ ತೊಡಗದೆ, ಜನಪರ ಕಾರ್ಯಗಳನ್ನು ಕೈಗೆತ್ತಿ ಜನಪ್ರಿಯತೆ ಪಡೆಯಲು ಪೂಜಾರಿ ತರಹದವರು ಪ್ರಯತ್ನಿಸಲಿ ಎಂದು ಹಾರೈಸುತ್ತೇವೆ.

- ಬಿ.ವಿ. ಕಕ್ಕಿಲಾಯ, ಮಾಜಿ ಶಾಸಕರು, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.

ಪತ್ರಿಕೆಯಲ್ಲಿ ಇಂದಿರಾ ಲಂಕೇಶರು ಬರೆಯುತ್ತಿರುವ 'ಹುಳಿಮಾವು ಮತ್ತು ನಾನು' ಅಂಕಣ ನೋಡಿ ಸಂತೋಷವಾಯಿತು. ಲಂಕೇಶರ ಮಡದಿಯಾಗಿ ಇಂದಿರಾ ಅವರು ಲಂಕೇಶರನ್ನು ನೋಡಿದ್ದೇ ಬೇರೆ ದೃಷ್ಟಿಕೋನದಿಂದ. ಈಗ ಅದನ್ನೆಲ್ಲ ಇಂದಿರಾ ಅವರ ಬರಹದ ಮೂಲಕ ಹೊರತಂದು ಲಂಕೇಶರ ವ್ಯಕ್ತಿತ್ವದ ಮತ್ತೊಂದು ಆಯಾಮವನ್ನು ಜನರಿಗೆ ಪರಿಚಯ ಮಾಡಲು ಹೊರಟಿರುವುದು ಒಳ್ಳೆಯದು.


- ಗರುಡನಗಿರಿ ನಾಗರಾಜ್, ಬೆಂಗಳೂರು

ಇಂದಿರಾ ಅಮ್ಮನ 'ಹುಳಿಮಾವು ಮತ್ತು ನಾನು' ಓದಿ ಒಂಥರಾ ಖುಷಿಯಾಗುತ್ತಿದೆ.


- ಸಂತೋಷ್, ಅಜ್ಜಂಪುರ

ಅಮ್ಮನ 'ಹುಳಿಮಾವು ಮತ್ತು ನಾನು' ಓದಲು ಚೆನ್ನಾಗಿದೆ. ಈ ವಾರ ಆ ಅಂಕಣವನ್ನು ಮೊದಲು ಓದಿದ ನಂತರವೇ ನಾನು ಪತ್ರಿಕೆಯ ಇತರೆ ಪುಟಗಳನ್ನು ಓದಿದ್ದು. ಆದರೆ ಶಿವಸುಂದರ್ ಅಂಕಲ್ ಅವರ 'ಚಾರ್ವಾಕ' ಅಂಕಣ ಇನ್ನು ಮುಂದೆ ಪ್ರಕಟವಾಗುವುದಿಲ್ಲವೇ? ಈ ಪ್ರಶ್ನೆ ಯಾಕೆಂದರೆ ಅವರ ಪುಟದಲ್ಲೇ ಅಮ್ಮನ ಅಂಕಣ ಪ್ರಕಟಗೊಳ್ಳುತ್ತಿದೆ.

- ಯೋಗೀಶ್ ಸೂರಪ್ಪ, ತುಮಕೂರು



ಶಿವಸುಂದರ್ ಅವರು ಕೆಲ ವಾರಗಳ ಕಾಲ ರಜೆ ತೆಗೆದುಕೊಂಡಿರುವುದರಿಂದ ಅವರ 'ಚಾರ್ವಾಕ' ಪ್ರಕಟಗೊಳ್ಳುತ್ತಿಲ್ಲ. ಮುಂದಿನ ತಿಂಗಳಿಂದ ಅವರ ಜನಪ್ರಿಯ ಅಂಕಣ ಪ್ರಕಟಗೊಳ್ಳುತ್ತದೆ
- ಸಂ



ಶಿಸ್ತಿನ ಜೊತೆ ಅಶಿಸ್ತು!


ಮೊದಲ ಬಾರಿಗೆ ನಾಣಿ 'ರಂಗಾ'ಗಿದ್ದಾರೆ!

ಚಿತ್ರರಂಗದಲ್ಲಿ ಇತ್ತೀಚೆಗೆ ಸಿಕ್ಕಾಪಟ್ಟೆ ಬ್ಯುಸಿ ಇರುವ ...ೋಷಕ ಕಲಾವಿದ ರಂಗಾಯಣ ರಘು ಅವರಿಗೆ ಎಸ್. ...ರಾಯಣ್ ಅವರ ಬಗ್ಗೆ ಭಯಂಕರ ದಿಗಿಲಿತ್ತಂತೆ. ...ನಾರಾಯಣ್ ಜೊತೆ ಕೆಲಸ ಮಾಡುವುದು ಸಿಕ್ಕಾಪಟ್ಟೆ ...ಷ್ಟ. ಮನುಷ್ಯ ಭಾರೀ ಕಿರಿಕಿರಿ. ಕಲಾವಿದರು ...ತಂತ್ರವಾಗಿರಲು ಸಾಧ್ಯವಿಲ್ಲ. ಸ್ವಲ್ಪ ಹೆಚ್ಚುಕಮ್ಮಿ ಆದರೂ ...ರಾಯಿಸುತ್ತಾರೆ" ಎಂದು ಯಾರೋ ಅವರ ಕಿವಿ ...ಚ್ಚಿದ್ದರಂತೆ. ಅಂತೆಯೇ ನಾರಾಯಣ್ ಬಳಿಯೂ "ರಘು ...ಶಿಸ್ತಿನ ಮೂಟೆ. ಸರಿಯಾದ ಟೈಮಿಗೆ ಶೂಟಿಂಗ್‌ಗೆ ...ರೋದೇ ಇಲ್ಲ" ಎಂದೆಲ್ಲಾ ಆರೋಪಿಸಿದ್ದರಂತೆ. ...ೀಗಾಗಿ ರಂಗಾಯಣ ರಘು "ಇದೊಂದು ಸಿನಿಮಾದಲ್ಲಿ ...ಾಡ ಬಿಟ್‌ಬಿಡಿ" ಎಂದು ನಿರ್ಮಾಪಕ ಕೊಬ್ರಿ ಮಂಜು ...ವರಲ್ಲಿ ವಿನಂತಿಸಿದ್ದರಂತೆ. ಅದಕ್ಕೆ ಕೊಬ್ರಿ ಮಂಜು ...ೇನೂ ಆಗಲ್ಲ ಅಂದು ಮುಚ್ಕಂಡು ಬನ್ರೀ" ಎಂದು ...ಬ್ಬರಿಸಿದ್ದರಂತೆ. ಹೀಗಾಗಿ ರಘು ನಾರಾಯಣ್‌ರ 'ಶೈಲೂ' ...ನೆಮಾದಲ್ಲಿ ನಟಿಸಲು ಒಪ್ಪಿದರು.

ಆದರೆ ಈಗ ಪರಸ್ಪರ ಒಬ್ಬರ ಬಗ್ಗೆ ಒಬ್ಬರಿಗಿದ್ದ ...ಭಿಪ್ರಾಯ ಸುಳ್ಳು ಅನ್ನೋದು ಮನವರಿಕೆಯಾಗಿದೆ ...ಯಂತೆ. ಶೂಟಿಂಗ್ ಸ್ಪಾಟ್‌ನಲ್ಲಿ ಸದಾ ಬುಸುಗುಡುವ ...ಾಣಿ ಈ ಬಾರಿ ಸದಾ ಹಸನ್ಮುಖರಾಗಿ, ನಗುನಗುತ್ತಾ ...ದ್ದಾರಂತೆ. ಮೊದಲು ಬೆಳಗ್ಗೆ ಒಂಭತ್ತು ಗಂಟೆ ಒಳಗೆ ...ಾಯ್ಲೆಟ್ ಕಾರ್ಯ ಮುಗಿಯೋದಿಲ್ಲ ಎಂದು ಒದ್ದಾಡು ...ದ್ದ ರಂಗಾಯಣ ರಘು ಈಗ ಬೆಳಗ್ಗೆ ಆರಕ್ಕೇ ಎದ್ದು ...ತ್ಯಕರ್ಮಗಳನ್ನೆಲ್ಲ ಮುಗಿಸಿ ಆರೂವರೆಗೆಲ್ಲಾ ಶೂಟಿಂಗ್ ...ಾಟ್‌ಗೆ ಬರುತ್ತಾರಂತೆ.

ನಾರಾಯಣ್ ವಿರುದ್ಧ ಏನೇ ಆರೋಪವಿದ್ದರೂ, ...ಿಸ್ತಿನ ವಿಚಾರದಲ್ಲಿ ಈ ಮನುಷ್ಯನನ್ನು ತೆಗೆದು ...ಾಕುವಂತಿಲ್ಲ. ಬೆಳಗ್ಗೆ ಆರುಗಂಟೆಗೆ ಮೊದಲ ಶಾಟ್ ...ಗೆಯುವ ನಾಣಿ ಸಂಜೆ ಆರು ಗಂಟೆ ತನಕವೂ ಅದೇ ...ುರುಪಿನಿಂದಿರುತ್ತಾರೆ. ರಂಗಾಯಣ ರಘುರಂಥ ಪರಮ ...ೋಮಾರಿಯನ್ನು ಹೊತ್ತುಹುಟ್ಟುವ ಮುನ್ನವೇ ಎಬ್ಬಿಸಿದ ...ರ್ತಿ ಈಗ ನಾಣಿಗೆ ಸಂದಾಯವಾಗಿದೆ! ಘ್ಹಿ

ಡಬ್ಬಿಂಗ್ ವಿರುದ್ಧ ಕಿರುತೆರೆ ಕ್ರಾಂತಿ




ಇದಪ್ಪಾ ಎದೆಗಾರಿಕೆ ಅಂದ್ರೆ!


ಒಂದೆಡೆ ತೆಲುಗು ಮತ್ತು ತಮಿಳಿನ ಸಿನಿಮಾಗಳು ಡಬ್ ಆಗಿ ಬಿಡುಗಡೆಗೊಳ್ಳುತ್ತಿದ್ದರೂ ಚಿತ್ರರಂಗದವರು ಅದರ ವಿರುದ್ಧ ಒಗ್ಗಟ್ಟಿನಿಂದ ದನಿಯೆತ್ತುತ್ತಿಲ್ಲ. ಬದಲಿಗೆ ಚೇಂಬರ್‌ನಲ್ಲಿ ಅಧಿಕಾರ ಹಿಡಿದಿರುವವರೇ ಡಬ್ಬಿಂಗ್ ಸಿನಿಮಾಗಳನ್ನು ರಿಲೀಸ್ ಮಾಡಿ ತಮ್ಮ ಮನೆಗೆ ತಾವೇ ಕನ್ನ ಹಾಕುವ ದುರ್ಬುದ್ಧಿ ತೋರಿಸುತ್ತಿದ್ದಾರೆ. ಆದರೆ ಇನ್ನೊಂದೆಡೆ ಕನ್ನಡ ಕಿರುತೆರೆಯವರು ಈ ವಿಚಾರದಲ್ಲಿ ತಾವು ನಿಜಕ್ಕೂ ಗಟ್ಟಿಗರು ಎಂದು ತೋರಿಸಿಕೊಟ್ಟಿದ್ದಾರೆ.



ಈಗೀಗ ಡಬ್ಬಿಂಗ್ ಸಿನಿಮಾಗಳೇ ಮೆಲ್ಲಗೆ ಥಿಯೇಟರುಗಳಿಗೆ ನುಸುಳುತ್ತಿರುವಾಗ ತಾವೇಕೆ ಸುಮ್ಮನಿರಬೇಕು ಎಂದು ಭಾವಿಸಿದ ಝೀ ಟೀವಿಯವರು ಹಿಂದಿಯಲ್ಲಿ ನಿರ್ಮಾಣವಾಗಿದ್ದ 'ಝಾನ್ಸಿ ಕಿ ರಾನಿ' ಎಂಬ ಸೀರಿಯಲ್ಲನ್ನು ಯಥಾವತ್ತು ಕನ್ನಡಕ್ಕೆ ಡಬ್ ಮಾಡಲಾರಂಭಿಸಿದರು. ಸುಮಾರು ನಾಲ್ಕೈದು ತಿಂಗಳ ಹಿಂದೆಯೇ ಈ ವಿಷಯ ತಿಳಿದು ಬಂದು ಟೆಲಿವಿಜನ್ ಅಸೋಸಿಯೇಷನ್‌ನ ಮುಖ್ಯಸ್ಥರು ಝೀ ವಾಹಿನಿಯ ಮುಖ್ಯಸ್ಥರೊಂದಿಗೆ ಮಾತಾಡಿ "ಯಾವ ಕಾರಣಕ್ಕೂ ಡಬ್ಬಿಂಗ್ ಧಾರಾವಾಹಿ ಪ್ರಸಾರ ಮಾಡುವಂತಿಲ್ಲ" ಎಂದು ಖುದ್ದು ವಾರ್ನ್ ಮಾಡಿ ಬಂದಿದ್ದರು. ಇದಕ್ಕೆ ಒಪ್ಪಿದ ಝೀ ಟೀವಿಯ ನಾನ್ ಫಿಕ್ಷನ್ ಹೆಡ್ ಪರಮೇಶ್ವರ ಗುಂಡ್ಕಲ್ ಆದಿಯಾಗಿ ಎಲ್ಲರೂ "ಆಯ್ತು ಬಿಡಿ ಡಬ್ ಮಾಡಲ್ಲ" ಎಂದು ಅಸೋಸಿಯೇಷನ್‌ನವರಿಗೆ ಸಮಾಧಾನ ಮಾಡಿ ಕಳುಹಿಸಿದ್ದರು. ಆದರೆ ಮೊನ್ನೆ ಆಗಸ್ಟ್ 15ರ ಮಧ್ಯಾಹ್ನ ಒಂದೂವರೆ ಹೊತ್ತಿಗೆ ಈ ಧಾರಾವಾಹಿಯ ಪ್ರೋಮೋಗಳನ್ನು ಟೆಲಿಕಾಸ್ಟ್ ಮಾಡಲಾರಂಭಿಸಿದರು.



ಸಿನಿಮಾದವರಾದರೆ 'ನೀನು ಹೊಡೆದಂತೆ ಮಾಡು ನಾನು ಅತ್ತಂಗೆ ಮಾಡ್ತೀನಿ' ಎಂದು ಸುಮ್ಮನೇ ಛೇಂಬರ್‌ನಲ್ಲಿ ದೂರು, ಪ್ರತಿ ದೂರುಗಳನ್ನು ದಾಖಲಿಸಿಕೊಂಡು ಪ್ರಕರಣವನ್ನು ಎಳೆದಾಡುತ್ತಿದ್ದರೇನೋ? ಆದರೆ ಟೆಲಿವಿಜನ್ ಅಸೋಸಿಯೇಷನ್‌ನವರು ಹಾಗೆ ಕಾದು ಕೂರುವ ಉಸಾಬರಿಗೆ ಹೋಗಲೇ ಇಲ್ಲ. ಬಿ.ಸುರೇಶ, ರವಿಕಿರಣ್, ಕಲಾಗಂಗೋತ್ರಿ ಮಂಜು ಮುಂತಾದ ಕಿರುತೆರೆ ನಿರ್ದೇಶಕರ ಮುಂದಾಳತ್ವದಲ್ಲಿ ಸೀದಾ ಎಂಜಿ ರೋಡಿನಲ್ಲಿರುವ ಝೀ ಟೀವಿ ಆಫೀಸಿಗೇ ನುಗ್ಗಿ ಥೇಟು ಕ್ರಾಂತಿಕಾರಿ ಮಿಲಿಟೆಂಟುಗಳ ಹಾಗೆ ದಾಳಿ ಮಾಡಿದ್ದರು.



ಮೊದಲು ಚಾನೆಲ್‌ನವರನ್ನು "ನೀವು ಮಾಡಿದ್ದು ಸರಿನಾ?" ಎಂದು ಕೇಳುತ್ತಿದ್ದಂತೆ ಚಾನೆಲ್‌ನವರು ಅವರ ಮೂಗಿನ ನೇರಕ್ಕೆ ಮಾತಾಡಲು ಶುರು ಮಾಡಿದರು. "ನಮ್ಮಿಷ್ಟ. ನಮ್ಮ ಚಾನೆಲ್‌ನಲ್ಲಿ ಯಾವ ಕಾರ್ಯಕ್ರಮವನ್ನಾದರೂ ಪ್ರಸಾರ ಮಾಡುತ್ತೇವೆ.. ನಿಮಗೇನು" ಎಂದೆಲ್ಲಾ ತಿಮಿರು ತೋರಿದರು. ಅಸೋಸಿಯೇಷನ್ನಿನವರಿಗೆ ಅದೆಲ್ಲಿತ್ತೋ ಸಿಟ್ಟು ಝೀ ಟೀವಿಯ ಆಫೀಸಿನಲ್ಲಿದ್ದ ಕಂಪ್ಯೂಟರು, ಕುರ್ಚಿಗಳನ್ನು ಎತ್ತಿ ಬಿಸಾಡಿದರು, ಗಾಜುಗಳನ್ನು ಕುಟ್ಟಿ ಪುಡಿ ಮಾಡಿದರು. ಅಷ್ಟರಲ್ಲಿ ಅಶೋಕನಗರ ಪೊಲೀಸರು ಬಂದು ಪ್ರತಿಭಟನಾಕಾರರನ್ನು ಅರೆಸ್ಟು ಮಾಡಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಇದನ್ನು ಕಂಡು ತಬ್ಬಿಬ್ಬಾದ ಝೀ ಟಿವಿಯವರು ಇನ್ನು ಮುಂದೆ ಡಬ್ಬಿಂಗ್ ಧಾರಾವಾಹಿಯನ್ನು ಪ್ರಸಾರ ಮಾಡುವುದಿಲ್ಲ ಎಂದು ಭರವಸೆಯನ್ನು ನೀಡಿದರು.

ಡಬ್ಬಿಂಗ್ ಗಂಡಾಂತರ

ಇವತ್ತು ಝೀ ಟಿವಿಯವರು ಹಿಂದಿ ಧಾರಾವಾಹಿಯನ್ನು ಡಬ್ ಮಾಡಿ ಪ್ರಸಾರ ಮಾಡಿದರೆ, ನಾಳೆ ಉದಯ ಟೀವಿ ಚಾನೆಲ್‌ನವರೂ ತಾವೇನು ಕಮ್ಮಿ ಎಂದು ಸನ್ ಟಿವಿ ಎಂಬ ತಮಿಳು ಟಿವಿ ಚಾನೆಲ್‌ನಲ್ಲಿ ಪ್ರಸಾರವಾಗುವ ದಂಡಿದಂಡಿ ಧಾರಾವಾಹಿಗಳನ್ನೂ ಡಬ್ ಮಾಡುತ್ತಾರೆ. ಹಾಗೆಯೇ ಈಟಿವಿಯವರು ಕೂಡ ತೆಲುಗು ಮೆಗಾ ಸೀರಿಯಲ್ಲುಗಳನ್ನು ಕನ್ನಡೀಕರಿಸಿ ಟೆಲಿಕಾಸ್ಟ್ ಮಾಡೋದು ಗ್ಯಾರೆಂಟಿ.

ಮೊದಲೇ ಟಿಆರ್‌ಪಿ ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿರುವ ಕನ್ನಡ ಕಿರುತೆರೆ ಉದ್ಯಮ ಡಬ್ಬಿಂಗ್ ಧಾರಾವಾಹಿಗಳ ಬಾಯಿಗೆ ಸಿಕ್ಕಿಕೊಂಡರೆ ಸಂಪೂರ್ಣ ಜೀವ ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ. ಈ ಡಬ್ಬಿಂಗ್ ಧಾರಾವಾಹಿಗಳಿಂದ ಕನ್ನಡದ ಕಾರ್ಮಿಕರ ತಟ್ಟೆಗೆ ಮಣ್ಣು ಬಿದ್ದಂತಾಗುತ್ತದೆ. ಜೊತೆಗೆ ಧಾರಾವಾಹಿಗಳನ್ನೇ ನಂಬಿ ಬದುಕುತ್ತಿರುವ ಸಾವಿರಾರು ಕಿರುತೆರೆ ಕಲಾವಿದರು, ನೂರಾರು ನಿರ್ದೇಶಕರು, ತಂತ್ರಜ್ಞರು ಬೀದಿಗೆ ಬೀಳುತ್ತಾರೆ. ಇದೆಲ್ಲದರೊಂದಿಗೆ ಈ ನೆಲದ ಸಂಸ್ಕೃತಿಯೂ ಅಕ್ಷರಶಃ ನಾಶವಾಗುತ್ತದೆ.

ಈ ಎಲ್ಲದರ ಅರಿವು ಟೆಲಿವಿಜನ್ ಅಸೋಸಿಯೇಷನ್‌ನವರಿಗೆ ಇದ್ದದ್ದರಿಂದಲೇ ಮೊನ್ನೆ ದಾಳಿ ಮಾಡಿ ಡಬ್ಬಿಂಗ್ ಧಾರಾವಾಹಿಗಳಿಗೆ ಮೊದಲೇ ಎಚ್ಚರಿಕೆ ನೀಡಿದ್ದು.

• ಅರುಣ್


...ನಿಮ್ಮ ಪತ್ರಿಕೆಯ ಕಳೆದ ಸಂಚಿಕೆಯನ್ನು ಓದಿದೆ. ಅದರಲ್ಲಿ ಪ್ರಕಟವಾಗಿರುವ ...ೋನಿಯಾಗೆ ಕ್ಯಾನ್ಸರ್' ಎಂಬ ವರದಿಯ ಬರಹಗಾರರು ಆಕೆಯ ಬಗ್ಗೆ ...ಬಾ ಸಿಂಪಥಿಯನ್ನು ತೋರಿದ್ದಾರೆ.

...ಅಷ್ಟೇ ಅಲ್ಲ, ನಿಮ್ಮ ಪತ್ರಿಕೆ ಕಾಂಗ್ರೆಸ್ ಏಜೆಂಟ್‌ನಂತೆ ವರ್ತಿಸುತ್ತಿದೆ. ...ೃ ಸೋನಿಯಾರ ಅಳಿಯ ರಾಬರ್ಟ್ ವಾದ್ರ ಎಂಬಾತನ ಡಿಎಲ್‌ಎಫ್ ...ಬ ದೊಡ್ಡ ಭೂಹಗರಣದ ಬಗ್ಗೆ ಯಾಕೆ ವರದಿ ಪ್ರಕಟಿಸಿಲ್ಲ? ಅದನ್ನು ...ಡುವ ಬದಲಾಗಿ ಆಕೆಯ 'ಚಿಕಿತ್ಸೆ' ಬಗ್ಗೆ ಪ್ರಶ್ನಿಸಿರುವವರನ್ನೇ ಟೀಕಿಸಿದ್ದೀರಿ. ... ಯಾಕೆ ಭಾರತದಲ್ಲೇ ಚಿಕಿತ್ಸೆ ಪಡೆಯಲಿಲ್ಲ, ಹೇಳಿ. ಯಾಕೆಂದರೆ ಆಕೆ ...ದೇಶಕ್ಕೆ ಹೋಗಿರುವುದು ಚಿಕಿತ್ಸೆಗಳ, ಬದಲಾಗಿ ಸ್ವಿಸ್ ಬ್ಯಾಂಕುಗಳಲ್ಲಿ ...ಿರುವ ಕಪ್ಪು ಹಣವನ್ನು ಮುಚ್ಚಿಹಾಕಲು. ಇದು ಸತ್ಯ.

...ಅಂದಹಾಗೆ ನಿಮ್ಮ ಪತ್ರಿಕೆ ಕಾಂಗ್ರೆಸ್ ಪಕ್ಷದ ಏಜೆಂಟೋ ಅಥವಾ ...ೋನಿಯಾ ಗಾಂಧಿಯ ಏಜೆಂಟೋ? ನಿಮಗೆ ಅನ್ನಿಸಿದ್ದನ್ನೆಲ್ಲ ನಿಮ್ಮ ಪತ್ರಿಕೆಯಲ್ಲಿ ...ಟಮಾಡಬೇಡಿ.

... ನಿಮಗೂ, ನಿಮ್ಮ ಪತ್ರಿಕೆಗೂ ವಿದಾಯ.


- ನಾಗಿ ತಿಮ್ಮಯ್ಯ, ಈ ಮೇಲ್ ಮೂಲಕ



...ಇಡೀ ರಾಜ್ಯವನ್ನೇ ಬಹುರಾಷ್ಟ್ರೀಯ ಕಂಪನಿಗಳಿಗೆ ...ಪಿಟ್ಟ ಬಿಜೆಪಿ ಏನೆಲ್ಲಾ ಹೊಲಸು ಮಾಡಲು ...ದ್ದಿತ್ತೋ ಅಷ್ಟನ್ನು ಮಾಡಿ ಮುಗಿಸಿದೆ. ಹಣಮದ, ...ೋಳ್ಬಲದಿಂದ ಹೋರಾಟಗಳ ಟೊಂಕ ...ರಿದು ದರ್ಪದಿಂದ ಅಧಿಕಾರ ...ುತ್ತಿದೆ. ಮಠಗಳಿಗೆ ಕೋಟಿಗಟ್ಟಲೆ ... ಬಿಸಾಕಿ ಸ್ವಾಮೀಜಿಗಳನ್ನು ...ೋಲ್‌ಸೇಲಾಗಿ ಕೊಂಡುಕೊಂಡಿದೆ. ...ಿಪದ ರೋಗಿಸ ಸ್ವಾಮಿಗಳ ...ಯಲ್ಲಿ ಈಗ ಮಂತ್ರಿಮಹೋ ...ುರ ಜಪ. ಬಿಜೆಪಿ ತನಗೆ ಕೇಡುಗಾಲ ಬಂದಾಗ ಕಾವಿಗಳನ್ನು ಬಳಸಿಕೊಂಡು ಬಚಾವಾಗುತ್ತಿರುವುದು ಪ್ರಜಾಪ್ರಭುತ್ವದ ದುರಂತ.

ಕರ್ನಾಟಕದಲ್ಲಿ ವಿರೋಧ ಪಕ್ಷ ಅಂತ ಇದ್ದರೆ ಅದು 'ಗೌರಿ ಲಂಕೇಶ್ ಪತ್ರಿಕೆ' ಮಾತ್ರ. ಎಸಿಎಸ್‌ಎಫ್ ಎಂಬ ವಿದ್ಯಾರ್ಥಿ ಸಂಘಟನೆ ಆರಂಭಿಸಿರುವ 'ಭ್ರಷ್ಟಾಚಾರ ಮುಕ್ತ ರಾಜ್ಯಕ್ಕಾಗಿ ವಿದ್ಯಾರ್ಥಿ ಯುವ ಜನರ ಜಾಥಾ'ವನ್ನು ಬೆಂಬಲಿಸುವ ಮೂಲಕ ಹೊಸ ಹೋರಾಟಕ್ಕೆ ಪತ್ರಿಕೆ ನಾಂದಿ ಹಾಡಿರುವುದು ಸ್ವಾಗತಾರ್ಹ. ಪತ್ರಿಕೆ ಕೇವಲ ಪತ್ರಿಕೆಯಾಗಿರದೆ ಹೋರಾಟಗಳ ಚಿಲುಮೆಯಾಗಿರುವುದಕ್ಕೆ ಎಲ್ಲ ಪ್ರಗತಿಪರರ ಬೆಂಬಲ ಖಂಡಿತಾ ಇದೆ.

- ಬಸವರಾಜ ಹಳ್ಳಿ ಹುಮಕಲ್



ನಾನು ಇಂದಿರಾ ಲಂಕೇಶ್‌ರ ಮೊದಲ ಬರಹ ಓದಿದ್ದು ಜೂನ್ 2008 ರ 'ಉರಿದ ಉಲ್ಕೆ' ಪಿ. ಲಂಕೇಶರ ನೆನಪಿನ ಸಂಚಿಕೆ ಹೊರತಂದ 'ಮಯೂರ' ಮಾಸಪತ್ರಿಕೆಯಲ್ಲಿನ 'ಸ್ಕೂಟರ್ ದಿನಗಳು' ಎಂಬ ಲೇಖನ; ಆಗ, ಇಷ್ಟು ಚೆನ್ನಾಗಿ ತಮ್ಮ ಬದುಕನ್ನು ಕುರಿತು ಬರೆಯುವ ಇವರು ದೈತ್ಯ ಬರಹಗಾರ ಲಂಕೇಶರ ಪ್ರಭಾವವಿದ್ದಾಗ್ಯೂ ಯಾಕೆ ಇಷ್ಟು ಕಾಲ ಸುಮ್ಮನಿದ್ದರು ಎಂಬುದು ನಾನು ನನ್ನೊಳಗೇ ಕೇಳಿಕೊಂಡ ಬಹುದೊಡ್ಡ ಪ್ರಶ್ನೆ; ಧೈರ್ಯ, ಚೇಷ್ಟೆ, ಪ್ರೀತಿ, ಕುತೂಹಲ, ಹುಮ್ಮಸ್ಸು, ಅನುಮಾನ, ಅಪಮಾನ, ಸ್ವೀಕೃತ ಕಠಿಣ ವ್ಯವಸ್ಥೆಯೊಂದರ ಸವಾಲು, ಜಾತಿ, ಧರ್ಮ, ಯಾವುದಕ್ಕೂ ನಿಲುಕದ 'ಹುಳಿಮಾವಿನ ಮರ' ಓದಿಕೊಂಡು 'ಹೆಜ್ಜೆ ಇಡುತ್ತಿರುವ' ನಮಗೆ ಅದರ ಇನ್ನೊಂದು ಮಗ್ಗಲು ಲಂಕೇಶ್ ಬದುಕಿದಷ್ಟು ದಿನವೂ ಅವರ ಒಡನಾಟದ ವಿಪುಲ ರಾಶಿ 'ಹುಳಿಮಾವು ಮತ್ತು ನಾನು' ಮೂಲಕ ಇಂದಿರಾ ಲಂಕೇಶ್ ನಮ್ಮ ಮುಂದೆ ಬಿಚ್ಚಿಡುತ್ತಿರುವ ಸತ್ಯದ ಗೊಂಚಲು ಎಂದೇ ಮೊದಲ ಕಂತು ಓದಿದ ನನಗೆ ಅನ್ನಿಸಿ ಕುತೂಹಲ ಹುಟ್ಟಿಸಿದೆ. ಹಾಗಾಗಿ ಅವರ ಬರಹ 'ಹುಳಿಮಾವು ಮತ್ತು ನಾನು' ಎಂಬುದನ್ನೂ ಮೀರಿ ನಿರಂತರವಾಗಿ ಹರಿಯಲಿ ಎಂಬುದು ನನ್ನ ಬಯಕೆ.

-ಎಂ. ಜವರಾಜ್, ಬೈರಾಪುರ

ಮಾಜಿ ಲೋಕಾಯುಕ್ತ ನ್ಯಾಮೂ. ಸಂತೋಷ್ ಹೆಗ್ಡೆಯವರ ಬಗ್ಗೆ ತಮ್ಮ ಸಂಪಾದಕೀಯ ಓದಿ ಹೆಗ್ಡೆಯವರ ಬಗ್ಗೆ ಅಭಿಮಾನ ಇಮ್ಮಡಿಸಿತು.



ಕರ್ನಾಟಕ ಹೊರತುಪಡಿಸಿ ದಕ್ಷಿಣ ಭಾರತದ ಇತರ ಎಲ್ಲಾ ರಾಜ್ಯಗಳವರು ದೇಶದ ರಾಷ್ಟ್ರಪತಿ ಹುದ್ದೆ ಅಲಂಕರಿಸಿದ್ದಾರೆ. ತಮಿಳುನಾಡಿನಿಂದ ಇಬ್ಬರು (ರಾಧಾಕೃಷ್ಣನ್ ಮತ್ತು ಡಾ. ಕಲಾಂ), ಆಂಧ್ರದಿಂದ ಇಬ್ಬರು (ವಿ.ವಿ. ಗಿರಿ ಮತ್ತು ಸಂಜೀವ ರೆಡ್ಡಿ) ಕೇರಳ ಹಾಗೂ ಮಹಾರಾಷ್ಟ್ರದಿಂದ ಒಬ್ಬೊಬ್ಬರು (ನಾರಾಯಣನ್ ಮತ್ತು ಪ್ರತಿಭಾ ಪಾಟೀಲ್) ರಾಷ್ಟ್ರಪತಿಗಳಾಗಿದ್ದಾರೆ. ಹಾಗಾಗಿ ಮುಂದಿನ ರಾಷ್ಟ್ರಪತಿ ಸ್ಥಾನ ಕರ್ನಾಟಕದವರಿಗೇ ಸಿಗಬೇಕು. ಈ ಹುದ್ದೆಗೆ ಈಗ ಕರ್ನಾಟಕದಿಂದ ಅತ್ಯಂತ ಅರ್ಹ ವ್ಯಕ್ತಿಯೆಂದರೆ ಸಂ[illegible] ಹೆಗ್ಡೆ.

ಕಳೆದ ವರ್ಷ ಬೇಲೇಕೇರಿ ಕರ್ಮಕಾಂಡದ ವಿಷಯದಲ್ಲಿ ಲೋಕಾಯುಕ್ತ ಹುದ್ದೆಗೆ ಹೆಗ್ಡೆಯವರು ಬಹಿರಂಗಪಡಿಸಿದ್ದೇನೆಂದರೆ, 1977 ರಲ್ಲಿ ಜನತಾ ಪಾರ್ಟಿ ಅಧಿಕಾರಕ್ಕೆ ಬಂದಾಗ ಸಂತೋಷ್ ಹೆಗ್ಡೆಯವರ ತಂದೆ ಜಸ್ಟೀಸ್ ಕೆ. ಸದಾನಂದ ಹೆಗ್ಡೆಯವರ ಹೆಸರನ್ನು ರಾಷ್ಟ್ರಪತಿ ಸ್ಥಾನಕ್ಕೆ ಅಂತಿಮಗೊಳಿಸಲಾಗಿತ್ತು. ಆದರೆ ಆಗ ಸಂಜೀವ ರೆಡ್ಡಿ ಹಾಗೂ ಅವರ ಕೆಲವು ಸಹವರ್ತಿಗಳು ನಡೆಸಿದ ಪಿತೂರಿಯಿಂದಾಗಿ ಕೆ.ಎಸ್. ಹೆಗ್ಡೆ ಬದಲಿಗೆ ಸಂಜೀವ ರೆಡ್ಡಿ ರಾಷ್ಟ್ರಪತಿ ಸ್ಥಾನ ಪಡೆದುಕೊಂಡರಂತೆ. ಕರ್ನಾಟಕದವರಿಗೆ (ಕೆ.ಎಸ್. ಹೆಗ್ಡೆಯವರಿಗೆ) ಆಗ ತಪ್ಪಿದ ಅವಕಾಶ ಈಗ ಮಗನಿಗೆ ಸಿಗಲಿ ಎಂಬುದು ಎಲ್ಲಾ ಶುದ್ಧ ಮನಸ್ಸಿನ ಕನ್ನಡಿಗರ ಹಾರೈಕೆ.


-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು



ಡೈರೆಕ್ಟರ್ಸ್ ಸ್ಪೆಷಲ್‌ಗೆ ಹೀರೋ ರೆಡಿ!

'ಮಠ' ಖ್ಯಾತಿಯ ನಿರ್ದೇಶಕ ಗುರುಪ್ರಸಾದ್ ಒಂದೂವರೆ ವರ್ಷಕ್ಕೆ ಮುನ್ನ 'ಡೈರೆಕ್ಟರ್ಸ್ ಸ್ಪೆಷಲ್' ಎಂಬ ಸಿನಿಮಾವನ್ನು ಅನೌನ್ಸ್ ಮಾಡಿದ್ದರು. ಈ ಚಿತ್ರಕ್ಕೆ ಕೋಮಲ್ ಅವರನ್ನು ನಾಯಕನನ್ನಾಗಿಯೂ ಆಯ್ಕೆ ಮಾಡಿಕೊಂಡಿದ್ದರು.

ಇನ್ನೇನು ಶೂಟಿಂಗ್ ಆರಂಭಿಸಬೇಕು ಎನ್ನುವಷ್ಟರಲ್ಲಿ ಕೋಮಲ್ ಗುರುಪ್ರಸಾದ್ ವಿರುದ್ಧವೇ ಹೇಳಿಕೆ ನೀಡಿ "ಚಿತ್ರದಲ್ಲಿ ಕನ್ನಡ ಚಿತ್ರರಂಗದ ಕೆಲವು ನಿರ್ದೇಶಕರ ಬಗ್ಗೆ ಹೀಯಾಳಿಸುವಂಥ ಕತೆ ಮತ್ತು ಸಂಭಾಷಣೆ ಇದೆ. ಹೀಗಾಗಿ ನಾನು ಈ ಚಿತ್ರದಿಂದ ಹೊರಬರುತ್ತಿದ್ದೇನೆ" ಎಂದು ಘೋಷಿಸಿದ್ದರು. ಆದರೆ ಗುರುಪ್ರಸಾದ್ "ಕೋಮಲ್ ಹೋದರೇನಂತೆ? ಮತ್ತೊಬ್ಬ ನಾಯಕನನ್ನು ಹುಡುಕಿ ಸಿನಿಮಾ ಮಾಡುತ್ತೇನೆ" ಎಂದಿದ್ದರು. ಕೆಲತಿಂಗಳ ಹಿಂದೆ ಹೀರೋನೇ ಇಲ್ಲದೆ ಸಿನಿಮಾದ ಮುಹೂರ್ತವನ್ನೂ ನಡೆಸಿದ್ದರು. ಈಗ ಅಂತಿಮವಾಗಿ ಕೋಮಲ್ ಜಾಗಕ್ಕೆ ರಂಗಾಯಣ ರಘು ಆಯ್ಕೆಯಾಗಿರುವುದಾಗಿ ಸುದ್ದಿ ಹೊರಬಿದ್ದಿದೆ.



ಇವರು ನಿರ್ದೇಶಿಸಿದ ಎರಡು ಚಿತ್ರಕ್ಕೇ ಸಿಕ್ಕಾಪಟ್ಟೆ ಪಾಪ್ಯುಲಾರಿಟಿ ಪಡೆದಿರುವ ಗುರುಪ್ರಸಾದ್ ಮೂರನೇ ಚಿತ್ರದಲ್ಲಿ ಇನ್ನೆಷ್ಟು ಸುದ್ದಿ ಸೃಷ್ಟಿಸಿತ್ತಾರೋ ನೋಡಬೇಕು.

ಕೌರ್ಯಕ್ಕೆ ತ್ರಿ-ಡಿ ಎಫೆಕ್ಟ್!

ಹಿಂದೆ 'ಕಾಡಿನಲ್ಲಿ ಜಾತ್ರೆ' ಎಂಬ 3-ಡಿ ಸಿನಿಮಾವೊಂದು ಕನ್ನಡದಲ್ಲಿ ನಿರ್ಮಾಣವಾಗಿತ್ತು. ಇತ್ತೀಚೆಗಂತೂ 'ಅವತಾರ್' ಎಂಬ ಎಲ್ಲ ವಯೋಮಾನದವರೂ ನೋಡಬಹುದಾದ ಅದ್ಭುತ ತ್ರಿ-ಡಿ ಇಂಗ್ಲಿಷ್ ಸಿನಿಮಾ ಬಂದಿತ್ತು.



ಆದರೆ ಮೊದಲ ಬಾರಿಗೆ 'ಜೋಗಯ್ಯ' ಸಿನೆಮಾದಲ್ಲಿ ಕೌರ್ಯದ ವಿಜೃಂಭಣೆಗಾಗಿ 3-ಡಿ ಬಳಕೆಯಾಗಿದೆ. ತಮ್ಮ ಚಿತ್ರದ ಒಂದು ಹಾಡು ಮತ್ತು ಒಂದು ಮಾರಾಮಾರಿ ಫೈಟ್‌ಗೆ 3-ಡಿ ಎಫೆಕ್ಟ್ ಕೊಟ್ಟಿರುವುದರಿಂದ ನಿರ್ದೇಶಕ ಪ್ರೇಮ್ ತಾವು ಯಾರೂ ಮಾಡದ ಘನಂದಾರಿ ಕೆಲಸ ಮಾಡಿದವರಂತೆ ಬೀಗುತ್ತಿದ್ದಾರೆ.

3-ಡಿ ಕನ್ನಡಕವನ್ನು ಹಾಕಿಕೊಂಡು ಥಿಯೇಟರಿನಲ್ಲಿ ಕುಳಿತರೆ ನಾಯಕ ಶಿವರಾಜ್‌ಕುಮಾರ್ ಮೈಕೈಗೆ ರಕ್ತ ಮೆತ್ತಿಕೊಂಡು, ಎದುರಾಳಿಯನ್ನು ಕೊಚ್ಚಿ ಕೆಡವುತ್ತಿದ್ದರೆ ಅದು ನಮ್ಮ ಕಣ್ಣೆದುರೇ ನಡೆದಂತೆ ಭಾಸವಾಗುತ್ತಿರುತ್ತದೆ. ಕೌರ್ಯವನ್ನು ಈ ಪರಿ ವಿಜೃಂಭಿಸಲು 3-ಡಿ ತಂತ್ರಜ್ಞಾನದ ಅವಶ್ಯಕತೆಯಾದರೂ ಏನಿತ್ತು? ಇದನ್ನು ನೋಡುವ ಮಕ್ಕಳ, ವಯೋವೃದ್ಧರ ಮನಸ್ಸಿನ ಮೇಲೆ ಎಂಥಾ ಪರಿಣಾಮ ಬೀರುತ್ತದೆ? ಇದ್ಯಾವುದರ ಬಗ್ಗೆಯೂ ಪ್ರೇಮ್ ಚಿಂತಿಸಿದಂತೆ ಕಾಣುತ್ತಿಲ್ಲ.

ಗೂಟದ ಕಾರಿನಲ್ಲಿ ಜಗ್ಗೇಶ್ ಜಿಂಗಿಲಕ

ಇದು ನಟ ಜಗ್ಗೇಶನ ಅವಿವೇಕವೋ, ಪರಮಾಧಿಕಾರವೋ ಗೊತ್ತಿಲ್ಲ.

ಅರ್ಥಂಬರ್ಥ ರಾಜಕೀಯ ಮಾಡಿಕೊಂಡು ಜೊತೆಗೆ ಸಿನಿಮಾ ನಟನೆಯಲ್ಲೂ ತೊಡಗಿರುವ ಜಗ್ಗೇಶ್ ಈಗ ನಿರ್ಮಾಪಕ ಕೂಡ ಹೌದು.



ಸದ್ಯ ಕೆಎಸ್‌ಆರ್‌ಟಿಸಿಯ ವೈಸ್ ಛೇರ್ಮನ್ ಆಗಿರುವ ಜಗ್ಗೇಶ್ ಅಧಿಕಾರವನ್ನು ಅದ್ಯಾವ ಪರಿ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಗೊತ್ತೆ? ಇತ್ತೀಚೆಗೆ ಗುರುರಾಜ ಫಿಲಂಸ್ ಎಂಬ ಬ್ಯಾನರ್‌ಅನ್ನು ಹುಟ್ಟುಹಾಕಿರುವ ಜಗ್ಗೇಶ್ ಈಗ 'ಬಾಡಿಗಾರ್ಡ್' ಎಂಬ ರಿಮೇಕ್ ಸಿನೆಮಾವನ್ನು ನಿರ್ಮಿಸಿ ಅದರಲ್ಲಿ ಹೀರೋ ಆಗಿಯೂ ನಟಿಸುತ್ತಿದ್ದಾರೆ. ಈ ಚಿತ್ರದಲ್ಲಿ ಇಬ್ಬರು ನಾಯಕಿಯರು, ಒಬ್ಬಳು ಬಾಂಬೆಯಿಂದ ಬಂದ ಡೈಸಿ ಶಾ ಇನ್ನೊಬ್ಬಳು ಕನ್ನಡದವಳೇ ಆದ ಸ್ಫೂರ್ತಿ. ಈ ಇಬ್ಬರೂ ಚಿಣಮಿಣಕಿ ನಾಯಕಿಯರು ಈಗ ಸಾರಿಗೆ ಇಲಾಖೆಯ ಗೂಟದ ಕಾರಿನಲ್ಲೇ ಜೂಮ್ ಅಂತಾ ಓಡಾಡುತ್ತಿದ್ದಾರೆ ಎಂದರೆ ನಂಬಲೇಬೇಕು!



ಜಗ್ಗೇಶ್ ಈಗ ಕೆಎಸ್‌ಆರ್‌ಟಿಸಿಯ ನಾಲ್ಕು ಕಾರುಗಳನ್ನು ಬಳಸುತ್ತಿದ್ದು, ಒಂದರಲ್ಲಿ ಸ್ವತಃ ತಾವೇ ಓಡಾಡುತ್ತಿದ್ದಾರೆ. ಇನ್ನೊಂದು ಯೂನಿಟ್‌ಗೆ ಮತ್ತು ಮಿಕ್ಕೆರಡವನ್ನು ತಲಾ ಹೀರೋಯಿನ್‌ಗೆ ಒಂದರಂತೆ ಹಂಚಿಬಿಟ್ಟಿದ್ದಾರೆ. ಕನಿಷ್ಠಪಕ್ಷ ಈ ಸಿನಿಮಾ ನಲವತ್ತೈದು ದಿನಗಳ ಶೂಟಿಂಗ್ ನಡೆಸುತ್ತದೆ. ಬಾಡಿಗೆ ಕಾರಿಗೆ ದಿನವೊಂದಕ್ಕೆ ಮೂರು ಸಾವಿರ ರೂಪಾಯಿ ಖರ್ಚಾದರೂ ನಾಲ್ಕು ಕಾರುಗಳಿಗೆ ಐದೂವರೆ ಲಕ್ಷ ರೂಪಾಯಿಗಳ ಖರ್ಚಾಗುತ್ತಿತ್ತು. ಈಗ ಅದನ್ನು ಉಳಿಸಲು ಜಗ್ಗೇಶ್ ಇಲಾಖೆಯದ್ದೇ ಕಾರುಗಳನ್ನು ಯಾರ ಅನುಮತಿಯೂ ಇಲ್ಲದೆ ರಾಜಾರೋಷವಾಗಿ ಬಳಸುತ್ತಿದ್ದಾರೆ. ಅಷ್ಟೇ ಅಲ್ಲ, ಸಾರಿಗೆ ಇಲಾಖೆಯ ನಾಲ್ಕು ಜನ ಚಾಲಕರು ಈಗ 'ಬಾಡಿಗಾರ್ಡ್' ಸಿನಿಮಾದ ಯೂನಿಟ್ ಡ್ರೈವರುಗಳಾಗಿ ದುಡಿಯುತ್ತಿದ್ದಾರೆ.

ಈ ವಿಚಾರ ಖಾಸಗಿ ವಾಹಿನಿಯೊಂದಕ್ಕೆ ತಿಳಿದು ಅವರು ಕ್ಯಾಮೆರಾ ಸಮೇತ ಹೋಗಿ ಜಗ್ಗೇಶ್ ಮುಂದೆ ಮೈಕ್ ಹಿಡಿದು "ನಿಮ್ಮ ಚಿತ್ರಕ್ಕೆ ಸರ್ಕಾರಿ ಕಾರು ಬಳಸುತ್ತಿರುವುದು ನಿಜವಾ?" ಎಂದು ಕೇಳಿದ್ದೇ, ತಡಬಡಾಯಿಸಿದ ಜಗ್ಗೇಶ್ "ಇಲ್ಲಪ್ಪಾ, ನಮ್ಮ ಯೂನಿಟ್ ಕಾರು ಪಂಕ್ಚರ್ ಆಗಿ ಕೆಟ್ಟುಹೋಗಿತ್ತು. ಅದಕ್ಕೇ ಡಿಪಾರ್ಟ್‌ಮೆಂಟ್ ಕಾರಲ್ಲಿ ಡ್ರಾಪ್ ಮಾಡಿಸಿದೆ ಅಷ್ಟೇ. ನಿಮಗೆ ಯಾರೋ ರಾಂಗ್ ಇನ್ಫರ್‌ಮೇಶನ್ ಕೊಟ್ಟಾರೆ" ಎಂದು ರೀಲು ಸುತ್ತಲು ಆರಂಭಿಸಿದರು.

ಖಾಸಗಿ ವಿಚಾರಕ್ಕೆ ಇಲಾಖಾ ವಾಹನಗಳನ್ನು ಬಳಸಬಾರದು ಎಂದು ಗೊತ್ತಿದ್ದೂ ತಣ್ಣಗೆ ವಂಚಿಸುತ್ತಿರುವ ಜಗ್ಗೇಶ್‌ಗೆ ಅದೇನು ದರಿದ್ರ ಮೆಟ್ಟಿಕೊಂಡಿದೆಯೋ? ಬಿಟ್ಟಿ ಸಿಕ್ಕರೆ 'ನನಗೂ ಒಂದು ನಮ್ಮಪ್ಪನಿಗೂ ಒಂದು' ಅನ್ನೋ ಪೈಕಿಯ ಜಗ್ಗೇಶ್ ಸಿನಿಮಾ ಮುಗಿಯುವಷ್ಟರಲ್ಲಿ ಇನ್ನೂ ಏನೇನು ಓಸಿ ಫೆಸಿಲಿಟಿಗಳನ್ನು ಪಡೆಯುತ್ತಾರೋ ಗೊತ್ತಿಲ್ಲ...

ಗೈಡ್ ಪ್ರಕಾಶನದ
ಜಾಬ್ ನ್ಯೂಸ್
JOB NEWS
ಜಾಬ್ ನ್ಯೂಸ್
22 ಆಗಸ್ಟ್ 2011 ರಂದು
ಸೋಮವಾರ ಬಿಡುಗಡೆಯಾಗಲಿ
ಮುಂದಿನ ಸಂಚಿಕೆ
- 16595 ರೈಲ್ವೆ ಹುದ್ದೆಗಳು
- ಮೊರಾರ್ಜಿ ದೇಸಾಯಿ ರಾಣಿ ಚೆನ್ನಮ್ಮ ವಸತಿ ಶಾಲಾ ನೇಮಕಾತಿ ಪರೀಕ್ಷೆ ಸರಿ ಉತ್ತರಗಳು
ಪ್ರತಿಗಳಿಗಾಗಿ ಸಂಪರ್ಕಿಸಿ
ಗೈಡ್ ಪ್ರಕಾಶನ
ನಂ. 9, ಇ.ಎ.ಟಿ. ರಸ್ತೆ, ಬಸವನಗುಡಿ,
ಬೆಂಗಳೂರು-4 080-26676427
9880302817

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore